ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 1 ಸಂಚಿಕೆ 5

ಜುಲೈ 01, 2007

ಬೆಲೆ ರೂ. 5.00

ಸಿಹಿಕಬ್ಬಿನ ಕಹಿ ಕಥೆ



ನಂದಗುಡಿ SEZ ಎಂಬ ಲೂಟಿ ವಲಯ



ಪೇಜ್ 5

ಪಶ್ಚಿಮ ಬಂಗಾಳ





ವಿಶ್ವದಾಖಲೆಯ ಎಡರಂಗ ಸರ್ಕಾರ

ಪೇಜ್ 6

ಕಡಲ ಕೊರೆತಕ್ಕೆ ತಡೆ ಹೇಗೆ?



ಬಿಜೆಪಿ ಬಿಕ್ಕಟ್ಟು: ಉಪಶಮನ! ಉಲ್ಬಣ?



ಭ್ರಮಾಲೋಕಕ್ಕೆಳೆವ ಶಿವಾಜಿ



ಗಟ್ಟಿ ಚಿಂತನೆ, ಜನಪರ ಕಾಳಜಿ, ನಿಷ್ಠುರ ವ್ಯಕ್ತಿತ್ವದ ಪ್ರೊ. ರಾಮದಾಸ್ ಇನ್ನಿಲ್ಲ. ಜನ ಚಳುವಳಿಗಳ ನಡುವೆ ಸದಾ ತೊಡಗಿ ಸಂವಾದಿಸುತ್ತಿದ್ದ ಅವರ ಅಗಲಿಕೆಯ ಕೊರತೆ ತುಂಬುವುದು ಹೇಗೆ?

ವೈಚಾರಿಕ ಕಟ್ಟಡದ ಪ್ರಮುಖ ಆಧಾರ ಸ್ತಂಭವಾಗಿದ್ದ

ಪ್ರೊ. ರಾಮದಾಸ್ ಇನ್ನಿಲ್ಲ

ಮೊನ್ನೆ ಅಗಲಿದ ಪ್ರೊ: ರಾಮದಾಸ್‌ರವರನ್ನು ಕಂಡದ್ದು ಕಳೆದೆರಡು ತಿಂಗಳ ಹಿಂದೆ ಕೊಡಗಿನಲ್ಲಿ. ಡಿವೈಎಫ್‌ಐ ನೆಲ್ಯಾಹುದಿಕೇರಿಯಲ್ಲಿ ಸಂಘಟಿಸಿದ ಜಿಲ್ಲಾ ಯುವಜನರ ಶಿಬಿರದಲ್ಲಿ. ಶಿಬಿರದ ಉದ್ಘಾಟಕರಾಗಿ ಮಾತನಾಡಿದ ರಾಮದಾಸ್‌ರದ್ದು ಎಂದಿನಂತಿಯೇ ಖಡಕ್ ಭಾಷೆ-ವಸ್ತು-ವಿಷಯ. ಅವರು ಕೋಮುವಾದ ಮತ್ತು ಜಾಗತೀಕರಣದ ನಂಟುಗಳನ್ನು ಬಿಡಿಸಿಟ್ಟರು. ಸಾಂಸ್ಕೃತಿಕ ಪ್ರಭಾವಗಳನ್ನು,ಯುವಜನತೆ ವಹಿಸಬೇಕಾದ ಎಚ್ಚರ, ಹೋರಾಟದ ಹರವು ಬಗ್ಗೆ ಒತ್ತು ಕೊಟ್ಟರು.

ಹೋರಾಟಗಾರರ ನಡುವೆ

ಸಭೆ ಮುಗಿದ ಬಳಿಕ ನಡೆಯುವಾಗ ಸ್ವಲ್ಪ ಎಚ್ಚರವಾಗಿಯೇ, ಅದೂ ಪ್ರಯತ್ನ ಪೂರ್ವಕವಾಗಿಯೇ ಹೆಜ್ಜೆ ಇಡುತ್ತಿದ್ದಾರೆ ಎಂದನ್ನಿಸಿತು. ಕೇಳಿದಾಗ 'ಇಲ್ಲ ಇತ್ತೀಚಿಗೆ ನನಗೆ ಸ್ವಲ್ಪ ಅನಾರೋಗ್ಯ ಪರವಾಯಿಲ್ಲ' ಎಂದರು. ಆ ಹಿಂದಿನ ದಿನಗಳಲ್ಲಿ ಅವರು ಅನಾರೋಗ್ಯದಿಂದ ಮಲಗಿದ್ದರು. ಅವರ ಪತ್ನಿಯ ಆರೋಗ್ಯವೂ ಸರಿಯಿಲ್ಲವೆಂದು, ಅಲ್ಲೇ ಇರಬೇಕಾಗುತ್ತದೆ ಎಂದು ತಿಳಿಯಿತು. ಆದರೆ ಈ ಯುವಜನರ ಶಿಬಿರ ಎಂದಾಗ ಅವರು ನಿರಾಕರಿಸಲಿಲ್ಲ. ಪ್ರಗತಿಪರ ಯುವಜನ ಹೋರಾಟಗಾರರ ನಡುವೆ ಕಾಲ ಕಳೆಯಬೇಕೆನ್ನಿಸಿ ಒಪ್ಪಿ ಬಂದರು. ಅವರ ಆಗಮನ ಶಿಬಿರಾರ್ಥಿಗಳಲ್ಲಿ ಸ್ಫೂರ್ತಿ ತಂತು. ಅವರ ವಿದ್ಯಾರ್ಥಿಯಾಗಿದ್ದ ಶಿಷ್ಯ ಗ್ರಾಮಪಂಚಾಯತ್ ಅಧ್ಯಕ್ಷರಾದ ಡಿ.ಎಂ.ಲಿಂಗರಾಜ್‌ರವರು ಪೂರ್ಣ ಜೊತೆಗಿದ್ದು, 'ಗುರುಗಳ' ಜೊತೆ ಕ್ಷಣಗಳನ್ನು ಆಚರಿಸಿದರು. ನಾನು ನಿಮ್ಮ ವಿದ್ಯಾರ್ಥಿ ಎಂದಾಗ ಗುರುಗಳಿಗೆ ಸಂತೋಷ!

ಪ್ರೊ: ರಾಮದಾಸ್‌ರವರದ್ದು ಹಾಗೆಯೇ ನೇರ ನಡೆನುಡಿ. ಸಂಘರ್ಷದ ಸ್ವಭಾವ. ಪ್ರಗತಿಪರ ಚಳುವಳಿ ಚಿಂತನೆಗಳಲ್ಲಿ ತಮ್ಮನ್ನು ಸದಾ ತೊಡಗಿಸಿಕೊಂಡವರು. ಎಸ್.ಎಫ್.ಐ. ಮತ್ತು ಡಿವೈಎಫ್‌ಐ ಹಾಗೂ ಕೋಮುಸೌಹಾರ್ದತೆಯ ಅದೆಷ್ಟೋ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಿದ್ದಾರೆ! ಮೈಸೂರಿನಲ್ಲಿ ನಡೆದ ಬಹುತೇಕ ಚಳುವಳಿಗಳಲ್ಲಿ ರಾಮದಾಸ್‌ರು ಇಲ್ಲದ ಸಂದರ್ಭಗಳು ತೀರಾ ಕಡಿಮೆ ಎನ್ನಬಹುದು. ರಾಮದಾಸ್‌ರವರು ಖ್ಯಾತ ಲೇಖಕ ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿಯವರ ಅತಿ ನಿಕಟ ಗೆಳೆಯರು. ಈ ಮೂವರ ಹೆಸರು ಯಾವಾಗಲೂ ಒಟ್ಟಿಗೆ ನೆನಪಾಗುತ್ತಿತ್ತು. ಅವರ ಗೆಳೆತನವೂ ಹಾಗೆಯೇ. ಹಿಂದೆ ಲಂಕೇಶ್‌ರವರ ನೇತೃತ್ವದಲ್ಲಿ ಕರ್ನಾಟಕ ಪ್ರಗತಿರಂಗವನ್ನು ಆರಂಭಿಸಿದಾಗ ಅದನ್ನು ರೂಪಿಸುವಲ್ಲಿ, ನಂತರ ಕೆಲವು ವರ್ಷಗಳ ಕಾಲ ಮುಂದೊಯ್ಯಲು ಶ್ರಮಿಸಿದರು.

ರಾಮದಾಸ್‌ರವರು ಮೂಢನಂಬಿಕೆ, ಅಂಧಾನುಕರಣೆಗಳ ಕಡುವಿರೋಧಿ ಹಿಂದೊಮ್ಮೆ ಅವರ ನಿಕಟ ಗೆಳೆಯರಾಗಿದ್ದ ಮಾಜಿ ಸಚಿವ ಹೆಚ್.ವಿಶ್ವನಾಥ್‌ರವರು ದೇವಾಲಯದಲ್ಲಿನ ಕುರಿ ಬಲಿಯನ್ನು ಒಬ್ಬ ಸಚಿವನಾಗಿ ಸಮರ್ಥಿಸಿದಾಗ ಬಹಿರಂಗ ವಾಗ್ವಾದಕ್ಕೆ ಇಳಿದಿದ್ದರು. ಈ ವಾಗ್ವಾದ 'ರಾಮದಾಸ್' ರನ್ನು ಹುಚ್ಚ ಎಂದು ವಿಶ್ವನಾಥ್ ಕರೆಯುವವರೆಗೂ ಹೋಗಿತ್ತು. ಆದರೆ ಅವರು ನಿಲುವಿನಿಂದ ಹಿಂದೆ ಸರಿಯಲಿಲ್ಲ. ಗೆಳೆಯ ಸಿದ್ದರಾಮಯ್ಯ ಕಾಂಗ್ರೆಸ್‌ಗೆ ಸೇರುವಾಗಲೂ ಅವರ ವಿರೋಧವೇ. ಆಗಲೂ ಬಹಿರಂಗ ಟೀಕೆಯೇ.

ರಾಮದಾಸ್‌ರಿಗೆ ಸಂಘ ಪರಿವಾರದ ಕೋಮುವಾದಿ ಫಾಶಿಸ್ಟ್ ಆಕ್ರಮಣಗಳ ಅಪಾಯದ ಆಳವಾದ ಅರಿವಿತ್ತು. ಆದ್ದರಿಂದಲೇ ಅದರ ವಿರುದ್ಧದ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿದ್ದರು. ಬಾಬಾಬುಡನ್ ಗಿರಿಯಲ್ಲಿನ ಸೌಹಾರ್ದ ಪರಂಪರೆ ರಕ್ಷಿಸಲು ಆರಂಭಗೊಂಡ ಹೋರಾಟದಲ್ಲಿ ಅವರು ಪೂರ್ಣವಾಗಿ ತೊಡಗಿದ್ದರು. ಮುಂದೆ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯು ತನ್ನ ಘೋಷಿತ ಉದ್ದೇಶಕ್ಕಿಂತ ಮಾವೋವಾದಿ ನಕ್ಸಲೀಯರ ರಕ್ಷಣಾ ವೇದಿಕೆಯಾಗಿ ಅದರ ಉದ್ದೇಶಗಳ ಈಡೇರಿಕೆಗೆ ಕವಚವಾಗಿ ಬಳಕೆಯಾಗುತ್ತಿರುವುದನ್ನು ಅರಿತು ಅದರಿಂದ ದೂರ ಉಳಿದರು. ಆದರೆ ಕೋಮುವಾದದ ವಿರುದ್ಧ ಹೋರಾಟದಿಂದ ಹಿಂದೆ ಸರಿಯಲಿಲ್ಲ. ಇತ್ತೀಚಿಗೆ ಸೌಹಾರ್ದ ಕರ್ನಾಟಕ ಸಭೆ ಮೈಸೂರಿನಲ್ಲಿ ನಡೆದಾಗ ಸಭೆಯಲ್ಲಿ ಬಂದ ವಾದಗಳಿಗೆ ಅತ್ಯಂತ ಸಕಾರಣವಾಗಿ ಉತ್ತರಿಸಿ ಮಾವೋವಾದವನ್ನು ತಿರಸ್ಕರಿಸಿ ಸೌಹಾರ್ದತೆಯ ಹೋರಾಟವನ್ನು ಮುಂದೊಯ್ಯು ವುದನ್ನು ಪ್ರತಿಪಾದಿಸಿದರು. ಮಾತ್ರವಲ್ಲ. ಹಿಂದೂ ಕೋಮುವಾದ, ಮುಸ್ಲಿಂ ಮೂಲಭೂತವಾದಗಳು ಒಂದನ್ನೊಂದು ಬಳಸುವ, ಪೋಷಿಸುವ ಶಕ್ತಿಗಳು ಎಂದು ಸ್ಪಷ್ಟಪಡಿಸಿ, ಎರಡರ ವಿರುದ್ಧವೂ ಹೋರಾಟ ನಡೆಸಬೇಕೆಂದರು.

ಜಾತಿ ವ್ಯವಸ್ಥೆಯ ಹಾಗೂ ಅದರ ಕ್ರೌರ್ಯದ ವಿರುದ್ಧ ಅವರದು ಸದಾ ಸಮರ. ಅವರ ಮನೆ 'ಚಾರ್ವಾಕ' ನೂರಾರು ಅಂತರ್ಜಾತಿಯ ವಿವಾಹಗಳಿಗೆ ಸಾಕ್ಷಿಯಾಗಿದೆ.

ಇತ್ತೀಚಿಗೆ ನಡೆದ ಚಾಮುಂಡೇಶ್ವರಿ ಉಪ ಚುನಾವಣೆಯಲ್ಲಿ ಯಾರಿಗೆ ಬೆಂಬಲಿಸಬೇಕು ಎಂದೆಲ್ಲಾ ಚರ್ಚೆಯೊಂದು ಮೈಸೂರಿನಲ್ಲಿ ನಡೆಯಿತು (ಸೌಹಾರ್ದ ಕರ್ನಾಟಕದ ಸಭೆ ಬಳಿಕ). ಬಿಜೆಪಿಯನ್ನು ಸೋಲಿಸಲು ಕಾಂಗ್ರೆಸ್ ಮತ ನೀಡಬೇಕೆಂದು ಹಲವು ಗೆಳೆಯರು ಹೇಳಿದರು. ನಿಜ, ಬಿಜೆಪಿ-ಜೆಡಿ(ಎಸ್) ಮೈತ್ರಿ ಸೋಲಲೇಬೇಕು. ಆದರೆ ಬಿಜೆಪಿಗೆ ಕಾಂಗ್ರೆಸ್ಸೇ ಪರ್ಯಾಯವಲ್ಲ. ಕೋಮುವಾದದ ಬಗ್ಗೆ ಅದರದ್ದು ಚಂಚಲ ಸ್ವಭಾವ-ರಾಜೀ ಮನೋಭಾವ, ಬಿಜೆಪಿಯ ಬೆಳವಣಿಗೆಗೆ ಕಾಂಗ್ರೆಸ್‌ನ ವೈಫಲ್ಯಗಳು ಕಾರಣ-ಈ ಅಂಶಗಳನ್ನು ನೆನಪಿನಲ್ಲಿಟ್ಟು ನಾವು ತಾತ್ಕಾಲಿಕವಾಗಿ ಕಾಂಗ್ರೆಸ್‌ಗೆ ಬೆಂಬಲಿಸಬಹುದು ಎಂದರು. ಹೀಗೆ ಅವರ ರಾಜಕೀಯ ಚಿಂತನೆ, ಭಿನ್ನ ನಿಲುವು.

ಪ್ರೊ. ರಾಮದಾಸ್ ಮೈಸೂರಿನ, ಮಾತ್ರವಲ್ಲ ಕರ್ನಾಟಕದ ವೈಚಾರಿಕ ಸೌಧದ ಒಂದು ಮುಖ್ಯ ಆಧಾರ ಸ್ತಂಭ. ಅವರ ಅಗಲಿಕೆ ಆ ಸ್ಥಂಭ ಉರುಳಿದ್ದರ ದ್ಯೋತಕ. ಆ ಕೊರತೆಯನ್ನು ತುಂಬಬೇಕಿದೆ.

'ಜನಶಕ್ತಿ' ಪತ್ರಿಕೆಯನ್ನು ಹೊರ ತರಲು ನಡೆದಿರುವ ಸಿದ್ಧತೆಯನ್ನು ಕೊಡಗಿನಲ್ಲಿ ಜೊತೆಗಿದ್ದಾಗ ವಿವರಿಸಿದೆ. ಅವರು ಅತ್ಯಂತ ಆಸಕ್ತಿಯಿಂದ ವಿವರಗಳನ್ನೆಲ್ಲಾ ತಿಳಿದು, ಸಂತೋಷಗೊಂಡು ಹುರಿದುಂಬಿಸಿದರು. 'ಸಾರ್ ವಾರದ ಸಂದರ್ಶನಕ್ಕೆ ನಿಮ್ಮ ಇಂಟರ್‌ವ್ಯೂ ಬೇಕಲ್ಲ' ಎಂದಾಗ ನಕ್ಕು ಮೈಸೂರಿನಲ್ಲಿ ಸಿಗೋಣ ಎಂದರು. ಸಂಚಿಕೆ ಕಳಿಸಿ ಎಂದೂ ಹೇಳಿದರು. ಈ ನಡುವೆ ಅವರ ಸಂದರ್ಶನಕ್ಕೆ ಮೈಸೂರಿನ ಸಂಗಾತಿಗಳಾದ ಎಲ್.ಜಗನ್ನಾಥ್, ಸುಬ್ರಮಣ್ಯ, ನಾಗೇಶ್, ವಿಜಯಕುಮಾರ್ ಯತ್ನಿಸಿದರು. ಆದರೆ 'ಅನಾರೋಗ್ಯದಿಂದ ಚೇತರಿಸಿಕೊಳ್ಳುವೆ, ಹಾಸಿಗೆಯಿಂದ ಎದ್ದನಂತರ ನೋಡೋಣ' ಎಂದರು. ಆದರೆ ಮಲಗಿದವರು ಏಳಲಿಲ್ಲ. ಈಗಲೂ ಅವರ ವಾರದ ಸಂದರ್ಶನ ಖಾಲಿಯಾಗಿಯೇ ಉಳಿಯಿತು.

66 ವಯಸ್ಸಿನ ರಾಮದಾಸ್‌ರವರು ಕ್ಯಾನ್ಸರ್‌ನಿಂದ ನಿಧನರಾದರು.


- ಜೀ

ಶ್ರದ್ಧಾಂಜಲಿ

ಸಿಪಿಐ(ಎಂ)ನ ಹಲವಾರು ಹೋರಾಟಗಳಲ್ಲಿ ಸ್ವಯಂ ಸ್ಫೂರ್ತಿಯಿಂದ ಭಾಗವಹಿಸಿದ್ದ, ಸದ್ಯದ ರಾಜಕೀಯ ವ್ಯವಸ್ಥೆಯಲ್ಲಿ ಎಡಪಕ್ಷಗಳೇ ಜನರ ಆಶಾಕಿರಣ ಎಂದು ಮುಕ್ತವಾಗಿ ಘೋಷಿಸುತ್ತಿದ್ದ ಸಂಗಾತಿ ರಾಮದಾಸ್ ಅವರ ನಿಧನಕ್ಕೆ ಸಿಪಿಐ(ಎಂ) ಪಕ್ಷದ ಮೈಸೂರು ಜಿಲ್ಲಾ ಸಮಿತಿಯು ತನ್ನ ಹೃದಯಪೂರ್ಣ ಸಂತಾಪವನ್ನು ಅರ್ಪಿಸಿದೆ. ಹಾಗೂ ಹೋರಾಟದ ಪ್ರತಿ ಸಂದರ್ಭದಲ್ಲಿಯೂ ಅವರನ್ನು ಜ್ಞಾಪಿಸಿಕೊಳ್ಳುತ್ತದೆ ಎಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎನ್.ಎಸ್.ಪ್ರಭಾಕರ್ ಸಂತಾಪ ಸಲ್ಲಿಸಿದ್ದಾರೆ.

ಅಂತ್ಯಕ್ರಿಯೆಯಲ್ಲಿ ಜಿ.ಎಸ್

ರಾಮದಾಸ್‌ರ ಇಚ್ಛೆಯಂತೆ ಅವರ ಅಂತ್ಯಕ್ರಿಯೆ ಯಾವುದೇ ಧಾರ್ಮಿಕ ವಿಧಿ ವಿಧಾನಗಳಿಲ್ಲದೇ ನಡೆಯಿತು. ಈ ಅಂತ್ಯಕ್ರಿಯೆಯಲ್ಲಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಅಖಿಲ ಭಾರತ ಮಹಿಳಾ ಸಂಘಟನೆಯ ಪ್ರ.ಕಾರ್ಯದರ್ಶಿ ಕೆ.ಎಸ್.ವಿಮಲಾ ಭಾಗವಹಿಸಿದ್ದರು. ಜ್ಞಾನಪೀಠ ಪುರಸ್ಕೃತ ಡಾ:ಯು.ಆರ್. ಅನಂತಮೂರ್ತಿ, ಖ್ಯಾತ ವಕೀಲ ರವಿವರ್ಮಕುಮಾರ್ ಮುಂತಾದ ನೂರಾರು ಗೆಳೆಯರು ಭಾಗವಹಿಸಿದ್ದರು.



'ಜನಶಕ್ತಿ' - ಎಂಬ ಹೆಸರಿನ ಪತ್ರಿಕೆಯೊಂದು ಪ್ರಾರಂಭವಾಗುತ್ತಿರುವುದು ತುಂಬ ಸಂತೋಷದ ಸಂಗತಿಯಾಗಿದೆ. ಜನತೆಯಲ್ಲಿ ವೈಚಾರಿಕ ಎಚ್ಚರವನ್ನು ಹುಟ್ಟಿಸುವ ಕಾರ್ಯದಲ್ಲಿ ಈ ಪತ್ರಿಕೆ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ

— ಜಿ.ಎಸ್. ಶಿವರುದ್ರಪ್ಪ

14-6-07



ಉತ್ತಮವಾಗಿ ಮೂಡಿಬಂದಿದೆ

ಪತ್ರಿಕೆ ಉತ್ತಮವಾಗಿ ಮೂಡಿ ಬಂದಿದೆ, ಅವು-ಇವು ಟ್ಯಾಬ್ಲಾಯ್ಡ್ ನೋಡಿ ನೋಡಿ ಚಿಟ್ಟು ಹಿಡಿದಿದ್ದ ನನಗೆ ಒಂದು ಆರೋಗ್ಯಪೂರ್ಣ ಪತ್ರಿಕೆ ನೋಡಿ ಖುಷಿಯಾಯಿತು.

ಬಿ.ಎಂ.ಬಸವರಾಜ್, ಬಳ್ಳಾರಿ

★

ಸಾರ್, ದುಡಿಯೋ ಜನಗಳ ಬಗ್ಗೆ ಬರೆಯೋ ಪತ್ರಿಕೆ ಇದೆಯಲ್ಲಾ ಎಂದು ಹೆಮ್ಮೆಯಾಯ್ತು

ರಾಜೇಶ್, ಆಟೋಚಾಲಕ, ಬೆಂ.

★

ಡೊನೇಷನ್ ಬಗ್ಗೆ ಒಂದೊಂದು ಕಾಲೇಜ್‌ಗಳದ್ದು ಒಂದೊಂದು ಕಥೆ, ಹಣ ಇದ್ರೆ, ಶಿಕ್ಷಣ ಅಂತಾದ್ರೆ, ಬಡವರು ಏನು ಮಾಡ್ಬೇಕು... ಡೊನೇಷನ್ ಲೇಖನಕ್ಕೆ ಧನ್ಯವಾದಗಳು.

ಪ್ರದೀಪ, ದಾವಣಗೆರೆ

★

'ನಾನು ಒಬ್ಬ ವಿದ್ಯಾರ್ಥಿ ದಿಸೆಯಿಂದಲೂ 'ಐಕ್ಯರಂಗ' ಓದುತ್ತಾ ಇದ್ದವನು. ನನ್ನ ಪರಿಚಯಸ್ಥರ ಹತ್ತಿರ ನೀವೇ ಹೊರತಂದಿರುವ ಪತ್ರಿಕೆಯ ಬಿಡುಗಡೆ ಸಂಚಿಕೆ ನೋಡಿ ವಿಳಾಸ ಪಡೆದು ಈ ಪತ್ರ ಬರೆದಿದ್ದೇನೆ. ಸಂಪೂರ್ಣವಾಗಿ ಓದಿದೆ. ನನಗೆ ತುಂಬಾ ಮೆಚ್ಚುಗೆಯಾಗಿದೆ'.

ಕುಮಾರ್‌ಮಾದರ್,ತುಮಕೂರು

★

'ಜನಶಕ್ತಿ' ಈ ನಾಡಿನ ಶಕ್ತಿಯಾಗಲಿ ಬಡ ಜನರ, ಕೂಲಿ ಕಾರ್ಮಿಕರ, ಶೋಷಿತ ವರ್ಗದವರ ದನಿಯಾಗಿ ಹೊರ ಹೊಮ್ಮಲಿ, ಭ್ರಷ್ಟ ರಾಜಕೀಯ ಧುರೀಣರಿಗೆ ಸಿಂಹಸ್ವಪ್ನವಾಗಲಿ'

ಡಿ.ಎಂ.ಲಿಂಗರಾಜ್, ಅಧ್ಯಕ್ಷರು, ಗ್ರಾಮ ಪಂಚಾಯಿತಿ ತಿತಿಮತಿ, ಕೊಡಗು

★

'ಕನ್ನಡಗರಿಗೆ ಹೆಮ್ಮೆಯ ಪತ್ರಿಕೆ. ಜನಪರ ಕಾಳಜಿ, ರಾಜಕೀಯ ವಿಶ್ಲೇಷಣೆ, ಸಾಮಾಜಿಕ, ಸಮಸ್ಯೆಗಳಿಗೆ ಪರಿಹಾರದ ಹೊಣೆಯನ್ನು ಹೊತ್ತು ಪತ್ರಿಕೆ ಮುನ್ನಡೆಯಲಿ'

ಡಿ.ಎಲ್.ಸುರೇಶ್, ಹರಪನಹಳ್ಳಿ

★

'ಜನಶಕ್ತಿ ವಾರ ಪತ್ರಿಕೆ ಬರುತ್ತಿರುವುದು ನನಗೆ ಹೆಮ್ಮೆಯ ಸಂಗತಿಯಾಗಿದೆ. ಇದು ಬರಿಯ ಪತ್ರಿಕೆಯಾಗದೆ ನಮ್ಮ ಗುರಿ ಮುಟ್ಟಲು ಸಹಕಾರಿಯಾಗುತ್ತದೆ ಎಂದು ಆಶಿಸುವೆ'

ಸಂಗಮೇಶ್ ಮಾಕಪಾಳಿ, ವಿಜಾಪುರ

ಸಂಪಾದಕೀಯ...

ನರಹಂತಕ ಸಂತತಿಗೆ ಅಧಿಕಾರದ ಕೀಲಿಕೈ ಕೊಡಬೇಕೆ?

ಯಶವಂತಸಿನ್ಹಾ ಭೇಟಿ ಮತ್ತು ಶಾಸಕರು-ನಾಯಕರ ನಡುವೆ ನಡೆದಿವೆ ಎನ್ನಲಾದ ಒಪ್ಪಂದವು ಭಿನ್ನಮತಕ್ಕೆ ತಾತ್ಕಾಲಿಕ ಉಪ-ಶಮನ. ಇದು ಮುಂದೆ ನಡೆಯಲಿರುವ ದೊಡ್ಡ ಜಗಳದ ಆರಂಭ ಎನ್ನಬಹುದಷ್ಟೆ.

ಅಧಿಕಾರದ ರೊಟ್ಟಿ ತಮ್ಮ ಬಾಯಿಗೆ ಬೀಳಬೇಕೆಂದು ಬಾಯಿ ತೆರೆದು ಪರದಾಡುವ ಸ್ಥಿತಿಗೆ ಬಿಜೆಪಿ ನಾಯಕರು ಬಂದು ನಿಂತಿದ್ದಾರೆ. ಮುಖ್ಯಮಂತ್ರಿ ಯಾರಾಗಬೇಕು ಎಂಬುದಕ್ಕಿಂತ ಯಾರಾಗಬಾರದು ಎಂಬುದೇ ಬಿಜೆಪಿಯೊಳಗಿನ ವಿದ್ಯಾಮಾನಗಳಾಗಿ ಬಿಟ್ಟಿವೆ. ಬಿಜೆಪಿಯಲ್ಲಿನ ಭಿನ್ನಮತ, ಮತ್ತೆ ಸ್ಫೋಟಗೊಂಡು ಕೇಂದ್ರದ ಹೈಕಮಾಂಡ್‌ನಿಂದ ಯಶವಂತ ಸಿನ್ಹಾ ಶಮನಕ್ಕೆ ಧಾವಿಸಿದ್ದು, ಒಳಜಗಳದ ಪ್ರಮಾಣವನ್ನು ತೋರಿಸುತ್ತದೆ. ಮಾತ್ರವಲ್ಲ ಅದರ ಬಣ್ಣವನ್ನು ಬಯಲಿಗಿಟ್ಟಿದೆ. ತಾನೊಂದು ಇತರೆ ಯಾವುದೇ ಪಕ್ಷಗಳಂತಲೂ ಭಿನ್ನ, ಸ್ವಚ್ಛ ಪ್ರಾಮಾಣಿಕ ಎಂದೆಲ್ಲ ಸಾರುತ್ತಿದ್ದುದು ಕೇವಲ ಬೊಗಳೆಯೆಂಬುದು ಎಂದೋ ಸಾಬೀತಾಗಿದೆ. ಈಗ ಈ ನಾಟಕವನ್ನು ನೋಡುವ 'ದೌರ್ಭಾಗ್ಯ' ಕರ್ನಾಟಕದ ಜನತೆಗೆ ಒದಗಿದೆ. ಸಂದರ್ಭ ಸಿಕ್ಕಲ್ಲಿ ಯಾರು ತನ್ನನ್ನು ತಲುಪಲಾರದಷ್ಟು ಭ್ರಷ್ಟ, ದಿವಾಳಿ ಕೋರ ಎಂಬುದು ತೋರಿಸಿಯೂ ಬಿಟ್ಟಿದೆ.


ಮುಂದಿನ ಮುಖ್ಯಮಂತ್ರಿ ಯಡಿಯೂರಪ್ಪ ನವರಾಗಬೇಕೆಂಬುದಕ್ಕೆ ತೀವ್ರವಾದ ವಿರೋಧ ಬಿಜೆಪಿ ಪಕ್ಷದೊಳಗೆ ಇದೆ. ಮೊದಲಿನಿಂದಲೂ ಯಡಿಯೂರಪ್ಪ ಹಾಗೂ ಅನಂತಕುಮಾರ್ ಬಣಗಳೆರಡೂ ಸತತವಾಗಿ ಕಚ್ಚಾಡುತ್ತಾ ಬಂದಿರುವುದು ಜಗಜ್ಜಾಹೀರಾಗಿದೆ. ಯಶವಂತ ಸಿನ್ಹಾರವರೇ ಆಗಲಿ ಯಾರೇ ಆಗಲಿ, ಭಿನ್ನಮತ ಶಮನದ ಯತ್ನಗಳು ಕೇವಲ ತೇಪೆ ಹಚ್ಚುವ ವ್ಯರ್ಥ ಕಸರತ್ತು 'ಭಿನ್ನಮತವೇ ಇಲ್ಲ, ಯಡಿಯೂರಪ್ಪ ಮುಖ್ಯಮಂತ್ರಿ' ಎಂದು ದೆಹಲಿ ವಿಮಾನ ಹತ್ತಲು ಸಿದ್ಧಗೊಳ್ಳುವಾಗಲೇ ಕೆ.ಎಸ್. ಈಶ್ವರಪ್ಪ, ಜಗದೀಶ್ ಶೆಟ್ಟರ್ ಕಾರ್ಯಕಾರಣಿ ರಚನೆ ನೆಪದಲ್ಲಿ ಬಂಡಾಯದ ಸಿದ್ಧತೆ ಶಂಖ ಊದಿದ್ದು ಕದನ ಜಾರಿಯಲ್ಲಿರುವುದನ್ನು ತೋರಿಸುತ್ತದೆ.

ಈ ನಡುವೆ ದೇವೇಗೌಡರು ಬಿಜೆಪಿ ಅತೃಪ್ತಿ ಶಾಸಕ 'ಮುಖ್ಯಮಂತ್ರಿ' ಚಂದ್ರು ಮನೆಯಲ್ಲಿ ತಿಂಡಿಗೆ ಬಂದು ಅತಿಥ್ಯ ಸ್ವೀಕರಿಸಿ ಬೆನ್ನು ತಟ್ಟಿರುವುದು ಲಡಾಯಿಗೆ ಚಾಲನೆ ನೀಡಿದಂತಾಗಿದೆ. ಅಧಿಕಾರ ಹಸ್ತಾಂತರ ಸುತ್ತ ಲೆಕ್ಕಾಚಾರಗಳು ನಡೆಯಲು ಅವಕಾಶ ಕಲ್ಪಿಸಿದೆ. ಇದರಲ್ಲಿ ಕೆಲವು ಜಾತಿಗಳನ್ನು ಸೆಳೆಯುವ, ರಾಜಕೀಯ ಶಕ್ತಿ ಕ್ರೋಢೀಕರಿಸುವ ಇರಾದೆ ಇಲ್ಲದಿಲ್ಲ. ಯಶವಂತ ಸಿನ್ಹಾರವರು ಯಡಿಯೂರಪ್ಪನವರು ಮುಖ್ಯಮಂತ್ರಿ ಖಚಿತ ಎಂಬುದಾಗಲಿ, ಅಧಿಕಾರ ಹಸ್ತಾಂತರ ಖಚಿತವೆನ್ನುವ ದೇವೇಗೌಡರು, ಕುಮಾರಸ್ವಾಮಿಯವರ ಮಾತುಗಳಾಗಲೀ ಅಂತಿಮವೇನಲ್ಲ, ಮನದೊಳಗಿನ ಯೋಚನೆ ಹೇಗೆಂದು ಹೇಳಲಾಗದು, ಈಗ ಎಲ್ಲವೂ ಊಹಾಪೋಹಗಳ ತೇಲು ಲೋಕ. ಏನು ಹೇಳಿದರು ಎಂಬುದಕ್ಕಿಂತ ಏನು ಮಾಡಲಿದ್ದಾರೆ ಎಂಬುದು ಮುಖ್ಯ.

'ಚುನಾವಣೆಯಲ್ಲಿ ಜನ ಬಿಜೆಪಿಯನ್ನು ತಿರಸ್ಕರಿಸಿದರೂ ಅಧಿಕಾರ ಅನುಭವಿಸುವ ಹಡಗಿನಲ್ಲಿ ಹತ್ತಿಕೊಂಡಿದ್ದು ಬಿಜೆಪಿಯ ಸಂದರ್ಭ ಸಾಧಕತೆ, ಅಧಿಕಾರ ದಾಹಕ್ಕೆ ಸಾಕ್ಷಿಯಾಗಿತ್ತು. ಹೇಗೋ ಹೇಗೋ ದಕ್ಕುವ ಅಧಿಕಾರವನ್ನೇ ಬಳಸಿ ತನ್ನ ನೆಲೆಯನ್ನು ಭದ್ರಪಡಿಸಿ ಹೊಸ ಪ್ರದೇಶಗಳಿಗೆ ವಿಸ್ತರಿಸಲು ಹಂಚಿಕೆ ಹಾಕಿತು. ಈ ಅವಕಾಶವನ್ನು ತನ್ನ ಕೋಮುವಾದಿ ಫಾಶಿಸ್ಟ್ ಅಜೆಂಡಾದ ಜಾರಿಗೆ ಸಂಘ ಪರಿವಾರ ವಿವರವಾದ ಯೋಜನೆ ರೂಪಿಸಿ ಬಳಸಲು ರಾಜ್ಯದಲ್ಲಿ ಕೋಮು ಘರ್ಷಣೆ, ಮತ್ತು ಜಾತ್ಯಾತೀತ ಪರಂಪರೆ, ಸಂಪ್ರದಾಯಕ್ಕೆ ಆಘಾತಕಾರಿ ದಾಳಿ ಮಾಡಿತು. ಆಡಳಿತ ಯಂತ್ರವನ್ನೇ ತನ್ನ ದುರುದ್ದೇಶಕ್ಕೆ ಬಳಸಿದ್ದನ್ನು ಮಂಗಳೂರು, ಬೆಂಗಳೂರು, ಮುಂತಾದೆಡೆ ನೋಡಿಯಾಗಿದೆ. ಸಾರ್ವಜನಿಕ ಹಣವನ್ನು ಬಜೆಟ್ ಹೆಸರಿನಲ್ಲಿ ಮಠ ಮಾನ್ಯಗಳಿಗೆ, ಆರ್.ಎಸ್.ಎಸ್. ಕಾರ್ಯಕ್ರಮಗಳಿಗೆ ಹಂಚಿಕೊಂಡಿತು.ಬಾಬಾಬುಡನ್‌ಗಿರಿಯ ದರ್ಗಾ- ಪೀಠದ ಗುಹೆಯ ಬಗ್ಗೆ ನಡೆಯುತ್ತಾ ಬಂದ ವಿಶಿಷ್ಟ ಆಚರಣಾ ಪದ್ಧತಿಯ ಬಗ್ಗೆ ನ್ಯಾಯಾಲಯ ನೀಡಿದ್ದ ತೀರ್ಪನ್ನು ಮರು ಪರಿಶೀಲಿಸಿ ಹಿಂದೂ ಪದ್ಧತಿಗೆ ಮರಳಿಸಬೇಕೆಂದು ಸರ್ಕಾರ ಅರ್ಜಿ ಸಲ್ಲಿಸುವಂತೆ ಮಾಡಲಾಗಿದೆ. ಹಲವಾರು ಕೋಮುಗಲಭೆಗಳಲ್ಲಿ ತೊಡಗಿದವರ ಕೇಸ್‌ಗಳನ್ನು ಹಿಂತೆಗೆಯಲಾಗುತ್ತಿದೆ. ಆದ್ದರಿಂದ ಬಿಜೆಪಿಗೆ ಅಧಿಕಾರ ಯಾರಲ್ಲಿದ್ದರೂ ಅದರ ಕೀಲಿ ಮತ್ತು ಚಾಲಕ ಪಾತ್ರ ಸಂಘ ಪರಿವಾರದ್ದೇ ಆಗಿರುತ್ತದೆ. ಇದು ಸಂಭವಿಸಲು ಬಿಡಬೇಕೇ ಎಂಬುದೇ ಗಹನವಾದ ಪ್ರಶ್ನೆ.

ಅಧಿಕಾರ ಕೇಂದ್ರಿತ ಹಿತಾಸಕ್ತಿಗಳಿಂದ ಒಂದೊಮ್ಮೆ ಬಿಜೆಪಿಗೆ ಜೆಡಿ(ಎಸ್) ಅಧಿಕಾರ ವಹಿಸಿಕೊಟ್ಟರೆ ಅದು ಅತ್ಯಂತ ಅಪಾಯಕಾರಿಯಾದ ಕೆಲಸವಾಗುತ್ತದೆ. ಈಗಾಗಲೇ ಸರ್ಕಾರದಲ್ಲಿ ಭಾಗೀದಾರ ನಿರುವಾಗಲೇ ತನ್ನ ಕರಾಳ ಆಟಗಳನ್ನು ಬಿಜೆಪಿ ಆಟತೊಡಗಿದೆ. ಇನ್ನು ಪ್ರಮುಖ ಕೀಲಿಯೇ ಸಿಕ್ಕರೇ? ಕೋಮುವಾದಿ ಫಾಶಿಸ್ಟರು ಆಡಳಿತ ಯಂತ್ರವನ್ನೇ ಹಿಡಿದು ಆಳವಾಗಿ ಬೇರೂರಲು ತೊಡಗುತ್ತಾರೆ. ಇನ್ನೂ ಸೌಹಾರ್ದ ಶಾಂತಿಯಿಂದ ಇರುವ ಕರ್ನಾಟಕ ನರಹಂತಕ ಮೋದಿಯ ಗೂಡಾಗುವುದರಲ್ಲಿ ಅನುಮಾನವಿಲ್ಲ. ಅದಕ್ಕೆ ಬಿಡಬೇಕೇ ಎಂಬುದೇ ಈಗಿನ ಪ್ರಶ್ನೆ.


ಸಂಘ ಪರಿವಾರದ ತಾಳಕ್ಕೆ ಮೇಳ ಹಾಡಿದ ಸಚಿವ ಸಂಪುಟ



ಸಾರ್ವಜನಿಕವಾಗಿ ಅತ್ಯಂತ ಹೇಸಿಗೆ ಹುಟ್ಟಿಸಿದ ಬಿಜೆಪಿ ಶಾಸಕ ರೇಣುಕಾಚಾರ್ಯ ಮತ್ತು ನರ್ಸ್ ಜಯಲಕ್ಷ್ಮಿಯ ಪ್ರಕರಣದಲ್ಲಿ ರೇಣುಕಾಚಾರ್ಯನ ಮೇಲಿರುವ ಎಲ್ಲಾ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲು ಜೂನ್ 21ರಂದು ನಡೆದ ಸಂಪುಟ ಸಭೆ ನಿರ್ಧರಿಸಿರುವುದು ತೀವ್ರ ಖಂಡನೀಯ. ಪ್ರಕರಣ ಇನ್ನು ವಿಚಾರಣೆ ಹಂತದಲ್ಲಿದೆ. ಸಾರ್ವಜನಿಕ ವ್ಯಕ್ತಿಯ ಮೇಲೆ ಬಹಿರಂಗವಾಗಿ ಹಣಕಾಸು ಅವ್ಯವಹಾರ, ಲೈಂಗಿಕ ಕಿರುಕುಳ, ಕೊಲೆ ಬೆದರಿಕೆಯಂತಹ ಮೊಕದ್ದಮೆ ದಾಖಲಾಗಿರುವಾಗ ಅದರ ಕಾನೂನು ಬದ್ಧಕ್ರಮದ ಪ್ರಕ್ರಿಯೆಗೆ ಪೂರ್ಣವಕಾಶ ನೀಡಬೇಕಿತ್ತು. ಸತ್ಯ ಏನೆಂದು ಬಯಲಾಗಬೇಕಿತ್ತು. ಆದರೆ ಹಾಗಾಗದೇ ಕ್ರಿಮಿನಲ್ ಆರೋಪಿಯು ಆಡಳಿತ ಪಕ್ಷದವನೆಂಬ ಕಾರಣದಿಂದ, ಆತನನ್ನು ರಕ್ಷಿಸಲು ಸರ್ಕಾರವೇ ಮುಂದಾಗಿರುವುದು ನಾಚಿಕೆಗೇಡು. ತನ್ನ ಮೇಲೆ ಕೇಸ್ ಹೂಡದಂತೆ, ಆರೋಪಿಯನ್ನು ಬಂಧಿಸದಂತೆ ಇಂತಹುದೇ ಹಲವಾರು ಪ್ರಯತ್ನಗಳನ್ನು ಈ ಸರ್ಕಾರದ ಬಲ ಬಳಸಿ ಆರಂಭದಿಂದಲೂ ಮಾಡುತ್ತಾ ಬಂದಿದೆ.

ಇನ್ನೊಂದು ಗಮನಿಸಬೇಕಾದದೆಂದರೆ ಸಂಘ ಪರಿವಾರ ಚಿಕ್ಕಮಗಳೂರಿನಲ್ಲಿ ನಡೆಸಿದ ಗಲಭೆಗಳ ಕೇಸನ್ನು, ಹಾಗೆಯೇ ಕ್ರಿಶ್ಚಿಯನ್ ಪಾದ್ರಿ ಬೆನ್‌ಹಿನ್ ವಿರುದ್ಧ ನಡೆಸಿದ ದಾಂಧಲೆಯ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳಲಾಗಿದೆ. ಇದು ಕೋಮು ಘರ್ಷಣೆ ವಾತಾವರಣವನ್ನು ಬೆಳೆಸಲು ಪೂರಕ ನಿರ್ಧಾರವಾಗಿದೆ. ಉಳ್ಳಾಲದಲ್ಲಿ ಕೋಮುಗಲಭೆಗೆ ಕಾರಣವಾಗಿ ಅಪಾರ ಆಸ್ತಿ, ಸಾವು ಸಂಭವಿಸಿದ್ದ ಪ್ರಕರಣದ ರೂವಾರಿಗಳಾದ ಶಾಸಕ ಕುಂಬ್ಳೆ ಸುಂದರರಾವ್ ಮತ್ತಿತರ ಮೇಲೆ ಕೇಸ್ ಹಿಂತೆಗೆಯಲಾಗಿತ್ತು. ಅಂದರೆ ಸಾರ್ವಜನಿಕ ಹಾಗೂ ರಾಜ್ಯದ ಹಿತದೃಷ್ಟಿಯಿಂದ (ಜನಪರ ಹೋರಾಟಗಳ ಮೇಲೆ ಇತ್ಯಾದಿ) ಸರ್ಕಾರ ಹಾಕಿದ ಕೇಸ್‌ಗಳನ್ನು ಹಿಂತೆಗೆಯಬಹುದೆಂಬುದನ್ನು ಕಾನೂನು ವಿರೋಧಿ, ಸಂವಿಧಾನ ವಿರೋಧಿ ದ್ರೋಹಿಗಳ ಖುಲಾಸೆಗೆ ಬಳಸಲಾಗುತ್ತಿದೆ. ಇದು ಬಿಜೆಪಿ ಈ ಸರ್ಕಾರದಲ್ಲಿ ಪಾಲುಪಡೆಯುವುದರಿಂದಲೇ ಆಗುತ್ತಿವೆ. ಅದೂ 'ಸಮಾಜವಾದಿ' ಗೃಹ ಸಚಿವ ಎಂ.ಪಿ.ಪ್ರಕಾಶ್‌ರವರ ಸಮ್ಮುಖದಲ್ಲಿಯೇ?

ಇವೆಲ್ಲದಕ್ಕೂ ಅನಾಹುತಕಾರಿ ತೀರ್ಮಾನವೆಂದರೆ; ಬಾಬಾಬುಡನ್ ಗಿರಿಯ ದರ್ಗಾ-ಪೀಠದಲ್ಲಿ 1975ರ ಹಿಂದಿದ್ದ ಆಚರಣೆಗಳನ್ನು ಮಾತ್ರ ಅನುಸರಿಸಬೇಕೆಂಬ ಹೈಕೋರ್ಟ್ (ಸುಪ್ರೀಂಕೋರ್ಟ್) ತೀರ್ಪನ್ನು ಪ್ರಶ್ನಿಸಿ ಸರ್ಕಾರದ ಮುಜರಾಯಿ ಇಲಾಖೆ(ಬಿಜೆಪಿಯ ನಾಗರಾಜಶೆಟ್ಟಿ ಸಚಿವ) ವಿಭಾಗೀಯ ಪೀಠಕ್ಕೆ ಮನವಿ ಸಲ್ಲಿಸಿದೆ, ಹಿಂದೆ ಹಿಂದೂ ಸಂಪ್ರದಾಯದ ಪೂಜಾ ವಿಧಾನಗಳಿದ್ದವು-ಹೈದರಾಲಿ ಕಾಲದ ಹಿಂದೆಯೂ ಇತ್ತು ಎಂದೆಲ್ಲಾ ವಾದಗಳನ್ನು ಮಂಡಿಸುತ್ತಿದ್ದಾರೆ. ಸಂಘ ಪರಿವಾರದ ಅಜೆಂಡಾಕ್ಕೆ ಅನುಗುಣವಾಗಿಯೇ ಬಾಬಾ ಬುಡನ್‌ಗಿರಿಯ



ಬಾಬಾ-ದತ್ತ ಪರಂಪರೆಯ ನಾಶಕ್ಕೆ ಸರ್ಕಾರವನ್ನೇ ಬಳಸಲಾಗುತ್ತಿದೆ. ಇದಕ್ಕೆ ಪೂರಕವಾದ ವಾತಾವರಣ ಸೃಷ್ಟಿಸಿ-ಬುದ್ಧಿ ಜೀವಿಗಳ ವಲಯದಲ್ಲಿ ಗೊಂದಲ ವೆಬ್ಬಿಸಲು ಕಳೆದ ವಾರ 'ದರ್ಗವೋ-ದತ್ತ ಪೀಠವೋ' ಎಂಬ ಚರ್ಚೆಯನ್ನು ಏರ್ಪಡಿಸಲಾಗಿತ್ತು. ಅಲ್ಲಿ ಡಾ. ಚಿ.ಮೂ, ಬೈರಪ್ಪನವರಂತೆ ಸತ್ಯದ ಶೋಧನೆಯ ಹೆಸರಿನ ಬುಡಮೇಲು ಕೃತ್ಯವನ್ನು ಮುಂದುವರಿಸಿದ್ದರು. ಈ ಎಲ್ಲಾ ಸಂಗತಿಗಳು ಅತ್ಯಂತ ಗಂಭೀರವಾದವುಗಳು ಬಿಜೆಪಿಯೇ ಸರ್ಕಾರದ ಮೂಲಕವೇ ಉದ್ದೇಶ ಸಾಧಿಸಲು ಹೊರಟಿರುವುದನ್ನು ಜನತೆ ಗಂಭೀರವಾಗಿ ಪರಿಗಣಿಸಬೇಕು, ಹುನ್ನಾರ ನಿಲ್ಲಿಸಬೇಕು.

ಮುಖ್ಯಮಂತ್ರಿ ಹಿಂಗ್ಯಾಕಾಡ್ತಾರೋ

ಮುಖ್ಯಮಂತ್ರಿ ಕುಮಾರಸ್ವಾಮಿಯವರು ಈಗೀಗ ಮುಖ ಗಂಟಾಕಿಕೊಳ್ಳುವುದು, ಸಿಟ್ಟಿಗೇಳುವುದು ಹೆಚ್ಚುತ್ತಿದೆ. 'ಯಾವುದಕ್ಕೂ ಕೋಪಿಸಿಕೊಳ್ಳಬೇಡ ಕುಮಾರ' ಎಂದಿದ್ದ ಪಿತೃ ವಾಕ್ಯ ಪರಿಪಾಲಿಸದೇ ನಿಯಂತ್ರಣ ರೇಖೆ ಉಲ್ಲಂಘಿಸುತ್ತಿದ್ದಾರೆ. ನೀವೇ ನೋಡಿ! ರೈತರ ಆತ್ಮಹತ್ಯೆಗೆ ಕಾರಣಗಳನ್ನು ಪತ್ತೆ ಹಚ್ಚುತ್ತೇವೆಂದು ಬೆಂಗಳೂರಿಗೆ ಆಹ್ವಾನಿಸಲಾಗಿದ್ದ ರೈತ ಸಂಘದ ಕೆಲವು ನಾಯಕರಿಗೆ ಮಾತನಾಡುವ ಅವಕಾಶವೇ ಇಲ್ಲದಂತೆ ನೋಡಿಕೊಂಡರು. ವೇದಿಕೆಯು ಹೊಗಳಿಕೆಗೆ ಸೀಮಿತವಾಗಿತ್ತು. ಆತ್ಮಹತ್ಯೆಗೆ ಕಾರಣವಾದ ಕಹಿ ಸತ್ಯಗಳನ್ನು, ವಿಮರ್ಶೆಯನ್ನು ಕೇಳದಂತೆ ಕಿವಿ ಮುಚ್ಚಿಕೊಳ್ಳಲು ನಿರ್ಧರಿಸಿದ್ದರಿಂದ ಈ ಮುಖಂಡರ ಮೇಲೆ ಪೋಲೀಸರನ್ನು ಬಿಟ್ಟು ಹೊರದಬ್ಬಲಾಯಿತು. 'ಗುಂಪು ಕಟ್ಟಿಕೊಂಡು ಕೂಗಾಡುವವರಿಂದ ಕಲಿಯುವುದು ಏನಿಲ್ಲ ಎಂದು ತಮ್ಮ ಅಭಿಮಾನಿಗಳ ಸಭೆಯಾಗಿದ್ದ ಅಲ್ಲಿ ಮುಖ್ಯಮಂತ್ರಿಗಳು ಸಮಜಾಯಿಷಿ ನೀಡಿದರು.

ಮೊನ್ನೆ 18 ರಂದು ಬೆಂಗಳೂರಿನಲ್ಲಿ ವಶಪಡಿಸಿಕೊಳ್ಳಲಾದ ಭೂಕಬಳಿಕೆಯನ್ನು ಪತ್ತೆ ಮಾಡಲಾದ ಭೂಮಿಯನ್ನು ಹರಾಜು ಹಾಕಬೇಕು, ಸಾರ್ವಜನಿಕರ ಉದ್ದೇಶಕ್ಕೆ ಮೀಸಲಿಡಿ ಎಂದು ಸಿಪಿಐ(ಎಂ) ಹಾಗೂ ವಿವಿಧ ದಲಿತ ಸಂಘಟನೆಗಳು, ಇತರರು ಸೇರಿ ನಡೆಸಿದ ಹೋರಾಟವನ್ನು ರಾಜಕೀಯ ಪ್ರೇರಿತ ಎಂದು ಜರೆದರು. ನಂದಿಗ್ರಾಮದ ಬಗ್ಗೆ ಒಳ ಹೊರಗನ್ನು ಅರಿಯದೇ ಪತ್ರಿಕೆಯ ಅರ್ಧ ಸುದ್ದಿಯನ್ನು ಓದಿದ (ಅ) ಸಾಮಾನ್ಯನಂತೆ ಮಾತನಾಡಿ ಮುಖ್ಯಮಂತ್ರಿ ಎಂಬ ಹೊಣೆಗಾರಿಕೆ ಮರೆತರು. ಇನ್ನು ಅವರು ಹೇಳಿದ್ದು ಜನರನ್ನು ಸೇರಿಸಿ ಗದ್ದಲ ಹಾಕುವುದರಿಂದ ಕಲಿಯುವುದು ಏನಿಲ್ಲವೆಂದು.

ಅಹವಾಲುಗಳ ಹೊತ್ತು ಪರಿಹಾರ ಬಯಸಿ ಬರುವವರನ್ನು ಮುಖ್ಯಮಂತ್ರಿ ಕಾಣುವ ಪರಿಯೇ ಇದು. ಜನರ ಹೋರಾಟಗಳನ್ನು ಸಂಘಟಿಸುವುದನ್ನು ಗುಂಪು ಎಂದೂ, ಹೋರಾಟಗಾರರನ್ನು 'ಗದ್ದಲ ಎಬ್ಬಿಸುವವರೆಂದೂ ಜರಿಯುವುದು, ಎಂತಹ ಭಾಷೆ? ಭಾಷೆ ಹುಟ್ಟುವುದು ಮನದೊಳಗಣ ಭಾವನೆಗಳಿಂದ ಭಾವನೆಗಳು ಒಂದು ನೀತಿ ನಿಲುವಿನಿಂದ ಜನಪರ ಜನ ವಿರೋಧಿ ಎಂಬುದರಿಂದ. ಯಾರಿಂದ ಏನನ್ನು ಕಲಿಯಬೇಕಾದ ಅಗತ್ಯ ಅವರಿಗಿಲ್ಲವೇ? ಕುಮಾರಸ್ವಾಮಿಯವರ ಅಭಿಪ್ರಾಯ ಸರಿಯಿಲ್ಲ. ಯಾಕೆಂದರೆ ಅವರ ರಾಜಕೀಯವೂ ಸರಿಯಿಲ್ಲ.

ಇದ್ದದ್ದು ಇದ್ದಾಂಗ....

'ನಕ್ಸಲಿಸಂ ಕ್ಯಾನ್ಸರ್ ಇದ್ದಂತೆ, ಆದರೆ ಕೋಮುವಾದ ರೇಬೀಸ್'.

- ಡಾ.ಯು.ಆರ್.ಅನಂತಮೂರ್ತಿ

ಬೂಟಾಟಿಕೆ?

ನನ್ನ ವಿರುದ್ಧ ಕೂಟ ರಚಿಸಿಕೊಳ್ಳುವ ಅಗತ್ಯ ಅವರಿಗಿಲ್ಲ. ನಮ್ಮ ಗಮನ ಏನಿದ್ದರೂ 'ಅಭಿವೃದ್ಧಿ' ಕಡೆಗೆ. ಇದನ್ನು ಹೊರತುಪಡಿಸಿ ಯಾವುದೇ ಚಿಂತೆ ಮಾಡುತ್ತಿಲ್ಲ.

- ಯಡಿಯೂರಪ್ಪ

ಓತಿಕ್ಯಾತನಿಗೆ ಬೇಲಿ ಸಾಕ್ಷಿ


ಯಡಿಯೂರಪ್ಪರ ವಿರುದ್ಧವೇ ಸಭೆ ನಡೆದಿದೆ ಎನ್ನುವುದು ಮಾಧ್ಯಮಗಳ ಸೃಷ್ಟಿ

- ಡಿ.ಬಿ.ಸದಾನಂದಗೌಡ

ಆಹಾ! ಮುತ್ಸದ್ಧಿಯ ಮಹಾಶೋಧನೆ

.....ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು ಎಂಬ ತತ್ವವನ್ನು ಪಾಲಿಸದಿರುವುದು ಸಹ ಆತ್ಮಹತ್ಯೆಗೆ ಕಾರಣವಾಗುವ ಅಂಶಗಳಲ್ಲಿ ಒಂದು.

- ಎಂಪಿ.ಪ್ರಕಾಶ್, ಗೃಹಸಚಿವ



ಸಿ.ಯತಿರಾಜು

ಇದು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂಬ ಬೃಹತ್ ಹೊತ್ತಿಗೆಯ ಮತ್ತೊಂದು ಉಜ್ವಲ ಅಧ್ಯಾಯ

1857 ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

ಬಿಹಾರದ ಹೊರಗೆ ಕುವ್ವರ್‌ಸಿಂಗ್‌ನ ವ್ಯಾಪಕ ಬಂಡಾಯ

ಕುವ್ವರ್‌ಸಿಂಗ್ ಬಿಹಾರವನ್ನು ತೊರೆದು ಮಿರ್ಜಾಪುರ್, ರೇವಾ, ಬಾಂದಾ, ಲಕ್ನೋ ಮತ್ತು ಕಾನ್ಪುರಗಳಲ್ಲಿ ತನ್ನ ಬಂಡಾಯದ ಬಾವುಟವನ್ನು ಹಾರಾಡಿಸಿದ.

ಅಟ್ಟಾಡಿಸಿಕೊಂಡು ಕಾಡಿದ

ತನ್ನ ಜನರನ್ನು ಎಂತಹ ಕಠಿಣ ಪರಿಸ್ಥಿತಿಯನ್ನಾದರೂ ಎದುರಿಸುವಂತಹ ಸ್ಥಿತಿಯಲ್ಲಿ ಸನ್ನದ್ಧರಾಗಿರಿಸಿಕೊಂಡು ಬ್ರಿಟಿಷರನ್ನು ಅವರ ದುರ್ಬಲ ಸ್ಥಳಗಳಲ್ಲಿ ದಾಳಿ ಮಾಡಿ ಅವರನ್ನು ಪದೇ ಪದೇ ಕಾಡುವ ವಿನೂತನ ರಣತಂತ್ರವನ್ನು ಅನುಸರಿಸಿ ಅವರನ್ನು ಅಪಾರವಾಗಿ ಕಾಡಿದನು. ಅವನು ತನ್ನ ಹೋರಾಟವನ್ನು ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿರಿಸದೆ ರೇವಾ, ಬಾಂದಾ, ಕಲ್ಪಿ, ಕಾನ್ಪುರ್, ಲಕ್ನೋ, ಅಜಮ್‌ಪುರ್ ಮುಂತಾದ ಪ್ರದೇಶಗಳಲ್ಲೆಲ್ಲಾ ಬ್ರಿಟಿಷ್ ಪಡೆಗಳನ್ನು ಅಟ್ಟಾಡಿಸಿಕೊಂಡು ಕಾಡಿದನು. ಹೀಗೆ ನಿರಂತರವಾಗಿ ಕಾದಾಡುತ್ತಾ ಜಗದೀಶಪುರದಲ್ಲಿ ಮತ್ತೆ ತನ್ನನ್ನು ಪ್ರತಿಷ್ಠಾಪಿಸಿಕೊಂಡ. ಆದರೆ ಆಯರ್‌ನ ಪ್ರಬಲ ಬಲಿಷ್ಠ ದಾಳಿಯನ್ನು ತಾಳಿಕೊಳ್ಳಲಾಗದೆ ಜಗದೀಶಪುರವನ್ನು ಪುನಃ ತೊರೆಯಬೇಕಾಯಿತು. ಆದರೂ ಎದೆಗುಂದದೆ ಕುವ್ವರ್‌ಸಿಂಗ್ ತನ್ನ ಹೋರಾಟವನ್ನು ಮುಂದುವರಿಸಿದ. ಹೋರಾಡುತ್ತಾ, ತನ್ನ ಒಂದು ತೋಳನ್ನು ಕಳೆದುಕೊಂಡರೂ ಲೆಕ್ಕಿಸದೆ ಅದೇ ಕೆಚ್ಚಿನಿಂದ ಸ್ವಲ್ಪವೂ ವಿಚಲಿತನಾಗದೆ ತನ್ನ ಹೋರಾಟವನ್ನು ಮುಂದುವರಿಸಿದನು. ತಾನೂ ಮಾತ್ರವಲ್ಲದೇ ಇತರರನ್ನೂ ಹೋರಾಟಕ್ಕೆ ಪ್ರೇರೇಪಿಸಿ ಬ್ರಿಟಿಷರಿಗೆ ಅತ್ಯಂತ ಬಲಿಷ್ಠ ಹಾಗೂ ದೀರ್ಘ ಪ್ರತಿರೋಧ ಒಡ್ಡಿದ ಕೀರ್ತಿ ಕುವ್ವರ್‌ಸಿಂಗ್‌ಗೆ ಸಲ್ಲುತ್ತದೆ. ಚೋಟಾನಾಗ್‌ಪುರದ ಪ್ರಮುಖರು, ಸಂತಾಲ್ ಪರಗಣದ ಮುಖಂಡರುಗಳು ಕುವ್ವರ್‌ಸಿಂಗ್‌ನಿಂದ ಸ್ಫೂರ್ತಿ ಹೊಂದಿ ತಮ್ಮ ಬಲಿಷ್ಠ ಹೋರಾಟಗಳನ್ನು ರೂಪಿಸಿಕೊಳ್ಳಲು ಸಹಾಯಕವಾಯಿತು. ಶಸ್ತ್ರಾಸ್ತ್ರ ಸಜ್ಜಿತ, ಶಿಸ್ತುಬದ್ಧ ಆಂಗ್ಲ ಸೈನ್ಯವನ್ನು ಮೈದಾನ ಪ್ರದೇಶಗಳಲ್ಲಿ ಎದುರಿಸುವುದು ದುಸಾಧ್ಯವೆಂಬುದನ್ನು ಮನಗಂಡು ತನ್ನದೇ ಆದ ಗೆರಿಲ್ಲಾ ಯುದ್ಧ ತಂತ್ರವನ್ನು ಬಳಸಿ ಬ್ರಿಟಿಷ್ ಪಡೆಗಳನ್ನು ಅಪಾರವಾಗಿ ಕಾಡಿದನು. 'ನಾನಿರುವ ಪುರವೇ ಜಗದೀಶಪುರ' ವೆಂಬ ನಿಲುವನ್ನು ತಾಳಿದ ಕುವ್ವರ್‌ಸಿಂಗ್‌ಗೆ ರಣರಂಗವೇ ಅರಮನೆಯಾಯಿತು. ತನ್ನ ಈ ಹೋರಾಟಗಳಿಂದ ಬಿಹಾರದ ವಿಶಾಲ ಜನ ಸಮೂಹಗಳ ಮೇಲೆ ಅಗಾಧವಾದ ಪ್ರಭಾವವನ್ನು ಬೀರಿ ವಯೋವೃದ್ಧನಾದರೂ ಅತ್ಯಂತ ಚಾಣಾಕ್ಷತನದಿಂದ ಒಂಟಿ ಕೈಯಿಂದಲೇ ಹೋರಾಡುತ್ತಾ ಯುವ ಸೈನಕರಿಗೆ ಜನಸಾಮಾನ್ಯರಿಗೆ ವೀರಾವೇಶವನ್ನು ಸಾಂಕ್ರಾಮಿಕವಾಗಿ ಹರಡುತ್ತಾ ತನ್ನ ಜೀವಿತದ ಕೊನೆಯುಸಿರಿನವರೆಗೂ ಹೋರಾಡಿದ ವಿಶಿಷ್ಟ ರಣಕಲಿ ಕುವ್ವರ್‌ಸಿಂಗ್.

ಸೋದರ ಅಮರಸಿಂಗ್‌ನ ಪಾತ್ರ

ಕುವ್ವರ್‌ಸಿಂಗ್‌ನ ಮರಣಾನಂತರ ಅವನ ಸಹೋದರನಾದ ಅಮರ್‌ಸಿಂಗ್ ಮತ್ತವನ ಅನುಯಾಯಿಗಳು ಹೋರಾಟವನ್ನು ಮುಂದುವರಿಸಿ



ಈಸ್ಟ್ ಇಂಡಿಯಾ ಕಂಪನಿಗೆ ತೀವ್ರ ಆತಂಕವನ್ನುಂಟು ಮಾಡಿದರು. ಜಗದೀಶಪುರದ ಅರಣ್ಯ ಪ್ರದೇಶ ಅಮರಸಿಂಗ್‌ನ ಮಿಲಿಟರಿ ಕಾರ್ಯಾಚರಣೆಯ ಕೇಂದ್ರವಾಗಿತ್ತು. ಅಮರ್‌ಸಿಂಗ್ ಮತ್ತು ಬ್ರಿಟಿಷ್ ಪಡೆಗಳ ಮುಖಂಡ ಸರ್.ಈ ಲೂಗಾರ್ಡ್ ಅವರ ನಡುವಿನ 1858ರ ಪೂರ್ವಾರ್ಧದ ಹೋರಾಟ ಮಹಾಯುದ್ಧದ ಸ್ವರೂಪವನ್ನು ಹೊಂದಿತ್ತೆಂದು ಅನೇಕ ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. 1858ರ ಅಕ್ಟೋಬರ್‌ನಲ್ಲಿ ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್‌ಗೆ ಬರೆದ ಲೇಖನವೊಂದರಲ್ಲಿ ಏಂಗೆಲ್ಸ್ ಅಮರ್‌ಸಿಂಗ್ ಮಿಲಿಟರಿ ಬುದ್ಧಿ ಮತ್ತೆಯನ್ನು ವಿಶೇಷವಾಗಿ ಗಮನಿಸಿ ದಾಖಲಿಸಿರುವುದನ್ನು ಕಾಣಬಹುದಾಗಿದೆ. ಬಿದಿರು ಹಾಗೂ ಇತರ ಕೆಳಭಾಗಗಳಲ್ಲಿ ಹಬ್ಬುವ ಅರಣ್ಯಗಳನ್ನು ಅಮರ್‌ಸಿಂಗ್‌ನ ನೇತೃತ್ವದ ಬಂಡಾಯಪಡೆ ವಶಪಡಿಸಿ ಕೊಂಡಿದೆ. ಈ ಪಡೆ ಗೆರಿಲ್ಲಾ ಯುದ್ಧ ತಂತ್ರದ ಜ್ಞಾನ ಮತ್ತು ಚಟುವಟಿಕೆಗಳನ್ನು ಎಲ್ಲಾ ಹೋರಾಟದ ಘಟನೆಗಳಲ್ಲಿ ಬಿಂಬಿಸುತ್ತದೆ. ಬ್ರಿಟಿಷರಿಗೋಸ್ಕರ ಶಾಂತವಾಗಿ ಕಾಯದೇ ಸಾಧ್ಯವಾದಾಗಲೆಲ್ಲಾ ಅವರ ಮೇಲೆ ದಾಳಿ ಮಾಡುತ್ತದೆ. ಅವನನ್ನು ಈ ಸುಭದ್ರ ನೆಲೆಯಿಂದ ಹೊಡೆದೋಡಿಸುವ ಮುನ್ನ ಔದ್ ಬಂಡಾಯಗಾರರು ಅವರ ಜೊತೆ ಸೇರಿದರೆ ಬ್ರಿಟಿಷರು ಅವರನ್ನು ಮಣಿಸಲು ಅಪಾರ ಶ್ರಮಪಡಬೇಕಾದೀತು. ಈ ಕಾಡುಗಳು ಕಳೆದ ಎಂಟು ತಿಂಗಳಿಂದ ಬಂಡಾಯಗಾರರ ಅಡಗುತಾಣವಾಗಿದೆ. ಕಲ್ಕತ್ತಾದಿಂದ ಅಲಹಾಬಾದ್‌ವರೆಗಿನ ಬ್ರಿಟಿಷರ ಪ್ರಮುಖ ಸಂಚಾರಿ ಮಾರ್ಗವಾಗಿರುವ ಗ್ರಾಂಡ್ ಟ್ರಂಕ್ ರಸ್ತೆಯನ್ನು ಅವರು ತುಂಬಾ ಅಸುರಕ್ಷಿತಗೊಳಿಸಿದ್ದಾರೆ ಎಂದು ಹೇಳಿದ್ದಾರೆ. ಅಮರ್‌ಸಿಂಗ್‌ನ ಹೋರಾಟದಲ್ಲಿ ಏಂಗೆಲ್ಸ್ ಬಂಡಾಯದ ಮುಂದುವರಿಕೆಯ ಭರವಸೆಯನ್ನು ಕಾಣುತ್ತಾರೆ.

ನಾನಾ ಸಾಹೇಬ ನೇಪಾಳಕ್ಕೆ ಜಾರಿಕೊಂಡ ನಂತರ ಅಮರ್‌ಸಿಂಗ್ ಅವನ ಪಡೆಗಳಿಗೆ ನಾಯಕತ್ವ ನೀಡಲು ಮೈದಾನ ಪ್ರದೇಶಕ್ಕೆ ಬರಬೇಕಾಗುತ್ತದೆ. 1859ರ ಡಿಸೆಂಬರ್‌ನಲ್ಲಿ ಅಮರ್‌ಸಿಂಗ್ ಬ್ರಿಟಿಷರಿಗೆ ಸೆರೆ ಸಿಕ್ಕುತ್ತಾನೆ. ಅವನನ್ನು ಗೋರಖ್‌ಪುರದಲ್ಲಿ ಸೆರೆಮನೆ ವಾಸದಲ್ಲಿಟ್ಟಾಗ ವಿಚಾರಣೆಗೆ ಗುರಿಪಡಿಸುವ ಮುನ್ನವೇ ಖಾಯಿಲೆಗೆ ಬಲಿಯಾಗಿ 1860 ಜನವರಿ 3 ರಂದು ಬ್ರಿಟಿಷರ ಖೈದಿಯಾಗಿ ಮರಣ ಹೊಂದುತ್ತಾನೆ.

ಎರಡು ವರ್ಷಗಳ ಹೋರಾಟ

ಪಾಟ್ನಾದಲ್ಲಿ ಪೀರ್ ಅಲಿಯಿಂದ ಆರಂಭವಾದ ಬಿಹಾರದ ಜನತಾ ಬಂಡಾಯ ಕುವ್ವರ್‌ಸಿಂಗ್ ಮತ್ತವನ ಸಂಗಾತಿಗಳ ಧೀರೋದ್ದಾತ ಹೋರಾಟ ಭಾರತದ ಪ್ರಪ್ರಥಮ ಸ್ವಾತಂತ್ರ್ಯ ಹೋರಾಟದ ಅತ್ಯಂತ ನಿರ್ಣಾಯಕ ಹೋರಾಟ. ಅದು ಕೇವಲ ಪದಚ್ಯುತಗೊಂಡ ದೇಶಿಯ ಅರಸ ತನ್ನ ಸಾಮ್ರಾಜ್ಯ ಮತ್ತು ಸಿಂಹಾಸನವನ್ನು ಮರಳಿ ಪಡೆಯುವ ಒಂದು ಪ್ರಯತ್ನ ಮಾತ್ರವಾಗದೆ ಒಂದು ವಿಶಾಲ ಸ್ವರೂಪದ ಹೋರಾಟವಾಗಿ ಬ್ರಿಟಿಷರನ್ನು ಸುಮಾರು 2 ವರ್ಷಗಳವರೆಗೆ ಕಾಡಿತು. ಕುವ್ವರ್‌ಸಿಂಗ್ ಬಿಹಾರ ಮತ್ತು ಉತ್ತರ ಪ್ರದೇಶದಲ್ಲಿ ವಿವಿಧ ಜನ ವಿಭಾಗಗಳ ಆಶೋತ್ತರಗಳ ಪ್ರತಿರೂಪವಾದ. ಸೈನಿಕರು, ಜಮೀನ್ದಾರರು, ಅರಸು ಮನೆತನದವರಲ್ಲದ ಅನೇಕ ಜನ ವಿಭಾಗಗಳು ಈ ಬಂಡಾಯದಲ್ಲಿ ಅತ್ಯಂತ ಸ್ಫೂರ್ತಿದಾಯಕ ರೀತಿಯಲ್ಲಿ ಹೋರಾಡಿದರು. ಅನೇಕ ಅರಣ್ಯ ಪ್ರದೇಶಗಳ ಬುಡಕಟ್ಟು ಜನ ವಿಭಾಗಗಳು ಗಣನೀಯ ಪ್ರಮಾಣದಲ್ಲಿ ಈ ಹೋರಾಟಗಳಲ್ಲಿ ಭಾಗವಹಿಸಿದ್ದು ಒಂದು ವಿಶೇಷ. ವಸಾಹತುಶಾಹಿ ಆಳ್ವಿಕೆಯಿಂದ ಅಪಾರ ತೊಂದರೆಗೆ ಸಿಲುಕಿದ್ದ ಜನ ವಿಭಾಗಗಳನ್ನು ಈ ವಸಾಹತುಶಾಹಿ ವಿರೋಧಿ ಹೋರಾಟದಲ್ಲಿ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡು ಈ ಹೋರಾಟಕ್ಕೆ ಒಂದು ವಿಶಿಷ್ಟ ರೂಪವನ್ನು ನೀಡಿದವು. ○

ಕ್ಯಾತೆ

ನೇರ ಪ್ರಸಾರವೂ, ತಾಂತ್ರಿಕ ತೊಂದರೆಯೂ...

ಇತ್ತೀಚೆಗೆ ಟಿ.ವಿ. ಚಾನೆಲ್‌ಗಳು ಜಾಸ್ತಿಯಾಗಿ, ತೋರಿಸಲು ಕಾರ್ಯಕ್ರಮಗಳಿಲ್ಲದೆ (ಜನಪರ ಕಾರ್ಯಕ್ರಮಗಳನ್ನು ಮಾಡಲು ಮನಸ್ಸಿಲ್ಲದೆ) ಸಿನಿಮಾ ತಾರೆಗಳ, ಕೋಟ್ಯಾಧಿಪತಿ ಉದ್ಯಮಿಗಳ ಮದುವೆಯನ್ನು ನೇರ ಪ್ರಸಾರ ಮಾಡುತ್ತಿವೆ. ಜನ ತುಂಬಾ ಕುತೂಹಲದಿಂದ(?) ಮದುವೆಯ ನೇರ ಪ್ರಸಾರ ನೋಡ್ತಾ... ನೋಡ್ತಾ, ಕೆಲವರಿಗೆ ಮದುವೆಯ ಮುಂದಿನ 'ಕಾರ್ಯ'ದ ನೇರ ಪ್ರಸಾರ ಇರಬಹುದೇ ಅಂತ ಕುತೂಹಲವಾಗಿ ಕಾಯುತ್ತಿದ್ದಿರಬಹುದು. ಜನ ಬಯಸುವುದನ್ನೇ ನೀಡುವುದು ಮಾಧ್ಯಮಗಳ ಕರ್ತವ್ಯವಲ್ಲವೇ? ಅದಕ್ಕಾಗಿ ಚಾನಲ್‌ನವರು ಎಲ್ಲ ವ್ಯವಸ್ಥೆ ಮಾಡಿಕೊಂಡಿದ್ದರು. ಆದರೆ ಕೆಲವು 'ತಾಂತ್ರಿಕ ಕಾರಣಗಳಿಂದಾಗಿ 'ಅದು' ನೇರ ಪ್ರಸಾರವಾಗಿಲಿಲ್ಲವಂತೆ. ಆದರೆ ಅಂಥ ಕುತೂಹಲಿಗಳಿಗಾಗಿ ಅದರ ಸ್ಕ್ರಿಪ್ಟ್ (ನಮಗೆ ಅಕಸ್ಮಾತ್ ಸಿಕ್ಕಿದೆ) ಇಲ್ಲಿ ನೀಡುತ್ತಿದ್ದೇವೆ.

ಸ್ಟುಡಿಯೋ ರಾಣಿ: ಹಲೋ ರಿಪೋರ್ಟರ್ ರಾಜ ನೀವೆಲ್ಲಿದ್ದೀರಿ?

ರಿಪೋರ್ಟರ್ ರಾಜ: ಸ್ಟುಡಿಯೋ ರಾಣಿ ಅವ್ರೇ, ನಾವೀಗ ಸಿನಿಮಾ ನಕ್ಷತ್ರಗಳು ಹಾಗೂ ಈಗ ನವ ದಂಪತಿಗಳಾಗಿರುವವರು ಮಧುಚಂದ್ರ ಆಚರಿಸಲಿರುವ ರೆಸಾರ್ಟ್‌ನಲ್ಲಿದ್ದೇವೆ.

ಸ್ಟು. ರಾಣಿ: ಹೇಳಿ ರಿ. ರಾಜ ಅಲ್ಲಿಯ ವಾತಾವರಣ ಹೇಗಿದೆ?

ರಿ. ರಾಜ: ಇಲ್ಲಿ ರೆಸಾರ್ಟ್‌ನಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ(?) ಎಲ್ಲರೂ ತಮ್ಮದೇ ಮಧುಚಂದ್ರವೇನೋ ಎಂಬ ಉತ್ಸಾಹದಲ್ಲಿದ್ದಾರೆ...

ಸ್ಟು. ರಾಣಿ: ರಿ. ರಾಜ ಅವರೇ....ಹಲೋ..

ರಿ.ರಾಜ : ಹಲೋ...ಹಲೋ..

ಸ್ಟು. ರಾಣಿ: ರಿ. ರಾಜ ಅವ್ರೇ ಅದೇನು ಬಹಳ ಗದ್ದಲ?

ರಿ.ರಾಜ : ರಾಣಿ ಅವ್ರೇ, ಇದೀಗ ನವದಂಪತಿಗಳು ಆಗಮಿಸುತ್ತಿರೋದ್ರಿಂದ ಬಹಳ ಸಂಭ್ರಮದ ವಾತಾವರಣ ಇದೆ. ದಂಪತಿಗಳು ಹೊಚ್ಚ ಹೊಸ ಕಾರಿನಿಂದ ಇಳಿತಾ ಇದ್ದಾರೆ....

ಸ್ಟು ರಾಣಿ: ನವದಂಪತಿಗಳು ಹೇಗೆ ಬರ್‍ತಿದಾರೆ?



ಅಂದ್ರೆ, ಪರಸ್ಪರ ಕೈ ಹಿಡಿದುಕೊಂಡು ಬರ್‍ತಿದಾರೋ ಇಲ್ಲ......

ರಿ.ರಾಜ: ಹೌದು ರಾಣಿ ಅವ್ರೇ, ಅವರಿಬ್ರೂ ಒಬ್ಬರ ಕೈಯನ್ನು ಒಬ್ಬರು ಗಟ್ಟಿಯಾಗಿ ಹಿಡ್ಕೊಂಡು ಬರ್‍ತಿದ್ದಾರೆ. ಅವರಿಬ್ರ ಮಧ್ಯೆ ಬಹಳ ಪ್ರೀತಿ ಇರೋ ಹಾಗೆ ಕಂಡು ಬರ್‍ತಾಯಿದೆ...

ಸ್ಟು.ರಾಣಿ: ರಾಜ ಅವ್ರೇ, ನವದಂಪತಿಗಳ ಲಗೇಜ್ ಯಾರು ಹಿಡ್ಕೊಂಡಿದ್ದಾರೆ?

ರಿ.ರಾಜ : ನವದಂಪತಿಗಳ ಲಗೇಜನ್ನು ರೆಸಾರ್ಟ್‌ನ ಪರಿಚಾರಕರು ಹಿಡ್ಕೊಂಡು ಬರ್‍ತಿದ್ದಾರೆ. ಲಗೇಜು ಜಾಸ್ತಿಯೇನೂ ಕಂಡು ಬರ್‍ತಾಯಿಲ್ಲ. ಆದ್ರಿಂದ ನವ ದಂಪತಿಗಳು ಈ ರೆಸಾರ್ಟ್‌ನಲ್ಲಿ ಹೆಚ್ಚು ದಿನ, ಐ ಮೀನ್ ಹೆಚ್ಚು ರಾತ್ರಿಯನ್ನು ಇಲ್ಲಿ ಕಳೆಯೋ ರೀತಿ ಕಂಡು ಬರ್‍ತಾಯಿಲ್ಲ....

ಸ್ಟು. ರಾಣಿ: ರಾಜ ಅವ್ರೇ ಲಗೇಜ್ ವಿಚಾರ ಇರ್‍ಲಿ. ನೀವು ನವದಂಪತಿಗಳ ಬಗ್ಗೆ ಹೇಳಿ.

ರಿ. ರಾಜ: ನವದಂಪತಿಗಳು ಇದೀಗ ತಾನೇ ರೆಸಾರ್ಟ್‌ಗೆ ಹೋಗ್ತಾಯಿದ್ದಾರೆ... ಹೋಗ್ತಾಯಿದ್ದಾರೆ.. ಆ ದಂಪತಿಗಳಿಬ್ರು ಕೋಣೆಯೊಳಗೆ ಹೋಗಿ ಬಾಗ್ಲು ಹಾಕಿಕೊಂಡ್ರು.

ಸ್ಟು. ರಾಣಿ: ರಾಜ ಅವ್ರೇ ಆ ಕೋಣೆಯೊಳಗೆ ಸುಮಾರುಎಷ್ಟು ಜನ ಇರಬಹುದು?

ರಿ. ರಾಜ: ರಾಣಿ ಅವ್ರೇ ಬಹಳಷ್ಟು ಜನರ ಅಭಿಪ್ರಾಯದ ಪ್ರಕಾರ ಕೋಣೆಯೊಳಗೆ ಅವರಿಬ್ರೇ ಇರಬಹುದು. ಅವರು ಚಿಲಕ ಹಾಕಿಕೊಂಡಂತೆ ಕಂಡು ಬರ್‍ತಾಯಿದೆ...

ಸ್ಟು ರಾಣಿ: ರಾಜ ಅವ್ರೇ ಕೋಣೆಯೊಳಗಿಂದ ಏನಾದ್ರು ಶಬ್ದ ಕೇಳಿ ಬರ್‍ತಾ ಇದ್ಯಾ?

ರಿ.ರಾಜ: ಕೋಣೆಯೊಳಗಿನಿಂದ ಇಬ್ಬರ ಗೊರಕೆ ಸದ್ದು ಕೇಳಿ ಬರ್‍ತಾಯಿದೆ. ಸ್ಟುಡಿಯೋ ರಾಣಿ ಅವ್ರೇ ರಾತ್ರಿ ಬಹಳವಾಗಿದೆ. ನೀವು ಮನೆಗೋಗಿ ಮಲಿಕ್ಕೊಳ್ಳಿ. ನಾನು ರಿಪೋರ್ಟರ್ ರಾಜ. ಕ್ಯಾಮರಮನ್ ಕಾಮಣ್ಣನ ಜತೆ ಇಲ್ಲೇ ಕಾಯ್ತಾ ಇರ್‍ತೀನಿ. ಗುಡ್ ನೈಟ್....

■ ವಿ.ಶ್ರೀನಿವಾಸ್, ಶಿವಮೊಗ್ಗ

ಜನಶಕ್ತಿ ಕನ್ನಡ ವಾರಪತ್ರಿಕೆ

ರಿಯಲ್ ಎಸ್ಟೇಟ್ ದಂಧೆಗೆ ರಹದಾರಿ ತೆರೆಯುವ ಈ ಸ್ವರೂಪದ ವಿಶೇಷ ಆರ್ಥಿಕ ವಲಯ ಬೇಕೆ? ಸರ್ಕಾರದ ಭೂಮಿ ಇದ್ದಾಗಲೂ ರೈತರ ಜಮೀನು ಕಿತ್ತುಕೊಳ್ಳಬೇಕೆ? ಇಲ್ಲಿ ಕೈಗಾರಿಕೆ ಯಾವುದು ಬರುವುದೆಂದು ಯಾರಿಗೂ ಗೊತ್ತಿಲ್ಲವೆಂದರೆ ಅರ್ಥವೇನು? ಚೀನಾದ, ಪಶ್ಚಿಮ ಬಂಗಾಳದ ಎಸ್‌ಇಝಡ್‌ಗಳ ಬಗೆಗೆ ತಪ್ಪು ಪ್ರಚಾರ ನಡೆಸಿ ಸರ್ಕಾರ ಹೊಣೆಯಿಂದ ತಪ್ಪಿಸಿಕೊಳ್ಳಬಹುದೇ? ಏನು ನಡೆದಿದೆ ಇಲ್ಲಿ.

ಹೊಸಕೋಟೆಯಲ್ಲೊಂದು ವಿಶೇಷ ಭೂಮಿ ಲೂಟಿ ವಲಯ

ಭಾರತದಲ್ಲಿ ಇಂದು ಭೂಮಿಯನ್ನು ಬಾಚಿಕೊಳ್ಳುವುದಕ್ಕಾಗಿ ಒಂದು ನೂಕುನುಗ್ಗಲು ನಡೆದಿದೆ. ಕಂಪನಿಗಳ ಮೇಲೆ ಕಂಪನಿಗಳು ಪೈಪೋಟಿಯ ಮೇಲೆ ಭೂಮಿಯನ್ನು ಆಕ್ರಮಿಸಿಕೊಳ್ಳಲು ಒಂದು ಭಾರಿ ಸಂಚನ್ನೇ ನಡೆಸಿದ್ದಾರೆ. ಇದಕ್ಕೆ ವಿಶೇಷ ಆರ್ಥಿಕ ವಲಯವೆಂದು ಹೆಸರು ನೀಡಿದ್ದಾರೆ. ವಿಶೇಷ ಆರ್ಥಿಕ ವಲಯಗಳನ್ನು ಚೀನಾದ ಅನುಭವದ ಆಧಾರದ ಮೇಲೆ ಭಾರತದಲ್ಲಿ ಜಾರಿಗೆ ತಂದಿರುವುದಾಗಿಯೂ ಬೊಗಳೆ ಹೊಡೆಯುತ್ತಿದ್ದಾರೆ. ಜನರಿಗೆ ಮೋಸ ಮಾಡುವುದೇ ಆದರೆ ಚೀನಾದ ಹೆಸರಿನ ರಕ್ಷಣೆ ಬೇರೆ ಬೇಕು ಇವರಿಗೆ. ಅಧಿಕಾರದಲ್ಲಿ ಉಳಿಯಲು 'ಸಮಾಜವಾದ' ಎಂಬ ಭ್ರಮೆಯನ್ನು ಸೃಷ್ಟಿಸಿದಂತೆ (ಚೀನಾದ ಮಾದರಿಯ ವಿವರಗಳಿಗೆ ಬಾಕ್ಸ್ ನೋಡಿ).

ಆಚಂದ್ರಾರ್ಕ ಮಾಲಿಕತ್ವ

ಭಾರತದಲ್ಲಿಯೂ ಚೀನಾದ ಮಾದರಿಯಲ್ಲಿಯೇ ವಿಶೇಷ ಆರ್ಥಿಕ ವಲಯಗಳನ್ನು ಸ್ಥಾಪಿಸುವುದಾದರೆ ಅದಕ್ಕೆ ಸಿಪಿಐ(ಎಂ) ಪಕ್ಷದ ವಿರೋಧವೇನಿಲ್ಲ. ಆದರೆ ಭಾರತದಲ್ಲಿ ವಿಶೇಷ ಆರ್ಥಿಕ ವಲಯವನ್ನು ಖಾಸಗಿಯವರು ಯಾರು ಭೂಮಿಕೊಂಡು ಅಭಿವೃದ್ಧಿಪಡಿಸಿ ತಾವೇ ಆ ಚಂದ್ರಾರ್ಕವಾಗಿ (ಚಂದ್ರ ಸೂರ್ಯರಿರುವವರೆಗೂ) ಅದರ ಮಾಲೀಕರಾಗುತ್ತಾರೆ. ಅದರಲ್ಲಿ ಕೈಗಾರಿಕೆಗಳು, ತಂತ್ರಜ್ಞಾನ ವಿಶೇಷ ಯಾವ ಪ್ರಶ್ನೆಯೂ ಇಲ್ಲ. ಅವರು ಹೋಟೇಲ್, ರೆಸಾರ್ಟ್, ಆಸ್ಪತ್ರೆ ಏನು ಬೇಕಾದರೂ ನಿರ್ಮಿಸಬಹುದು. ಹೀಗಾಗಿ ಭಾರತದಲ್ಲಿ ಈಗಾಗಲೇ 300 ಕ್ಕೂ ಹೆಚ್ಚು ವಿಶೇಷ ಆರ್ಥಿಕ ವಲಯಗಳಿಗೆ ಅನುಮತಿ ನೀಡಲಾಗಿದೆ. ಇನ್ನೂ ನೂರಾರು ಸಾಲು ಗಟ್ಟಿ ನಿಂತಿವೆ. ಈ ವಿಶೇಷ ಆರ್ಥಿಕ ವಲಯಗಳಿಗೆ 2 ಲಕ್ಷ ಎಕರೆಗಿಂತಲೂ ಹೆಚ್ಚು ಭೂಮಿಯನ್ನು ವಶಪಡಿಸಿಕೊಳ್ಳಲು ಅಧಿಕಾರ ನೀಡಲಾಗಿದೆ. ಇದನ್ನು ಚೀನದೊಂದಿಗೆ ಹೋಲಿಸೋಣ. 1980 ರಲ್ಲಿ ಆರಂಭ ಮಾಡಿ 25 ವರ್ಷಗಳಲ್ಲಿ 3-4 ಹಂತಗಳಲ್ಲಿ ವಿಶೇಷ ಆರ್ಥಿಕ ವಲಯಗಳನ್ನು ಅಭಿವೃದ್ಧಿ ಮಾಡಿದ್ದಾರೆ. ಒಟ್ಟು ಸಂಖ್ಯೆ ಕೇವಲ 54 ಮತ್ತೆ ಭೂಮಿ 40-50 ಸಾವಿರ ಎಕರೆ. ಚೀನಾ ಭಾರತಕ್ಕಿಂತ 10 ಪಟ್ಟು ಹೆಚ್ಚು ರಫ್ತು ಮಾಡುತ್ತಿದೆ. 20 ಪಟ್ಟು ಹೆಚ್ಚು ವಿದೇಶಿ ಬಂಡವಾಳ ಹೊಂದಿದೆ ಎಂಬುದಕ್ಕೆ ತುಲನೆ ಮಾಡಿ.

ಸಿಪಿಐ(ಎಂ)ನ ಒತ್ತಾಯಗಳು

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಈ ಕೆಳಗಿನ ಒತ್ತಾಯಗಳನ್ನು ಮಾಡಿದೆ.

1. ಭೂಮಿ ಸರ್ಕಾರದ ಒಡೆತನದಲ್ಲಿರಬೇಕು, ಕಂಪನಿಗಳ ಪಾಲಾಗಬಾರದು.
2. 5000 ಎಕರೆಯ ಗರಿಷ್ಠ ಮಿತಿ ವಿಧಿಸಬೇಕು. ಕೈಗಾರಿಕೆಯ ಸ್ವಭಾವದ ಮೇಲೆ ಇನ್ನು ಕಡಿಮೆ ಭೂಮಿ ಕೂಡ ಸಾಕು.
3. ಭೂಮಿಯ ಮೇಲೆ ಅವಲಂಬಿಸಿದ ಎಲ್ಲರಿಗೂ ರೈತರು, ಗುತ್ತಿಗೆ, ವಾರ, ಗೇಣಿಗೆ ಉಳುಮೆ ಮಾಡುತ್ತಿರುವವರು, ಭೂ ಹೀನ ಕೂಲಿಕಾರರು ಎಲ್ಲರಿಗೂ ಪರಿಹಾರ ನೀಡಬೇಕು. ಅದು ಭೂಮಿಗೆ ಸದ್ಯದ ಮಾರುಕಟ್ಟೆ ಬೆಲೆಯಲ್ಲಿ.
4. ಮನೆ ಕಳೆದುಕೊಂಡವರಿಗೆ ಮೊದಲು ಮನೆ ಕಟ್ಟಿಸಿಕೊಟ್ಟು ನಂತರ ಭೂಮಿ ವಶಪಡಿಸಿಕೊಳ್ಳಬೇಕು. ಭೂಮಿ ಮೇಲೆ ಅವಲಂಬಿತರಿಗೆ ಉದ್ಯೋಗದಲ್ಲಿ ಮೊದಲ ಹಕ್ಕಿರಬೇಕು. ಉದ್ಯೋಗಕ್ಕೆ ಅವಶ್ಯವಾದ ಕಾಳಜಿಯನ್ನು ವಿಶೇಷ ಆರ್ಥಿಕ ವಲಯದ ಅಭಿವೃದ್ಧಿದಾರನೇ ನೀಡಬೇಕು.



ಅಗತ್ಯವೇ ಇಲ್ಲದೇ ಇದ್ದರೂ ಎಸ್‌ಇಝಡ್ ಮಾರಿಗೆ ಬಲಿಕೊಡುತ್ತಿರುವ ಭೂಮಿಯಲ್ಲಿ ನಗುತ್ತ ನಿಂತ ಬೆಳೆ

5. ಯಾವುದೇ ವಿಶೇಷ ತೆರಿಗೆ ವಿನಾಯಿತಿ, ಕಾರ್ಮಿಕರ ಕಾನೂನುಗಳಿಂದ ವಿನಾಯಿತಿ ಇರಬಾರದು.

ಹೊಸಕೋಟೆ ಆರ್ಥಿಕ ವಲಯ

ಈ ಬೆಳಕಿನಲ್ಲಿ ಹೊಸಕೋಟೆ ಆರ್ಥಿಕ ವಲಯ 5000 ಎಕರೆ ಮೀರಬಾರದು. ಆ ಪ್ರದೇಶದಲ್ಲಿ ಇದೆ ಎನ್ನಲಾದ 4000 ಎಕರೆ ಸರ್ಕಾರಿ ಭೂಮಿಯೇ ಸಾಕು. ಈ ಆರ್ಥಿಕ ವಲಯ ಯಾವ ಕೈಗಾರಿಕೆಗಾಗಿ ಅದಕ್ಕೆ ಎಷ್ಟು ಭೂಮಿ ಅಗತ್ಯ. ಯಾವ ವಿಶೇಷ ತಂತ್ರಜ್ಞಾನ ಅದರಲ್ಲಿ ಉಪಯೋಗಿಸಲ್ಪಡುತ್ತದೆ ಎಂಬ ವಿವರಗಳನ್ನು ನೀಡಿಯೇ ವಿಶೇಷ ಆರ್ಥಿಕ ವಲಯಕ್ಕೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ಅನುಮತಿ ನೀಡಬೇಕು. ಯಾವ ಕೈಗಾರಿಕೆಗಾಗಿ ಎಂಬುದನ್ನು ಹೆಸರಿಸಲು ಕೂಡ ಹಿಂಜರಿಯುತ್ತಿರುವುದರ ಹಿನ್ನೆಲೆಯಲ್ಲಿ ಇದೊಂದು ವಿಶೇಷ ಮೋಸದ ವಲಯ ಎಂಬುದು ಭೂಮಿ ಲೂಟಿಯ ಹುನ್ನಾರ ಎಂಬುದು ಅರ್ಥವಾಗುತ್ತದೆ. ಈ ಭೂಮಿ ಲೂಟಿಯ ಹಿಂದೆ ಇರುವ ತಲೆ ಯಾರದು? ಇದೇ ಯಕ್ಷ ಪ್ರಶ್ನೆ.

■ ಜಿ.ಎನ್.ನಾಗರಾಜ್

ಚೀನಾದಲ್ಲಿ ವಿಶೇಷ ಆರ್ಥಿಕ ವಲಯಗಳು

ಚೀನಾದಲ್ಲಿ ವಿಶೇಷ ಆರ್ಥಿಕ ವಲಯಗಳು ಪೂರ್ತಿಯಾಗಿ ಸರಕಾರದ ಮಾಲೀಕತ್ವ. ಭೂಮಿಯನ್ನು ರೈತರಿಂದ ಪಡೆದು ಸರ್ಕಾರ ತಾನೇ ಅದನ್ನು ಅಭಿವೃದ್ಧಿ ಪಡಿಸುತ್ತದೆ. ಬೇಕಾದ ಎಲ್ಲ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುತ್ತದೆ. ಅಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ಭೂಮಿಯನ್ನು ಬಾಡಿಗೆ (ಲೀಸ್) ಮೇಲೆ ನೀಡುತ್ತದೆ. ಚೀನಾದಲ್ಲಿ ಈಗ ಸದ್ಯ ಲಭ್ಯವಿಲ್ಲದ ತಂತ್ರಜ್ಞಾನವನ್ನು ತರುವ ಕಂಪನಿಗಳಿಗೆ ಮಾತ್ರ. ಲೀಸ್‌ನ ಅವಧಿ, ಲೀಸ್‌ನ ದರ ಇವು ಅವರು ತರಲಿರುವ ಉನ್ನತ ತಂತ್ರಜ್ಞಾನದ ಮೇಲೆ ಅವಲಂಬಿಸಿದೆ)

ರಿಯಲ್ ಎಸ್ಟೇಟ್ ದಂಧೆಗೆ 'ನಂದಗುಡಿ' ಬಲಿ

ನಂದಗುಡಿ ಭೌಗೋಳಿಕವಾಗಿ ಅತ್ಯಂತ ಅಚ್ಚುಕಟ್ಟಾದ ಪ್ರದೇಶವಾಗಿದ್ದು, ಬೆಂಗಳೂರಿಗೆ ತುಂಬಾ ಸನಿಹದಲ್ಲಿದೆ. ಶಾಶ್ವತ ನೀರಾವರಿ ಯೋಜನೆಗಳಿಲ್ಲದಿದ್ದರೂ ರೈತರು ಯಶಸ್ವಿಯಾಗಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. 36 ಗ್ರಾಮಗಳಿರುವ ಈ ಹೋಬಳಿಯಲ್ಲಿ 33 ಸಹಕಾರಿ ಹಾಲು ಉತ್ಪಾದಕರ ಸಂಘಗಳಿದ್ದು, ತಿಂಗಳಿಗೆ ಕನಿಷ್ಠ 6ಲಕ್ಷ ಲೀಟರ ಹಾಲು ಉತ್ಪಾದಿಸುತ್ತಾರೆ.

ಅಪ್ಪು

1.50ಲಕ್ಷ ಕೆಜಿ ರೇಷ್ಮೆ ಮತ್ತು ಸರಿಸುಮಾರು 120 ಟನ್ ತರಕಾರಿಗಳನ್ನು ಉತ್ಪಾದಿಸುತ್ತಾರೆ. ಸುಮಾರು 50-60 ಸಾವಿರ ಜನಸಂಖ್ಯೆಯಿದ್ದು ಎಸ್‌ಇಜಡ್ ನಿಂದ ಇವರ ಭವಿಷ್ಯದ ಜೀವನ ಅಸ್ಪಷ್ಟವಾಗಿದೆ.

ನಂದಗುಡಿಯಲ್ಲಿ ಯಾವ ಉದ್ಯಮಕ್ಕೆ ಸಂಬಂಧಿಸಿದ ಎಸ್‌ಇಜಡ್ ಸ್ಥಾಪಿಸ ಲಾಗುತ್ತದೆ ಎಂದು ರಾಜ್ಯ ಸರ್ಕಾರ ಇದುವರೆಗೂ ಪ್ರಕಟಿಸಿಲ್ಲ. ಅಷ್ಟೇ ಅಲ್ಲದೆ ಯಾವ ಉದ್ದಿಮೆಗೆ ಎಷ್ಟು ಭೂಮಿ ಬೇಕಾಗಿದೆ ಎಂಬುದು ಇಲ್ಲಿ ಸ್ಪಷ್ಟವಾಗಿ ತಿಳಿಸಿಲ್ಲ. ಯಾವ ಕಂಪನಿಗಳು ಈ ಎಸ್‌ಇಜಡ್ ಬಳಕೆ ಮಾಡಿಕೊಳ್ಳುತ್ತವೆ ಎಂಬುದರ ಕುರಿತು ನಿಖರ ಮಾಹಿತಿ ಇಲ್ಲ. ಹಾಗಿದ್ದ ಮೇಲೆ ಇಲ್ಲಿನ ರೈತರ ಬದುಕು ಹಸನಾಗುತ್ತದೆ. ಈ ಪ್ರದೇಶ ಅಭಿವೃದ್ಧಿಯಾಗುತ್ತದೆ ಎಂಬುದರ ಬಗ್ಗೆ ಯೋಚಿಸಲು ಸಾಧ್ಯವಿಲ್ಲ. ಹಾಗಾಗಿ ಇದು ಇಲ್ಲಿನ ಜನತೆಯನ್ನು ಬೀದಿ ಬಿಕಾರಿಗಳನ್ನಾಗಿ ಮಾಡುವ ಯೋಜನೆಯಾಗಿದೆ ಎಂಬುದು ಸುಲಭಗ್ರಾಹ್ಯ ವಿಷಯ. ದಿಕ್ಕು ದೆಸೆಯಿಲ್ಲದ, ಮುಂದಾಲೋಚನೆಯಿಲ್ಲದ ರಾಜ್ಯ ಸರ್ಕಾರದ ನಿರ್ಧಾರದಿಂದ ಅಲ್ಲಿನ ಜನತೆಯ ಮೇಲೆ ಕರಾಳ ಮೋಡ ಆವರಿಸಿದೆ ಎಂಬುದರಲ್ಲಿ ಸಂಶಯವಿಲ್ಲ.

ಭ್ರಮೆ, ಆತಂಕ

ನಂದಗುಡಿ ಪ್ರದೇಶದಲ್ಲಿ ಕೆಲವು ವರ್ಗದ ರೈತರು ಎಸ್‌ಇಜಡ್‌ನಿಂದ ನಾವೆಲ್ಲ ಸ್ವರ್ಗಕ್ಕೆ ಹೋಗುತ್ತೇವೆ ಎಂಬ ಭ್ರಮೆಯಲ್ಲಿದ್ದರೆ, ಕೆಲವರು ಆತಂಕದಲ್ಲಿ ಸಿಲುಕಿದ್ದಾರೆ. ನೀರಾವರಿ ಸೌಲಭ್ಯವಿಲ್ಲದ ಸಣ್ಣಪುಟ್ಟ ರೈತರು ಜಮೀನು ಮಾರುವುದರಿಂದ ಅಪಾರ ಪ್ರಮಾಣದ ಹಣ ಬರಲಿದ್ದು, ಎಲ್ಲಾದರೂ ಹೋಗಿ 'ಸುಂದರ ಬದುಕು' ಸಾಗಿಸ ಬಹುದೆಂಬ ಆಲೋಚನೆಯಲ್ಲಿದ್ದರೆ, ಇನ್ನು ಕೆಲವರು ಕೋಟ್ಯಾಧೀಶ ರಾಗುವ ಹಗಲು ಕನಸು ಕಾಣುತ್ತಿದ್ದಾರೆ. ಇಲ್ಲಿ ಸ್ಥಾಪನೆಯಾಗಲಿರುವ ಎಸ್‌ಇಜಡ್ ಕುರಿತು ಸರಿಯಾಗಿ ತಿಳಿಯದಿದ್ದರೆ ಭವಿಷ್ಯದಲ್ಲಿ ಇದಕ್ಕೆ ಕಾರಣರಾದ ಪ್ರತಿಯೊಬ್ಬರೂ ಭಾರಿ ಬೆಲೆ ಕಟ್ಟಬೇಕಾಗುತ್ತದೆ.



ಹಿಂಡಿಗನಾಳದಲ್ಲಿ ಹಸಿರು ನಳನಳಿಸುವ ತೋಟ

ಮೈಸೂರು ರಸ್ತೆಯಲ್ಲಿ ನೈಸ್ ಕಾರಿಡಾರ್ ಯೋಜನೆಗೆ ಈಗಾಗಲೆ ರೈತರ ಸಾವಿರಾರು ಎಕರೆ ಭೂಮಿ ನೀಡಿ ಬಂಡವಾಳಗಾರರ ಹೊಟ್ಟೆ ತುಂಬುವಂತಾಗಿದೆ. ನೈಸ್ ಕಂಪನಿಗೆ ಒದಗಿಸಿರುವ ಹೆಚ್ಚುವರಿ ಭೂಮಿ ಮಾರಾಟದಿಂದಲೇ ಕೋಟ್ಯಾಂತರ ರೂ. ಮೊಗೆದುಕೊಳ್ಳುತ್ತಿದ್ದಾರೆ. ನೈಸ್ ಯೋಜನೆ ರಾಜ್ಯದಲ್ಲಿ ನಡೆದಿರುವ ಭ್ರಷ್ಟಾಚಾರಗಳ ಮೇರುಪರ್ವತವಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಹಾಗೆಯೇ ನಂದಗುಡಿ ಸಹ ಮತ್ತೊಂದು ನೈಸ್ ಹಗರಣವಾಗಬಾರದು. ಎಸ್‌ಇಜಡ್ ರೈತರಿಗೆ ವರವಾಗಬೇಕೆ ವಿನಹ ಉರುಳಾಗಬಾರದು.



ನಂದಗುಡಿ ಹೋಬಳಿಯ ಒಂದು ಗ್ರಾಮ

ವಿವರಿಸಬೇಕಿತ್ತು

ರಾಜ್ಯ ಸರ್ಕಾರಕ್ಕೆ ನಿಜವಾಗಲೂ ರೈತರ ಬಗ್ಗೆ ಕಾಳಜಿಯಿದ್ದರೆ ಇಷ್ಟೊಂದು ಭೂಮಿ ಏತಕ್ಕೆ ಎಂದು ವಿವರಿಸಬೇಕಿತ್ತು. ಆದರೆ ಸರ್ಕಾರ ಆ ಕೆಲಸ ಮಾಡಿಲ್ಲ. ಒಂದು ವೇಳೆ ರಿಯಲ್ ಎಸ್ಟೇಟ್ ಕಂಪನಿಗಳಿಗೆ ಭೂಮಿ ಒದಗಿಸಿದರೆ ಈ ಪ್ರದೇಶ ಮೋಜಿನ ಕೇಂದ್ರವಾಗುತ್ತದೆ. ಕೆಲವೇ ನೂರು ಮಂದಿಗಷ್ಟೆ ಇದರಿಂದ ಉದ್ಯೋಗಗಳು ಸೃಷ್ಟಿಯಾಗಲಿದ್ದು ಉಳಿದವರೆಲ್ಲ ನಿರುದ್ಯೋಗಿಗಳಾಗಿ ಪರದಾಡಬೇಕಾಗುತ್ತದೆ. ಐಟಿ, ಬಿಟಿಯಂತಹ ಉದ್ದಿಮೆಗಳು ಸ್ಥಾಪನೆಯಾದರೂ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಗಳೇನೂ ಸೃಷ್ಟಿಯಾಗುವುದಿಲ್ಲ. ಸೃಷ್ಟಿಯಾಗುವ ಕೆಲವೇ ಉದ್ಯೋಗದಲ್ಲಿ ಕಾರ್ಯನಿರ್ವಹಿಸಲು ಯಾವ ರೈತ ತಾನೆ ಕಂಪ್ಯೂಟರ್ ಜ್ಞಾನ ಹೊಂದಿರುತ್ತಾರೆ. ಇಲ್ಲಿ ಗಂಭೀರವಾಗಿ ಚಿಂತಿಸಬೇಕಾದ ಮತ್ತೊಂದು ವಿಷಯವೆಂದರೆ ಯಾವುದೇ ಜಮೀನು ಇಲ್ಲದೆ ಕೇವಲ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಕೂಲಿ ನಾಲಿ ಮಾಡಿ ಬದುಕುತ್ತಿರುವ ಸಾವಿರಾರು ಬಡವರ ಭವಿಷ್ಯ. ಇವರಿಗೆ ಜಮೀನಿಲ್ಲದಿರುವುದರಿಂದ ಯಾವುದೇ ಪರಿಹಾರ ಬರುವುದಿಲ್ಲ. ಯಾವುದೇ ವೃತ್ತಿಯಲ್ಲಿ ತರಬೇತಿ ಹೊಂದಿಲ್ಲದಿರುವುದರಿಂದ ಎಸ್‌ಇಜಡ್ ನಲ್ಲಿ ಕೆಲಸ ಸಿಗುವ ಪ್ರಶ್ನೆಯೇ ಇಲ್ಲ. ಹಾಗಿದ್ದ ಮೇಲೆ ಇವರೆಲ್ಲ ಎಲ್ಲಿ ಹೋಗುವುದು. ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಮನೋಹರ್ ಪ್ರಶ್ನಿಸುತ್ತಾರೆ.

ಈ ಪ್ರದೇಶದಲ್ಲಿರುವ ರಾಜಕಾರಣಿಗಳು, ಅಲ್ಪ ಸ್ವಲ್ಪ ಭೂಮಿ ಹೊಂದಿರು ವವರು, ಸಣ್ಣಪುಟ್ಟ ಪುಡಾರಿಗಳಂತೂ ಬಿಲಿಯನರ್‌ಗಳಾಗುವ ಆತುರದಲ್ಲಿದ್ದಾರೆ. ಒಂದು ದಿನ ಇದೇ ವಲಯಗಳಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯಬೇಕಾಗುತ್ತದೆ

ಪುಟ 12 ಕ್ಕೆ



ಕಡಲ ಕೊರೆತಕ್ಕೆ ಪರಿಹಾರ ಇಲ್ಲವೇ?

ವರ್ಷವರ್ಷವೂ ಕರಾವಳಿಯ ಬಡಜನತೆಯನ್ನು ಪೀಡಿಸುವ ಕಡಲ ಕೊರೆತಕ್ಕೆ ಕಾರಣವೇನು ಎಂಬುದು ನಿಖರವಾಗಿ ಇನ್ನೂ ತಿಳಿದಿಲ್ಲ. ಕೃತಕ ತಡೆ ಉಪಕ್ರಮಗಳು ಫಲಕಾರಿಯಾಗಿಲ್ಲ. ನೈಸರ್ಗಿಕ ವಿಧಾನಗಳು ಶಾಶ್ವತ ಪರಿಹಾರ ನೀಡಬಹುದೇನೋ. ಆದರೆ ಈ ನಡುವೆ ಸರ್ಕಾರವಂತೂ ಮಾನವೀಯ ನೆಲೆಯಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು.

ಅದಮಾರು ಶ್ರೀಪತಿ ಆಚಾರ್ಯ
ಉಡುಪಿ

ಕರ್ನಾಟಕದ ಕರಾವಳಿಯ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕಡಲತೀರದಲ್ಲಿ ವಾಸಿಸುವ ಬಡ ಜನರನ್ನು ಮಳೆಗಾಲದ ದಿನಗಳಲ್ಲಿ ತೀವ್ರವಾಗಿ ಕಾಡುವ ಸಮಸ್ಯೆ- ಕಡಲ ಕೊರೆತ! ಪಣಂಬೂರು, ಉಡುಪಿ ತಾಲ್ಲೂಕಿನ ಹೆಜಮಾಡಿ, ಉಚ್ಚಿಲ, ಕಾಪು, ಮಲ್ಪೆ-ಪಡುಕರೆ, ಹೂಡೆ ಬೇಂದ್ರೆ ಮತ್ತು ಕುಂದಾಪುರ ತಾಲ್ಲೂಕಿನ ಕೊಚ್ಚಿಹೋದ ಮನೆಗಳು ಮತ್ತು ನಾಶವಾದ ತೆಂಗಿನ ತೋಟಗಳಿಗೆ ಲೆಕ್ಕವೇ ಇಲ್ಲ! ಕಳೆದ ಮಳೆಗಾಲದಲ್ಲಂತೂ ಕುಂದಾಪುರ ತಾಲ್ಲೂಕಿನ ತ್ರಾಸಿಯಲ್ಲಿ ಕರಾವಳಿ ಜಿಲ್ಲೆಗಳ ಏಕೈಕ ಜೀವನಾಡಿಯಂತಿರುವ ರಾಷ್ಟ್ರೀಯ ಹೆದ್ದಾರಿ ನಂ.17 ಇನ್ನೇನು ಕಡಿದೇ ಹೋಯಿತು ಎನ್ನುವಷ್ಟು ಸಮುದ್ರ ಕೊರೆತಕ್ಕೆ ಈಡಾಗಿತ್ತು. ಇತ್ತೀಚಿಗಿನ ದಿನಗಳಲ್ಲಿ 'ಮುಂಗಾರುಮಳೆ' ಎಂಬ ಸಿನಿಮಾ ರಾಜ್ಯದ ಎಲ್ಲೆಡೆ ಜಯಭೇರಿ ಹೊಡೆಯುತ್ತಿದ್ದರೆ ಕರಾವಳಿಯ ಜನರ ಪಾಲಿಗೆ 'ಮುಂಗಾರುಮಳೆ' ಎನ್ನುವುದೊಂದು ಆತಂಕದ ಸಂಗತಿಯಾಗುತ್ತಿದೆ. ಈ ಮುಂಗಾರಿನಲ್ಲಿ ಯಾರ ಮನೆ ಕಡಲ ಕೊರತಕ್ಕೆ ಆಹುತಿಯಾಗಲಿದೆಯೋ, ಯಾರ ತೆಂಗಿನ ತೋಟವನ್ನು ಸಮುದ್ರ ರಾಜ ಕಬಳಿಸಿ ಬಿಡುವನೋ ಎಂಬ ಭೀತಿಯಲ್ಲಿ ಕಡತ ತೀರದ ಜನ ಕಂಗಾಲಾಗಿರುತ್ತಾರೆ.

ಅಲ್ಲೇ ಯಾಕಿದ್ದಾರೆ?

ಕಡಲ ಕೊರೆತದಿಂದ ಮನೆ ಮಾರು ಕಳೆದುಕೊಂಡವರಲ್ಲಿ ಹೆಚ್ಚಿನವರಿಗೆ ಸರಕಾರದಿಂದ ಯಾವುದೇ ಪರಿಹಾರ ದೊರೆತಿಲ್ಲ. ತಲೆತಲಾಂತರದಿಂದ ಮೀನುಗಾರಿಕೆಯನ್ನೇ ಕುಲಕಸುಬಾಗಿ ನಡೆಸಿಕೊಂಡು ಬರುತ್ತಿರುವ ಇವರಲ್ಲಿ ಅನೇಕರಿಗೆ ಸ್ಥಳದ ಒಡೆತನ ಮತ್ತು ವಾಸ್ತವ್ಯದ ಬಗ್ಗೆ ಸೂಕ್ತ ರುಜುವಾತುಗಳಿಲ್ಲ; ಬಹುಪಾಲು ಮಂದಿಗೆ 'ಡಿ' ನೋಟೀಸ್ ಜಾರಿಯಾಗಿಲ್ಲ. ಹಾಗಾಗಿ ಇವರು ಮನೆ ಮಾರು ಕಳೆದುಕೊಂಡರೂ ಪರಿಹಾರ ದೊರೆಯುವುದಿಲ್ಲ. ಇಷ್ಟಾದರೂ ಇವರು ಸಮುದ್ರದ ಬಳಿಯಲ್ಲೇ ಹೀಗೆ ಅಪಾಯಕಾರಿಯಾಗಿ ಯಾಕೆ ಬದುಕಿಕೊಂಡಿದ್ದಾರೆ? ದಿನಾ ಮುಂಜಾನೆ ಎದ್ದು ಹೊಟ್ಟೆ ಪಾಡಿಗಾಗಿ ಮೀನು ಹಿಡಿಯಲು ದೋಣಿಯಲ್ಲಿ ಸಮುದ್ರಕ್ಕೆ ಹೋಗಬೇಕಾದ ಇವರ ಪಾಲಿಗೆ ಇದೊಂದು ಅನಿವಾರ್ಯತೆ. ಇವರು ಕಡಲಿನಿಂದ ದೂರವಿರುವುದು ಸಾಧ್ಯವೇ ಇಲ್ಲ.

ವರ್ಷವರ್ಷವೂ ಕರಾವಳಿಯ ಬಡ ಜನತೆಯನ್ನು ಪೀಡಿಸುವ ಈ ಕಡಲ ಕೊರೆತಕ್ಕೆ ಕಾರಣ ಏನು ಎಂಬುದನ್ನು ನಿಖರವಾಗಿ ಇನ್ನೂ ಕಂಡುಕೊಳ್ಳಲಾಗಿಲ್ಲ. 'ಮಾನವನ ದುರಾಸೆಯಿಂದಾಗಿ ನಿಸರ್ಗ ಮುನಿಸುಗೊಂಡಿದೆ. ನೀವು ಕಡಲಿನ ನೆಲವನ್ನು ಕಸಿದಿದ್ದೀರಿ, ಕಡಲು ನಿಮ್ಮ ನೆಲವನ್ನು ಕಿತ್ತುಕೊಳ್ಳುತ್ತಿದೆ' ಎಂಬ ತಥಾಕಥಿತ ಪರಿಸರವಾದಿಗಳ ಆರೋಪದಲ್ಲಿ ಏನಾದರೂ ಹುರುಳಿದೆಯೇ? ಕಡಲ ತೀರದಲ್ಲಿ ಹಲವು ತಲೆಮಾರುಗಳಿಂದ ಬದುಕಿರುವ ಜನರನ್ನು ಕೇಳಿದಾಗ ಈ ಆರೋಪ ಆಧಾರ ರಹಿತ ಎನ್ನುವುದು ಸ್ಪಷ್ಟವಾಗುತ್ತದೆ. ಅನೇಕ ವರ್ಷಗಳ ಕಾಲ ಮುಂಬಾಯಿಯಲ್ಲಿ ನೌಕರಿಯಲ್ಲಿದ್ದು, ಈಗ ಪಡುಕಾಪುವಿನಲ್ಲಿ ಮೀನುಗಾರಿಕೆ ನಡೆಸುತ್ತಿರುವ ಶ್ರೀ ವಿಜಯ ಎಸ್.ಕೋಟ್ಯಾನ್ ಅವರನ್ನು ಈ ಕುರಿತು ವಿಚಾರಿಸಿದಾಗ ಅವರಂದದ್ದು ಹೀಗೆ - 'ಸುಮಾರು ಎಂಭತ್ತು ವರ್ಷಗಳ ಹಿಂದೆ ಅಂದರೆ ನಮ್ಮ ಅಜ್ಜನ ಕಾಲದಲ್ಲಿ ಕಾಪು ದೀಪಸ್ತಂಭವಿರುವ ಬಂಡಿಗಲ್ಲಿನ ಪಶ್ಚಿಮ ಭಾಗದಲ್ಲೂ ಭೂ ಪ್ರದೇಶವಿತ್ತು. ಈಗ ದೀಪಸ್ತಂಭದ ಸುತ್ತಲೂ ಕಡಲು ಆವರಿಸಿಕೊಂಡಿದೆ. ಪಡುಕಾಪುವಿನಿಂದ ದೀಪಸ್ತಂಭದವರೆಗೂ ಈಗ ಸಮುದ್ರವಿರುವ ಜಾಗದಲ್ಲಿ ನೆಲ ಮಾರ್ಗವಿತ್ತು. ಕಳೆದ ಎಂಟು ದಶಕದ ಅವಧಿಯಲ್ಲಿ ಸುಮಾರು ಐದು ನೂರು ಮೀಟರ್‌ನಷ್ಟು ಅಗಲವಾದ ಭೂ ಭಾಗವನ್ನು ಕಡಲು ನುಂಗಿ ಹಾಕಿದೆ. ಹಿಂದಿನ ಪಡುಕಾಪು ಈಗ ಸಮುದ್ರದ ಗರ್ಭದಲ್ಲಿ ಸೇರಿಕೊಂಡಿದೆ'. 'ಸಮುದ್ರವು ನಮ್ಮನ್ನು ಅಟ್ಟಿಸಿಕೊಂಡು ಬಂದ ಹಾಗೆ ನಾವು ಪೂರ್ವದ ಕಡೆಗೆ ಸರಿಯುತ್ತಾ ಹೋದೆವು' ಎನ್ನುತ್ತಾರೆ ಶ್ರೀ ಕೋಟ್ಯಾನ್.

ಸಮುದ್ರ ಹಿಂದಕ್ಕೆ ಕೂಡಾ ಸರಿದಿದೆ

ಉಡುಪಿ ತಾಲ್ಲೂಕಿನ ಕೆಮ್ಮಣ್ಣು ಗ್ರಾಮದ 'ಹೂಡೆ' ಎಂಬಲ್ಲಿ ಸಿಟಿ ಬಸ್ ನಿಲ್ಲುವ ತಾಣದಿಂದ ಕೇವಲ ನೂರು ಅಡಿ ದೂರದಲ್ಲಿ ಅರಬ್ಬಿ ಸಮುದ್ರ ಅಟ್ಟಹಾಸದಿಂದ ಭೋರ್ಗರೆಯುತ್ತಿದೆ. ಇಲ್ಲಿನ ಜನರ ಪ್ರಕಾರ ಸುಮಾರು ಐವತ್ತು ವರ್ಷಗಳ ಹಿಂದೆ 'ಹೂಡೆ' ಎಂಬ ಹಳ್ಳಿಯ ಬಹುಭಾಗ ಇದೀಗ ಸಮುದ್ರವಿರುವ ಜಾಗದಲ್ಲೇ ಇದ್ದಿತ್ತು. ಈ ಐದು ದಶಕದ ಅವಧಿಯಲ್ಲಿ ಕಡಲು ಪೂರ್ವದ ಕಡೆಗೆ ಒತ್ತರಿಸಿ ಬಂದು ಸುಮಾರು ಮುನ್ನೂರು ಮೀಟರ್‌ನಷ್ಟು ಅಗಲದ ಭೂ ಭಾಗವನ್ನು ಕಬಳಿಸಿ ಬಿಟ್ಟಿದೆ. ಒಂದು ಕಾಲದಲ್ಲಿ ಮಲ್ಪೆ ಮತ್ತು ಹೂಡೆಗೆ ಸಂಪರ್ಕ ಕಲ್ಪಿಸಿದ ಹಳೆಯ ಫಿಶರೀಸ್ ರಸ್ತೆ ಇದೀಗ ಸಮುದ್ರದ ಹೊಟ್ಟೆ ಸೇರಿದ್ದು ಅದಕ್ಕೆ ಬದಲಿಯಾಗಿ ಹೊಸತೊಂದು ಮೀನುಗಾರಿಕಾ ರಸ್ತೆಯನ್ನು ನಿರ್ಮಿಸಲಾಗಿದೆ. ಆದರೆ ಇದಕ್ಕೆ ಪ್ರತಿಯಾಗಿ ಮಲ್ಪೆ ಮತ್ತು ವಡಭಾಂಡೇಶ್ವರ ಬೀಚ್‌ನ ಪ್ರದೇಶದಲ್ಲಿ ಕೆಲಕಾಲದಿಂದ ಸಮುದ್ರ ಹಿಂದಕ್ಕೆ ಪಶ್ಚಿಮದ ಕಡೆಗೆ ಸರಿದಿರುವುದನ್ನು ಸ್ಥಳೀಯರು ಗುರುತಿಸಿದ್ದಾರೆ. ಕಡಲಿನ ಈ ಚಲನೆಗಳಿಗೆ ಭೂಮಿಯ ಅಂತರಾಳದಲ್ಲಿ ನಡೆಯುವ ಯಾವುದೇ ವಿದ್ಯಮಾನ ಕಾರಣವಾಗಿರ ಬಹುದು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪಶ್ಚಿಮಕ್ಕೆ ಹರಿದು ಕಡಲು ಸೇರುವ ಹತ್ತಾರು ಹೊಳೆಗಳು ತಾವು ಹೊತ್ತು ತಂದಿರುವ ಅಪಾರ ಪ್ರಮಾಣದ ಹೂಳನ್ನು ಅಳಿವೆ ಪ್ರದೇಶದಲ್ಲಿ ರಾಶಿ ಹಾಕುತ್ತವೆ. ಈ ಹೂಳು ಕಡಲಿನ ಗಣನೀಯ ಭಾಗವನ್ನು ಆಕ್ರಮಿಸುತ್ತದೆ. ಇಂತಹ ಕಡೆ ತಾನು ಕಳೆದುಕೊಂಡಿರುವ ಪ್ರದೇಶವನ್ನು ಮರಳಿ ಪಡೆಯಲು ಸಮುದ್ರವು ಅಳಿವೆಯ ಆಸುಪಾಸಿನಲ್ಲಿ ಒತ್ತರಿಸಿ ಬಂದು ಕೊರೆತವುಂಟು ಮಾಡಿರಬಹುದು. ಕಡಲಕೊರೆತಕ್ಕೆ ಸಮುದ್ರ ತೀರದಲ್ಲಿ ಬಡ ಜನರು ಕಟ್ಟಿಕೊಂಡಿರುವ ಗುಡಿಸಲುಗಳು ಅಥವಾ ಬೆಳೆಸಿದ ತೆಂಗಿನ ಮರಗಳು ಕಾರಣವೆನ್ನುವುದಕ್ಕಿಂತ ನಿಸರ್ಗ ಸಹಜವಾದ ವಿದ್ಯಮಾನಗಳೇ ಕಾರಣವೆನ್ನುವುದು ಸೂಕ್ತ.

ನಿಯಮ ಉಲ್ಲಂಘನೆ

ಕಡಲ ತೀರದಿಂದ ಐದುನೂರು ಮೀಟರ್ ವ್ಯಾಪ್ತಿಯೊಳಗೆ ಕಟ್ಟಡಗಳನ್ನು ರಚಿಸಬಾರದೆಂಬ ಸಿ.ಆರ್.ಝಡ್. ನಿಯಮಾವಳಿಗಳನ್ನು ಉಲ್ಲಂಘಿಸುವವರು ಬಡವರು ಮಾತ್ರವೆ ಅಲ್ಲ. ಶ್ರೀಮಂತ ಬಂಡವಾಳಗಾರರು ವಿಲಾಸೀ ಪ್ರವಾಸಿ ತಾಣಗಳನ್ನು, 'ರಿಸಾರ್ಟ್' ಮತ್ತು 'ಗೆಸ್ಟ್ ಹೌಸ್' ಗಳನ್ನು ಕಡಲಿನ ಬದಿಯಲ್ಲೇ ಕಟ್ಟಿರುತ್ತಾರೆ. ಪ್ರವಾಸೋದ್ಯಮದ ಹೆಸರಿನಲ್ಲಿ ಸರಕಾರವೂ ಇದನ್ನು ಉತ್ತೇಜಿಸುತ್ತದೆ ಮತ್ತು ತಾನೂ ಇಂತಹ ಐಷಾರಾಮಿ ಪ್ರವಾಸಿಧಾಮಗಳನ್ನು ರಚಿಸುತ್ತಿದೆ!

ಕಡಲ ಕೊರೆತಕ್ಕೆ ಪರಿಹಾರವೇ ಇಲ್ಲವೇ?


ರಾಷ್ಟ್ರೀಯ ಕರಾವಳಿ ಸಂರಕ್ಷಣಾ ಕಾರ್ಯಕ್ರಮದಲ್ಲಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕಿನ ನೆರವಿನಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಡಲಕೊರೆತದ ಹಾವಳಿಯನ್ನು ತಪ್ಪಿಸಲು ಅನೇಕ ಉಪಕ್ರಮಗಳನ್ನು ಕೈಗೊಂಡಿವೆ. ಆದರೆ ಇವೆಲ್ಲವೂ ತಾತ್ಕಾಲಿಕ ಉಪಕ್ರಮಗಳೇ ಹೊರತು ಶಾಶ್ವತ ಪರಿಹಾರ ಅಲ್ಲ. ಪ್ರಾಕೃತಿಕ ವಿಕೋಪವಾಗಿರುವ ಕಡಲ ಕೊರೆತಕ್ಕೆ ಶಾಶ್ವತ ಪರಿಹಾರವೆಂಬುದೊಂದು ಇದೆಯೇ ಎನ್ನುವುದು ಅನುಮಾನಾಸ್ಪದ. ಹಾಗಿದ್ದರೂ ಕೇಂದ್ರ ಜಲಶಕ್ತಿ ಸಂಶೋಧನಾ ಕೇಂದ್ರ, ಪುಣೆ ಮತ್ತು ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೃಷ್ಣರಾಜಸಾಗರ, ಇವರ ಮಾರ್ಗದರ್ಶನದಲ್ಲಿ ಸಮುದ್ರ ಅಲೆಗಳು ಗಾಳಿಯ ಬೀಸುವಿಕೆ ಮತ್ತು ಇಳಿತ ಭರತಗಳನ್ನು ಪರಿಗಣಿಸಿ ಕೊರೆತವುಂಟಾದ ಭಾಗದಲ್ಲಿ ಉಸುಕಿನ ಚೀಲಗಳನ್ನು ರಾಶಿ ಹಾಕುವುದು ಅಥವಾ ಶಿಲೆಕಲ್ಲಿನ 'ಬೋಲ್ಡರ್'ಗಳನ್ನು ತುಂಬಿಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇವೆರಡೂ ಕೇವಲ ತಾತ್ಕಾಲಿಕ ಉಪಕ್ರಮಗಳಾಗಿವೆ. ಉಡುಪಿ ಜಿಲ್ಲೆಯ 98 ಕಿ.ಮೀ. ಉದ್ದದ ಕರಾವಳಿಯಲ್ಲಿ 19 ಕಿ.ಮೀ. ನಷ್ಟು ಕಡಲತೀರದಲ್ಲಿ ಸುರುವಿ ಬಿಡಲಾದ ಮರಳಿನ ಚೀಲ ಅಥವಾ ಶಿಲೆಕಲ್ಲುಗಳ ತಾತ್ಕಾಲಿಕ ಗೋಡೆಗಳಿಂದ ಹೆಚ್ಚಿನ ಪ್ರಯೋಜನವೇನೂ ಆಗಿಲ್ಲ. ಶಿಲೆ ಕಲ್ಲುಗ್ಗಳನ್ನು ರಾಶಿ ಹಾಕಿದ ಕಡೆ ಸಮುದ್ರದ ಅಲೆಗಳು ಅಪ್ಪಳಿಸಿ ಹಿಂದೆ ಸರಿಯುವಾಗ ಕಲ್ಲಿನ ಬುಡದ ಮರಳನ್ನೂ ಹೀರಿ ಇನ್ನಷ್ಟು ಕೊರೆತವುಂಟು ಮಾಡಿವೆಯಲ್ಲದೆ ಶಿಲೆಕಲ್ಲುಗಳು ಉಸುಕಿನೊಳಗೆ ಹೂತುಹೋಗುತ್ತಿವೆ. ಫ್ರಾನ್ಸ್ ದೇಶದಲ್ಲಿ ಅಳವಡಿಸಲಾಗಿರುವ 'ಸ್ಟೆಬಿಪ್ಲೆಜ್' ಮಾದರಿಯ ತಡೆಗೋಡೆಯನ್ನು ಅಭ್ಯಾಸ ಮಾಡಲು ಹೋಗಿ ಬಂದಿರುವ ಹಿಂದಿನ ಮೀನುಗಾರಿಕಾ ಸಚಿವ ಶ್ರೀ ವಸಂತ ಸಾಲಿಯಾನ್ ಅವರ ಶಿಫಾರಸ್ಸನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿಲ್ಲ, ವಸಂತ ಸಾಲಿಯಾನ್‌ರ ಫ್ರಾನ್ಸ್ ಯಾತ್ರೆಯೊಂದು 'ದಂಡ' ಯಾತ್ರೆಯಾದರೆ ಶಿಲೆಗಳನ್ನು ಸಮುದ್ರದಲ್ಲಿ ಸುರುವಲು ವೆಚ್ಚವಾದ ನೂರಾರು ಕೋಟಿ ರೂಪಾಯಿಗಳು ನೀರಿನಲ್ಲಿ ಕೊಚ್ಚಿ ಹೋದಂತಾಗಿದೆ.

ಇಂತಹ ಹಿನ್ನೆಲೆಯಲ್ಲಿ ಇನ್ನೂ 20 ಕಿ.ಮೀ. ನಷ್ಟು 'ಶಾಶ್ವತ' ತಡೆಗೋಡೆಯನ್ನು 'ಪ್ಯಾಕಿಂಗ್' ಪದ್ಧತಿಯಲ್ಲಿ ಉಡುಪಿ ಜಿಲ್ಲೆಯ ಕರಾವಳಿಯಲ್ಲಿ ರಚಿಸಲಾಗುತ್ತಿದೆಯೆಂದು ಉಡುಪಿ ಜಿಲ್ಲೆಯ ಮೀನುಗಾರಿಕೆ ಮತ್ತು ಬಂದರು ಇಲಾಖೆಯ ಸಹಾಯಕ ಇಂಜಿನಿಯರ್ ಶ್ರೀ ನಾರಾಯಣಪ್ಪ ಹೇಳಿದ್ದಾರೆ. 'ಪ್ಯಾಕಿಂಗ್' ವಿಧಾನದಲ್ಲಿ ಉನ್ನತ ಸಾಂದ್ರತೆಯ ಪಾಲಿಥೀನ್ ಬಲೆಯನ್ನು (High Density Potythene mat) ಅಳವಡಿಸಿ ಅದರ ಮೇಲೆ ನಿರ್ದಿಷ್ಟ ಆಕಾರದಲ್ಲಿ ಕೆತ್ತಿರುವ ಶಿಲೆಯ ತುಂಡುಗಳನ್ನು ಎಡೆಬಿಡದಂತೆ ಒತ್ತೊತ್ತಾಗಿ ಜೋಡಿಸಿ ಅದರ ಮೇಲ್ಪದರವನ್ನು ಸಮತಟ್ಟಾದ ಇಳಿಜಾರು ಮಾಡಲಾಗುತ್ತದೆ. ಇದು ಅಪ್ಪಟ ಶಾಶ್ವತ ಉಪಕ್ರಮ ಅಲ್ಲದಿದ್ದರೂ ಹಿಂದಿನ 'ಡಂಪಿಂಗ್' ಪದ್ಧತಿಗಿಂತ ಪ್ಯಾಕಿಂಗ್ ವಿಧಾನ ಹೆಚ್ಚು ಕಾಲ ಬಾಳಿಕೆ ಬರುವ ಸಾಧ್ಯತೆ ಇದೆಯೆಂದು ಶ್ರೀನಾರಾಯಣಪ್ಪ ಹೇಳುತ್ತಾರೆ. ತಮಿಳುನಾಡು ಮತ್ತು ಕೇರಳ ರಾಜ್ಯದಲ್ಲಿ ಶಾಶ್ವತ ತಡೆಗೋಡೆಗಳ ನಿರ್ಮಾಣ ಮಾತ್ರವಲ್ಲದೆ ಅವುಗಳ ನಿರ್ವಹಣೆಗೂ ಸರ್ಕಾರ ವೆಚ್ಚ ಮಾಡುತ್ತಿದ್ದರೆ ಕರ್ನಾಟಕ ಸರ್ಕಾರ ನಿರ್ವಹಣೆಗಾಗಿ (Maintenance) ಏನೂ ವೆಚ್ಚ ಮಾಡುವುದಿಲ್ಲ. ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಮದ್ರಾಸಿನ



ಸಿ.ಐ.ಟಿ.ಯು. ಶಿಫಾರಸ್ಸಿನಂತೆ 'ಗ್ರಾಯಿನ್' ಎಂಬ ವಿಶೇಷ ತಡೆಗೋಡೆಗಳನ್ನು ರಚಿಸಲಾಗುತ್ತಿದೆ. ಒಟ್ಟಿನಲ್ಲಿ ಪ್ರಾಕೃತಿಕ ವಿಕೋಪವಾಗಿರುವ ಕಡಲ ಕೊರೆತಕ್ಕೆ ಕೃತಕ ವಿಧಾನಗಳಿಂದ ಶಾಶ್ವತ ಪರಿಹಾರ ದೊರೆಯುವುದು ಅಸಾಧ್ಯ. ತಜ್ಞರು ಅಭಿಪ್ರಾಯಪಡುವಂತೆ ಸಮುದ್ರ ತೀರದಲ್ಲಿ ಮರಳನ್ನು ಹಿಡಿದಿಟ್ಟು ಕೊಳ್ಳಬಲ್ಲಂತಹ ಕಿರು ಸಸ್ಯಗಳನ್ನು ಹುಲ್ಲನ್ನು ಬೆಳೆಸುವುದು ಹೆಚ್ಚು ಪರಿಣಾಮಕಾರಿಯಾದೀತು. ಕಡಲ ತೀರದಲ್ಲಿ ಸುಲಭವಾಗಿ ಬೆಳೆಯುವ ಸಮುದ್ರ ಬಸಳೆ, ಮುಳ್ಳು ಹುಲ್ಲು, ಆನೆಕತ್ತಾಳೆ, ಮುಂಡಕನ ಗಿಡ ಇವುಗಳಿಗೆ ಮರಳನ್ನು ಹಿಡಿದಿಟ್ಟು ಕೊಳ್ಳುವ ಗುಣ ವಿಶೇಷವಾಗಿದೆ. ತೀರಾ ಇತ್ತೀಚೆಗೆ ಕಡಲತೀರದಲ್ಲಿ ಮತ್ತು ವಿಶೇಷವಾಗಿ ಅಳಿವೆ ಪ್ರದೇಶದಲ್ಲಿ 'ಕಾಂಡ್ಲಾ' ಗಿಡಗಳನ್ನು (Mangrove) ಬೆಳೆಯಲು ಅರಣ್ಯ ಇಲಾಖೆ ಯೋಜನೆ ಹಾಕಿಕೊಂಡಿದೆ. ಇಂತಹ ನೈಸರ್ಗಿಕ ವಿಧಾನಗಳಿಂದ ಮಾತ್ರ ಕಡಲ ಕೊರತಕ್ಕೆ ಶಾಶ್ವತ ಪರಿಹಾರ ದೊರಕಬಹುದೇನೋ.


ಇದರೊಂದಿಗೆ ಸರ್ಕಾರವು ಕಡಲ ಕೊರೆತದಿಂದ ಮನೆ ಮಾರು ಕಳೆದುಕೊಂಡ ಎಲ್ಲರಿಗೂ ಮಾನವೀಯ ನೆಲೆಯಲ್ಲಿ ಪರಿಹಾರ ನೀಡಿ ಬದಲಿ ನಿವೇಶನ ನೀಡಬೇಕು. ಪರಿಹಾರ ಪಡೆದವರು ಮತ್ತೆ ಅದೇ ಜಾಗದಲ್ಲಿ ಮನೆಕಟ್ಟದಂತೆ ಅವರ ಮನವೊಲಿಸಬೇಕು. ಪ್ರತಿವರ್ಷ ಎಲ್ಲಾ ಬಂದರುಗಳಲ್ಲಿ ಮತ್ತು ಅಳಿವೆ ಪ್ರದೇಶದಲ್ಲಿ ಹೊಳೆತ್ತುವ ಕಾರ್ಯ ನಡೆಸಬೇಕು. ಪ್ರವಾಸೋದ್ಯಮದ ಹೆಸರಿನಲ್ಲಿ ಕಡಲತೀರದಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಸಸ್ಯಗಳನ್ನು ನಾಶಮಾಡದೆ ಅಲ್ಲಿ ಹಸಿರನ್ನು ಬೆಳೆಸಬೇಕು. ಸಮುದ್ರ ತೀರದಲ್ಲಿ ವಿಶೇಷವಾಗಿ ಬೀಚ್‌ಗಳಲ್ಲಿ ಪರಿಸರ ಮಾಲಿನ್ಯವನ್ನು ತಡೆಗಟ್ಟಬೇಕು.



ಉಲ್ಲಾಳದಲ್ಲಿ ಕಡಲ ಕೊರೆತದಿಂದ ನಾಶ ಮನೆ

1977 ರಲ್ಲಿ ಅಧಿಕಾರಕ್ಕೆ ಬಂದ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ 30 ವರ್ಷ ಪೂರೈಸಿ ವಿಶ್ವದಾಖಲೆ ಸೃಷ್ಟಿಸಿದೆ. ತ್ಯಾಗ ಬಲಿದಾನ, ಸವಾಲು, ವರ್ಗ ಸಂಘರ್ಷದ ದುರ್ಗಮ ಹಾದಿ ಅದರದ್ದು.

ಪಶ್ಚಿಮ ಬಂಗಾಳ ಎಡರಂಗ ಸರ್ಕಾರಕ್ಕೆ 30 ವರುಷ



ಪಶ್ಚಿಮ ಬಂಗಾಳದ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಕ್ಕೆ 30 ವರ್ಷಗಳು ತುಂಬಿವೆ. ಕಲ್ಕತ್ತಾದ ಬೀದಿ ಬೀದಿಗಳಲ್ಲಿ, ಪಶ್ಚಿಮಬಂಗಾಳದ ಹಳ್ಳಿ, ಪಟ್ಟಣಗಳಲ್ಲಿ, ಕಾರ್ಖಾನೆ ಕಛೇರಿಗಳಲ್ಲಿ, ಗದ್ದೆ ಬಯಲುಗಳಲ್ಲಿ ಚಹಾ ತೋಟಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಈ ಸಂಭ್ರಮವನ್ನು ಆಚರಿಸಲಾಗುತ್ತಿದೆ. ಮಾತ್ರವಲ್ಲ. ದೇಶದೆಲ್ಲೆಡೆ 30 ವರ್ಷಗಳ ಎಡರಂಗದ ಸಾಧನೆಗಳನ್ನು ಜನರಿಗೆ ತಿಳಿ ಹೇಳಲು ಸಾಧ್ಯವಾಗುವಂತೆ ಎಲ್ಲ ಕಡೆಗಳಲ್ಲೂ ಆಚರಣೆ ನಡೆಸಬೇಕೆಂದು 4 ಎಡಪಕ್ಷಗಳು ಜಂಟಿಯಾಗಿ ಕರೆ ನೀಡಿವೆ.

ಇದೊಂದು ವಿಶ್ವ ದಾಖಲೆ! ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿ ಜಗತ್ತಿನ ಯಾವುದೇ ದೇಶದಲ್ಲಿ ಇಷ್ಟೊಂದು ದೀರ್ಘಕಾಲ ಅಧಿಕಾರ ನಡೆಸಿರುವ ಉದಾಹರಣೆ ಇಲ್ಲ!

2006ರಲ್ಲಿ ಸತತ ಏಳನೇ ಬಾರಿಗೆ ಅಧಿಕಾರದ ಚುಕ್ಕಾಣಿ ಹಿಡಿದ ಎಡರಂಗ ನಾಲ್ಕರಲ್ಲಿ ಮೂರು ಪಾಲು ಬಹುಮತ ಪಡೆದುದು ಮಾತ್ರವಲ್ಲದೆ ಶೇ.50.18ರಷ್ಟು ಮತಗಳನ್ನು ಪಡೆದು ದಾಖಲೆ ನಿರ್ಮಿಸಿದೆ.

ಮತಗಟ್ಟೆಗಳನ್ನು ವಶಪಡಿಸಿ ಕೊಳ್ಳುವುದರ ಮೂಲಕ (ಸೈಂಟಿಫಿಕ್ ರಿಗ್ಗಿಂಗ್) ಅಧಿಕಾರಕ್ಕೆ ಬರುತ್ತಿದ್ದಾರೆ ಎಂದು ಪ್ರತಿಬಾರಿ ಗೆದ್ದಾಗಲೂ ಆರೋಪಿಸುತ್ತಿದ್ದ ಬಂಗಾಳದ ರಾಜಕೀಯ ವಿರೋಧಿಗಳು, ದೇಶದ ಬಂಡವಾಳ ಶಾಹಿ ರಾಜಕೀಯ ಪಕ್ಷಗಳು, ಬಹುತೇಕ ಮಾಧ್ಯಮಗಳು 2006ರಲ್ಲಿ ಏಳನೇ ಬಾರಿಗೆ ಎಡರಂಗ ಆಯ್ಕೆಯಾಗಿ ಬಂದಾಗ ಬಾಯಿ ಮುಚ್ಚಿ ಕೂರದೇ ಬೇರೆ ವಿಧಿ ಇರಲಿಲ್ಲ. ಏಕೆಂದರೆ, ಚುನಾವಣೆ ಆಯೋಗವು ತನ್ನಲ್ಲಿರುವ ಎಲ್ಲಾ ಅಧಿಕಾರವನ್ನು (ದುರು) ಉಪಯೋಗ ಪಡಿಸಿಕೊಂಡು ಬೇರೆ ರಾಜ್ಯಗಳಿಂದ ಅರೆ ಮಿಲಿಟರಿ, ಪೋಲೀಸು, ಮತಗಟ್ಟೆ ಅಧಿಕಾರಿಗಳನ್ನು ಕರೆಸಿಕೊಂಡರು. ಮತದಾರರನ್ನು ಬೇರೆ ರಾಜ್ಯಗಳಿಂದ ತರಲು ಸಾಧ್ಯವಾಗದಿದ್ದುದರಿಂದ ದುಡಿಯುವ ಜನರ, ಪ್ರಜಾಪ್ರಭುತ್ವವಾದಿಗಳ ಕಣ್ಮಣಿ ಎಡರಂಗ ಸರ್ಕಾರ ಪುನಃ ಅಧಿಕಾರಕ್ಕೆ ಬಂದಿತು.

ತ್ಯಾಗ, ವರ್ಗ ಸಂಘರ್ಷದ ಫಲಿತಾಂಶ

ಹಿಂದೆ ರಾಜಕೀಯದಲ್ಲಿ ಆಳವಾಗಿ ಆಲೋಚನೆ ಮಾಡದ ಜನ ಮಾತನಾಡಿಕೊಳ್ಳುತ್ತಿದ್ದದೇನೆಂದರೆ 'ಜ್ಯೋತಿ ಬಸು ನಂತರ ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರ ಬರುವುದಿಲ್ಲ' ಎಂದು. ಕಮ್ಯುನಿಸ್ಟ್ ಸಿದ್ಧಾಂತಕ್ಕೆ ಅನುಗುಣವಾಗಿ, ಅಧಿಕಾರ ವ್ಯಾಮೋಹಕ್ಕೆ ಅಂಟಿಕೊಳ್ಳದ ಜ್ಯೋತಿಬಸುರವರು ಅಧಿಕಾರ ತ್ಯಜಿಸಿ, ಬುದ್ಧದೇವ್ ಭಟ್ಟಾಚಾರ್ಯರವರ ನೇತೃತ್ವದಲ್ಲಿಯೂ ಎರಡು ಬಾರಿ ಎಡರಂಗ ಆಯ್ಕೆಯಾಗಿ ಬಂದಿದೆ. ಅಂದರೆ ವ್ಯಕ್ತಿಯ ಪಾತ್ರ ಕೊಡುಗೆಗೆ ಸ್ಥಾನವಿಲ್ಲವೆಂದಲ್ಲ, ಖಂಡಿತಾ ಸ್ಥಾನವಿದೆ. ಅದಕ್ಕಿಂತಲೂ ಮಿಗಿಲಾಗಿ ದುಡಿಯುವ ಜನರ, ಶೋಷಿತ ಸಮುದಾಯವು ಆಳುವ ವರ್ಗದ ವಿರುದ್ಧ ಐಕ್ಯತೆಯಿಂದ ನಡೆಸಿದ ಸುದೀರ್ಘ ಹೋರಾಟ ಮತ್ತು ತ್ಯಾಗ ಬಲಿದಾನಗಳ ಒಟ್ಟು ಫಲಿತಾಂಶವೇ ಇಂದಿನ ಎಡರಂಗ ಸರ್ಕಾರ. ಈ ಹೋರಾಟಗಳಿಗೆ ನೇತೃತ್ವ ನೀಡಿದ್ದು, ಸರಿಯಾದ ಮಾರ್ಕ್ಸ್‌ವಾದಿ ಲೆನಿನ್‌ವಾದಿ ಕಣ್ಣೋಟವುಳ್ಳ ಕಮ್ಯುನಿಸ್ಟ್ ಸಿಪಿಐ(ಎಂ) ಪಕ್ಷ.


ಸಾಧಾರಣ 35 ವರ್ಷಗಳ ಹಿಂದೆ ಪಶ್ಚಿಮ ಬಂಗಾಳ ಹಳ್ಳಿ ಪಟ್ಟಣಗಳಲ್ಲಿ, ಕಲ್ಕತ್ತ ನಗರದಲ್ಲಿ ಹಿಂಸೆಗೆ ಬಲಿಯಾದ ಸಿಪಿಐ(ಎಂ) ಕಾರ್ಯಕರ್ತರ ಸಂಖ್ಯೆ ಸಾವಿರಾರು. ಕರ್ನಾಟಕದ ಪತ್ರಿಕೆಗಳಲ್ಲಿ ಮುಖಪುಟದ ಬಲಭಾಗದಲ್ಲಿ ಕಲ್ಕತ್ತ ಹಿಂಸಾಕಾಂಡದ ಹೆಸರಿನಲ್ಲಿ ಪ್ರತಿನಿತ್ಯ ಬರುತ್ತಿದ್ದ ಸಂಖ್ಯೆಯ ಮೇಲೆ ಮಟ್ಕಾ ಜೂಜಾಟ ನಡೆಸುತ್ತಿದ್ದರು ಎಂಬ ಪ್ರತೀತಿ ಇತ್ತು. ಅಷ್ಟು ಭೀಕರವಾದ ವರ್ಗ ಸಂಘರ್ಷ ಅಲ್ಲಿ ನಡೆದಿತ್ತು. ದುಡಿಯುವ ವರ್ಗ ತನ್ನ ಹಕ್ಕುಗಳಿಗಾಗಿ, ತನಗೆ ದಕ್ಕಬೇಕಾದ ನ್ಯಾಯಬದ್ಧವಾದ ಪಾಲಿಗಾಗಿ ಸೆಟೆದೆದ್ದು ನಿಂತಿತು. ಇದನ್ನು ಸಹಿಸದ ಆಳುವ ವರ್ಗಗಳು ತೀವ್ರ ದಮನಕಾರಿ ಕ್ರಮ ಅನುಸರಿಸಿದರು. 1972ರಲ್ಲಿ ನಡೆದ ಚುನಾವಣೆಯಲ್ಲಿ ಅತ್ಯಂತ ಅಮಾನುಷವಾಗಿ ಗೂಂಡಾ ಧಾಳಿ ನಡೆಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಮುಖ್ಯಮಂತ್ರಿ ಸಿದ್ದಾರ್ಥ ಶಂಕರ್ ರೇ ಆಡಳಿತದಲ್ಲಿ ಮೂರು ಸಾವಿರಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರು ಹತರಾದರು. ಅವರ ಜತೆಯಲ್ಲೇ ಮಾರ್ಕ್ಸ್‌ವಾದದ ಮುಖವಾಡವನ್ನೇ ಧರಿಸಿದ್ದ ನಕ್ಸಲ್‌ವಾದಿಗಳೂ ಕಾಂಗ್ರೆಸ್‌ನೊಂದಿಗೆ ಸೇರಿ ಕಮ್ಯುನಿಸ್ಟ್ ಕಾರ್ಯಕರ್ತರ ಕೊಲೆಗೈದರು.

ದೇಶದಲ್ಲಿ ತುರ್ತುಪರಿಸ್ಥಿತಿ ಬರುವ 5 ವರ್ಷಗಳ ಮೊದಲೇ ಪಶ್ಚಿಮ ಬಂಗಾಳದ ತುರ್ತು ಪರಿಸ್ಥಿತಿ ಜಾರಿಗೆ ಬಂತು. ಅರೆ ಫ್ಯಾಸಿಸ್ಟ್ ಕ್ರೌರ್ಯದ ಮೂಲಕ ಕಮ್ಯುನಿಸ್ಟ್ ಚಳುವಳಿಯನ್ನು ಹೊಸಕಿ ಹಾಕಲು ಆಳುವ ವರ್ಗಗಳು ಶತಾಯ ಗತಾಯ ಯತ್ನಿಸಿದವು.

ಬದಲಾವಣೆಯ ಗಾಳಿ

ಪ್ರಜಾಪ್ರಭುತ್ವ ಚಳುವಳಿಯ ಮೇಲೆ ಕಾಂಗ್ರೆಸ್ಸಿನ ಧಾಳಿಯನ್ನು ವಿಶ್ಲೇಷಿಸಿದ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು, 'ಇಂದು ಬಂಗಾಳಕ್ಕೆ ಬದಲಾದ ಅಪತ್ತು ಮುಂದೆ ದೇಶವನ್ನು ಆವರಿಸಲಿದೆ' ಎಂದು ಹೇಳಿದ್ದು 1975ರಲ್ಲಿ ಸತ್ಯವಾಗಿ ಪರಿಣಮಿಸಿತು. ಪ್ರಜಾಸತ್ತಾತ್ಮಕ ಚಳುವಳಿಯ ವಿರುದ್ಧ ತುರ್ತು ಪರಿಸ್ಥಿತಿಯನ್ನು ಹೇರಲಾಯ್ತು. ಅದರ ವಿರುದ್ಧ ಐಕ್ಯ ಚಳುವಳಿ ನಡೆದು 1977 ರಲ್ಲಿ ಬದಲಾವಣೆಯ ಬಲವಾದ ಗಾಳಿ ದೇಶದಾದ್ಯಂತ ಬೀಸಿತು.

ಪಶ್ಚಿಮಬಂಗಾಳದಲ್ಲಿ 1977ರ ಜೂನ್ 21 ರಂದು ಜ್ಯೋತಿ ಬಸುರವರ ನೇತೃತ್ವದಲ್ಲಿ ಸಿಪಿಐ(ಎಂ), ಸಿಪಿಐ, ಪಾರ್ವರ್ಡರ್ ಬ್ಲಾಕ್,



ಆರ್‌ಎಸ್‌ಪಿ ಮತ್ತಿತರ ಪಕ್ಷಗಳ ನೇತೃತ್ವದಲ್ಲಿ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದಿತು. ನಂತರದ ಮೂವತ್ತು ವರ್ಷಗಳ ಅವಧಿಯಲ್ಲಿ ಸೋಲನ್ನು ಕಾಣಲಿಲ್ಲ ಮಾತ್ರವಲ್ಲ, ಹಲವಾರು ಅಡೆತಡೆಗಳನ್ನು ಎದುರಿಸಿಯೂ ದಿನೇ ದಿನೇ ಜನರಿಗೆ ಹತ್ತಿರವಾಗುತ್ತಾ ಬಂದಿದೆ.

ದೇಶದೆಲ್ಲೆಡೆ, ಬಂಡಾವಳಶಾಹಿ ರಾಜಕೀಯ ಪಕ್ಷಗಳು 5 ವರ್ಷಕ್ಕಿಂತ ಮೊದಲೇ ಅಧಿಕಾರ ಕಳೆದು ಕೊಳ್ಳುತ್ತಿದ್ದರೂ, ಸರ್ಕಾರದ ವಿರೋಧಿ ಭಾವನೆಗಳು (Anti-incumbency) ಬೆಳೆದು ಬರುತ್ತಿದ್ದರೂ, ಬಂಗಾಳದ ಎಡರಂಗ ಸರ್ಕಾರ ಅಧಿಕಾರದಲ್ಲಿ ಮುಂದುವರೆಯುತ್ತಿದೆ ಕಾರಣವೇನು?

ಪ್ರಮುಖ ಸಾಧನೆಗಳು

ಎಡರಂಗ ಸರ್ಕಾರದ ಆಧಾರವಾಗಿರುವ ಪ್ರಮುಖ ಎರಡು 'ಕಾಲು' ಗಳೆಂದರೆ ಒಂದು ಭೂ ಸುಧಾರಣೆ, ಎರಡು ಪಂಚಾಯತ್‌ರಾಜ್ ವ್ಯವಸ್ಥೆ. ಭೂ ಸುಧಾರಣೆಯ ಮೂಲಕ ಭೂಮಿಯನ್ನು ಪಡೆದ ಕೂಲಿಕಾರರು ಬಡ ರೈತರು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಜನಪ್ರತಿನಿಧಿಗಳಾದರು. ಕರ್ನಾಟಕ ರಾಜ್ಯದಲ್ಲಿರುವಂತೆ, ಅಥವಾ ದೇಶದ ಬಹುತೇಕ ರಾಜ್ಯಗಳಲ್ಲಿರುವಂತೆ ಬಂಗಾಳದ ಬಹುತೇಕ ಪಂಚಾಯತ್‌ಗಳ ಅಧಿಕಾರ ಶ್ರೀಮಂತರ ಅಥವಾ ಭೂ ಮಾಲಿಕರ ಕೈಯಲ್ಲಿಲ್ಲ. ಬದಲಾಗಿ ಬಡ ರೈತರ ಕೈಯಲ್ಲಿದೆ. ದೇಶದಲ್ಲಿ ಸಂವಿಧಾನದ 73 ಮತ್ತು 74ರ ತಿದ್ದುಪಡಿ ಆಗುವ 17 ವರ್ಷಗಳ ಮೊದಲೇ ಪಂಚಾಯತ್‌ರಾಜ್ ವ್ಯವಸ್ಥೆ ಪಶ್ಚಿಮ ಬಂಗಾಳದಲ್ಲಿ ಜಾರಿಗೆ ಬಂದಿತ್ತು. ಕರ್ನಾಟಕದಲ್ಲಿಯೂ ಸಂವಿಧಾನ ತಿದ್ದುಪಡಿಯಾಗುವ ಮೊದಲೇ 1984 ರಲ್ಲಿ ಪಂಚಾಯತ್ ವ್ಯವಸ್ಥೆ ಜಾರಿಗೆ ಬಂದಿತ್ತು. ಅದನ್ನು ಜಾರಿಗೆ ತರುವ ಮೊದಲು ಅಂದಿನ ಗ್ರಾಮೀಣಾಭಿವೃದ್ಧಿ ಸಚಿವ ನಜೀರ್‌ಸಾಬ್ ಪಶ್ಚಿಮ ಬಂಗಾಳಕ್ಕೆ ಹೋಗಿ ಅಧ್ಯಯನ ನಡೆಸಿದ್ದರು ಎಂಬುದು ಗಮನಿಸಬೇಕಾದ ಸಂಗತಿ.



ಜ್ಯೋತಿಬಸು - ಬುದ್ದದೇವ್ ಭಟ್ಟಾಚಾರ್ಯ

ಭೂ ಸುಧಾರಣೆಯ ಮೂಲಕ 13 ಲಕ್ಷ ಎಕರೆ ಜಮೀನನ್ನು 25 ಲಕ್ಷ ಭೂ ಹೀನರಿಗೆ ಸಣ್ಣ-ರೈತರಿಗೆ ಹಂಚುವುದರ ಮೂಲಕ ಗ್ರಾಮೀಣ ಪ್ರದೇಶದ ಜನರ ಕೊಳ್ಳುವ ಶಕ್ತಿ ಹೆಚ್ಚಾಯಿತು. ಒಂದು ಎಕರೆ ಜಮೀನಿಗೆ 1 ಲಕ್ಷ ಎಂದು ಪರಿಗಣಿಸಿದರೂ 1 ಲಕ್ಷ 30 ಸಾವಿರ ಕೋಟಿ ರೂ. ಮೌಲ್ಯದ ಆಸ್ತಿಯನ್ನು ಶ್ರೀಮಂತರಿಂದ ಬಡವರಿಗೆ ನೀಡಿದಂತಾಯಿತು. ಇದರ ಜತೆಯಲ್ಲಿ 14 ಲಕ್ಷ ಗೇಣಿದಾರರು ತಮ್ಮನ್ನು ನೋಂದಾಯಿಸಿ ಕೊಳ್ಳುವುದರ ಮೂಲಕ ಇನ್ನು 11 ಲಕ್ಷ ಎಕರೆ ಜಮೀನು ಶಾಶ್ವತವಾಗಿ ಅವರ ಕೈಯಲ್ಲಿರುವಂತೆ ಮಾಡಿ ಕೊಳ್ಳಲು ಸಾಧ್ಯವಾಯಿತು.

ಇಂತಹ ಅಭೂತಪೂರ್ವವಾದ ಗ್ರಾಮೀಣ ಪ್ರದೇಶದ ಬೆಳವಣಿಗೆಯನ್ನು ಇನ್ನಷ್ಟು ಮುಂದಕ್ಕೆ ಕೊಂಡೊಯ್ಯಬೇಕಾದರೆ ಕೈಗಾರೀಕರಣಕ್ಕೆ ಒತ್ತು ನೀಡಬೇಕಾಗಿದೆ. 30 ವರ್ಷಗಳು ತುಂಬುತ್ತಿರುವ ಇಂದಿನ ಸಂದರ್ಭದಲ್ಲಿ ಯಾವುದೇ ಅಡೆತಡೆ ಬಂದರೂ ಕೈಗಾರೀಕರಣವನ್ನು ಮುಂದುವರಿಸುವು ದಾಗಿ ಎಡರಂಗ ಸರ್ಕಾರ ಪಣ ತೊಟ್ಟಿದೆ.

ಹಾದಿ ಸುಗಮವಲ್ಲ

30 ವರ್ಷಗಳಿಂದ ಅಧಿಕಾರ ನಡೆಸುತ್ತಿದ್ದರೂ ಜನರ ಮೂಲಭೂತ ಅವಶ್ಯಕತೆಗಳನ್ನು ಸಂಪೂರ್ಣವಾಗಿ ಪೂರೈಸಲು ಸಾಧ್ಯವಾಗಿಲ್ಲ. ಬಂಡವಾಳಶಾಹಿ, ಭೂಮಾಲಕ ಪ್ರಭುತ್ವದ ಅಡಿಯಲ್ಲಿ ರಾಜ್ಯ ಸರಕಾರಗಳ ಪಾತ್ರ ಚಿಕ್ಕದು. ಆದರೂ ತನ್ನ ಇತಿಮಿತಿಯೊಳಗೆ ಜನಸಾಮಾನ್ಯರಿಗೆ ಎಡರಂಗ ಸವಲತ್ತುಗಳನ್ನು ನೀಡಲು ಪ್ರಾಮಾಣಿಕ ಪ್ರಯತ್ನ ನಡೆಸಿದೆ. ಅದರ ಭಾಗವಾಗಿಯೇ ಕೈಗಾರಿಕೆಗಳ ಬೆಳವಣಿಗೆಗೆ ಪ್ರಯತ್ನಿಸುತ್ತಿದೆ.

ಹಿಂದೆ ಪ್ರತಿ ಚುನಾವಣೆಯ ಸಂದರ್ಭದಲ್ಲೂ, 'ಎಡರಂಗ ಸರಕಾರ ಇರುವವರೆಗೆ ಕೈಗಾರಿಕೆಗಳ ಬೆಳವಣಿಗೆ ಸಾಧ್ಯವಿಲ್ಲ' ಎಂದು ದೂಷಿಸುತ್ತಿದ್ದ ಕಾಂಗ್ರೆಸ್, ಬಿಜೆಪಿ, ತೃಣಮೂಲ ಕಾಂಗ್ರೆಸ್ ಮೊದಲಾದ ವಿರೋಧ ಪಕ್ಷಗಳುಇಂದು ಕೈಗಾರಿಕೆಗಳ ಬೆಳವಣಿಗೆ ಅಡ್ಡಗಾಲು ಹಾಕುತ್ತಿವೆ. ಸಿಂಗೂರ್‌ನಲ್ಲಿ ನಡೆದ, ನಂದಿಗ್ರಾಮದಲ್ಲಿ ಮುಂದಿವರಿಯುತ್ತಿರುವ ಘಟನೆಗಳೇ ಇದಕ್ಕೆ ಸಾಕ್ಷಿ.

ಕೈಗಾರಿಕಾ ನೀತಿ

ಪಶ್ಚಿಮ ಬಂಗಾಳ ಸರಕಾರವು 1994ರಲ್ಲಿ ಕೈಗಾರಿಕಾ ನೀತಿಯನ್ನು ಅಂಗೀಕರಿಸಿ ಸಣ್ಣ ಕೈಗಾರಿಕೆಗಳ ಬೆಳವಣಿಗೆಗೆ ಉತ್ತೇಜನ ನೀಡಿತು. ಅದರಿಂದಾಗಿ 1994-95ರಲ್ಲಿ 19.1 ಲಕ್ಷದಷ್ಟಿದ್ದ ಸಣ್ಣ ಕೈಗಾರಿಕೆಗಳ ಸಂಖ್ಯೆಯು 2000-01ರಲ್ಲಿ 27.7 ಲಕ್ಷಕ್ಕೆ ಏರಿತು. ಉದಾರೀಕರಣ ನೀತಿ ಜಾರಿಗೆ ಬೇರೆ ರಾಜ್ಯಗಳಲ್ಲಿ ಸಣ್ಣ ಕೈಗಾರಿಕೆಗಳು ನಾಶಗೊಂಡು ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದೆ. ಆದ್ದರಿಂದಲೇ ಪಶ್ಚಿಮ ಬಂಗಾಳವು ಸಣ್ಣ ಕೈಗಾರಿಕೆಗಳ ಒಟ್ಟು ಘಟಕ ಮತ್ತು ಉದ್ಯೋಗ ಅವಕಾಶದ ಸಂಖ್ಯೆಯಲ್ಲಿ ದೇಶದಲ್ಲಿಯೇ ಪ್ರಥಮ ಸ್ಥಾನ ಗಳಿಸಿದೆ.

ಈಗ ದೊಡ್ಡ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಪಶ್ಚಿಮ ಬಂಗಾಳ ಸರಕಾರ ನಿರ್ಧರಿಸಿದೆ. ದೊಡ್ಡ ಕೈಗಾರಿಕೆಗಳಿಗೆ ವಿಶಾಲವಾದ ಭೂಮಿ ಬೇಕಾಗುತ್ತದೆ. ಆದರೆ ಸಮಗ್ರ ಭೂಸುಧಾರಣೆ ಜ್ಯಾರಿ ಮಾಡಿದುದರಿಂದ ಬಂಗಾಳದಲ್ಲಿ ಬೀಳು ಭೂಮಿ ಇರುವುದು ಕೇವಲ ಶೇ.1ರಷ್ಟು ಮಾತ್ರ. ಅಖಿಲ ಭಾರತ ಮಟ್ಟದಲ್ಲಿ ಇದು ಶೇ.17 ಕೈಗಾರಿಕೆ ಅಭಿವೃದ್ಧಿ ಮಾಡಲು ಕೃಷಿ ಭೂಮಿಯನ್ನು ಪಡೆಯಬೇಕಾಗುತ್ತದೆ.

ಬೆಂಗಳೂರಿನ ಸಮೀಪದ ಹೊಸಕೋಟೆಯಲ್ಲಿ 4000 ಎಕರೆ ಸರ್ಕಾರಿ ಭೂಮಿ ಇದ್ದು ಅದನ್ನು ವಿಶೇಷ ಆರ್ಥಿಕ ವಲಯಕ್ಕೆ ನೀಡಲಾಗುತ್ತಿದೆ ಎಂದು ವರದಿಯಾಗಿದೆ. ಆದರೆ ಭೂಮಿಯನ್ನು ಬಡವರಿಗೆ ಹಂಚಲಿಲ್ಲ. ಆದರೆ ಪಶ್ಚಿಮ ಬಂಗಾಳದಲ್ಲಿ ಇಷ್ಟೊಂದು ದೊಡ್ಡ ಮೊತ್ತದ ಭೂಮಿ ಇಲ್ಲವೇ ಇಲ್ಲ. ಆದ್ದರಿಂದ ಕೃಷಿಕರಿಂದ ಭೂಮಿ ಪಡೆಯದೆ ಬೇರೆ ದಾರಿಯೂ ಇಲ್ಲ.

■ ಬಾಲಕೃಷ್ಣ ಶೆಟ್ಟಿ

ಎಡರಂಗ ಸರಕಾರವನ್ನು ರಕ್ಷಿಸಬೇಕಿದೆ

ಎಡರಂಗದ 30ನೇ ವಾರ್ಷಿಕವನ್ನು ಆಚರಿಸುವಾಗ ದುಡಿಯುವ ಜನರ ಬೆವರಿನಿಂದ ಕಟ್ಟಲಾದ ಈ ಸರಕಾರವನ್ನು ರಕ್ಷಿಸಬೇಕಾಗಿದೆ. ಇದಕ್ಕಾಗಿ ದೇಶದಾದ್ಯಂತ ಬೆಂಬಲ, ಪ್ರಚಾರದ ಅವಶ್ಯವಿದೆ. ಕಳೆದ ಎರಡು ದಶಕಗಳಲ್ಲಿ ದೇಶದಾದ್ಯಂತ ಕೋಮು ಚಟುವಟಿಕೆಗಳು ಭೀಭತ್ಸರೂಪ ತಳೆದಿರುವಾಗ 80 ಮಿಲಿಯ ಜನರನ್ನು ಹೊಂದಿರುವ ಪಶ್ಚಿಮ ಬಂಗಾಳದಲ್ಲಿ ಕೋಮು ಸೌಹಾರ್ದತೆ ಮೆರೆದಾಡುತ್ತಾ ಬರುತ್ತಿದೆ. ಇದು ಅಲ್ಲಿನ ಎಡಚಳುವಳಿಯ ಕೊಡುಗೆ. ಅಲ್ಪ ಸಂಖ್ಯಾತರು ಅಲ್ಲಿ ನೆಮ್ಮದಿಯ ಜೀವನ ನಡೆಸಬಹುದು.

ದುರ್ಬಲ ರಾಜ್ಯವೆಂದು ಪರಿಗಣಿಸಿರುವ ಕರ್ನಾಟಕದಂತಹ ರಾಜ್ಯಗಳಲ್ಲಿ ಎಡಚಳುವಳಿಯನ್ನು ವಿಸ್ತರಿಸಿದರೆ, ಅದು ಎಡರಂಗ ಸರಕಾರವನ್ನು ರಕ್ಷಿಸುವುದಕ್ಕೆ ನಮ್ಮ ಕಾಣಿಕೆ ನೀಡಿದಂತೆ. ಇಲ್ಲವಾದಲ್ಲಿ ಎಲ್ಲಾ ಕಮ್ಯೂನಿಸ್ಟ್ ವಿರೋಧಿ ಶಕ್ತಿಗಳು ಪಶ್ಚಿಮ ಬಂಗಾಳದ ಮೇಲೆ ಕೇಂದ್ರೀಕರಿಸಿ ಕಿತ್ತುಹಾಕಲು ಬಯಸುತ್ತವೆ. ಸಿಂಗೂರು, ನಂದಿಗ್ರಾಮದ ಘಟನೆಗಳು ಕಮ್ಯೂನಿಸ್ಟ್ ವಿರೋಧಿಗಳ ಕುಕೃತ್ಯಕ್ಕೆ ಸಣ್ಣ ಉದಾಹರಣೆ.

ಸಂಸದೀಯ ಪ್ರಜಾಸತ್ತೆಯಲ್ಲಿ ಸ್ವಲ್ಪವೂ ನಂಬಿಕೆ ಇಲ್ಲದ ನಕ್ಸಲರು, ಸಂಸದೀಯ ವ್ಯವಸ್ಥೆಯನ್ನು ಒಳಗಿನಿಂದಲೇ ಕತ್ತರಿಸಿ ಹಾಕುವ ಕಾಂಗ್ರೆಸ್, ಬಿಜೆಪಿ ಮತ್ತದರ ಹಿಂಬಾಲಕರು ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಎಡರಂಗ ಸರಕಾರವನ್ನು ಕಿತ್ತುಹಾಕಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಸಾರಾಸಗಟಾಗಿ ಹೇಳಬೇಕಾಗಿದೆ. ದೇಶದಲ್ಲಿ ಎಡ, ಪ್ರಜಾಸತ್ತಾತ್ಮಕ ಪರ್ಯಾಯವನ್ನು ಕಟ್ಟಬೇಕಾದ ಇಂದಿನ ಪರಿಸ್ಥಿತಿಯಲ್ಲಿ, ಇದು ಹಿಂದೆಂದಿಗಿಂತಲೂ ಹೆಚ್ಚು ಅವಶ್ಯವಾಗಿದೆ.

ಆತ್ಮಹತ್ಯೆಯ ಸರದಿ ಈಗ ಕಬ್ಬು ಬೆಳೆದ ರೈತರದ್ದು. ಬಿಕ್ಕಟ್ಟಿನ ಮೂಲ ಏನು? ಸಮಸ್ಯೆ ಸ್ವರೂಪವೇನು?

ಲಕ್ಷ ಲಕ್ಷ ಟನ್ ಕಬ್ಬು ಬೆಳೆದರೂ.... ತುತ್ತಿನ ಚೀಲ ಬರಿದೋ ಬರಿದು....



ಭಾರತ ದೇಶದಲ್ಲಿ ಉದಾರೀಕರಣ ಕುಣಿಕೆ ಯಾವತ್ತೂ ಕೃಷಿ ರಂಗಕ್ಕೆ ಬಿತ್ತೋ ಅಂದಿನಿಂದ್ಲೆ ಅನ್ನದಾತ ರೈತನ ಆತ್ಮಹತ್ಯೆಗಳು ಸರಣಿಯೂ ಆರಂಭಗೊಳ್ಳು ಎನ್ನುವುದು ಗೊತ್ತಿರುವ ಸಂಗತಿ. ಬೀಜ, ಗೊಬ್ಬರಗಳಿಗಾಗಿ, ಖಾಸಗೀ ಲೇವಾದೇವಿದಾರರಿಂದ, ಬ್ಯಾಂಕ್‌ಗಳಿಂದ, ಪಡೆದ ಸಾಲ-ಸಾಲದ ಮೇಲಿನ ಬಡ್ಡಿ ದಿನದಿನಕ್ಕೆ ಏರುತ್ತಿರುವಾಗಲೇ ಮತ್ತು ತಾನು ಬೆಳೆದ ಬೆಳೆಗೆ ಕನಿಷ್ಠ ಬೆಲೆಯು ಸಿಗದೆ ಹೋದಾಗ ಸಹಜವಾಗಿಯೇ ರೈತ ಆಳವಾದ ಪ್ರಪಾತಕ್ಕೆ ಕುಸಿದಿದ್ದಾನೆ. ತನ್ನ ಹೊಲದಲ್ಲಿ ಬೆಳೆದ ಹತ್ತಿ, ತೊಗರಿ, ಮೆಣಸಿನ ಕಾಯಿ ಟಮೋಟೋ, ಆಲೂಗಡ್ಡೆಯಿಂದ ನನ್ನ ಬದುಕು ಸಾಗಲಾರದು, ನಾನು ಪಡೆದ ಸಾಲವನ್ನು ತೀರಿಸಲಾಗದು ಎಂದು ಮನವರಿಕೆಯಾಗುತ್ತಿದ್ದಂತೆ, ಸಾಲಗಾರರ ಕಾಟ ವಿಪರೀತವಾಗುತ್ತಿದ್ದಂತೆ, ಅವನು ಅಂತಿಮವಾಗಿ ಕಂಡು ಕೊಂಡ ದಾರಿ ಆತ್ಮಹತ್ಯೆ.... ಅಂದು ಹತ್ತಿ, ಮೆಣಸಿನಕಾಯಿಯಿಂದ ಆರಂಭಗೊಂಡ ಅನ್ನದಾತನ ಈ ಆತ್ಮಹತ್ಯೆ ಸರಣಿ, ಕಾಫಿ, ಏಲಕ್ಕಿ, ಮೆಣಸು ಹಾಗೂ ವೆನಿಲಾ ಬೆಳೆಯುವಂತಹ ಶ್ರೀಮಂತ ರೈತರನ್ನು ಬೆಂಬತ್ತಿ ಇದೀಗ ಸಿಹಿಯಾದ ಕಬ್ಬು ಬೆಳೆದ ರೈತರ ಕೊರಳಿಗೆ ಉರುಳಾಗಿ ಪರಿಣಮಿಸಿದೆ. ರಾಜ್ಯದಲ್ಲಿ ಈ ಬಾರಿ ಅತ್ಯಧಿಕ ಕಬ್ಬನ್ನು ಬೆಳೆದ ಪರಿಣಾಮವಾಗಿಯೇ ಸುಮಾರು 85ಕ್ಕೂ ಅಧಿಕ ಕಬ್ಬು ಬೆಳೆಗಾರರು ಈ ಒಂದೇ ವರ್ಷದಲ್ಲೇ ಆತ್ಮಹತ್ಯೆಗೆ ಶರಣಾಗಿದ್ದಾರೆ. ಇದು ತೀವ್ರಗೊಳ್ಳುತ್ತಿರುವ ಕೃಷಿ ಬಿಕ್ಕಟ್ಟಿಗೆ ಪ್ರತ್ಯಕ್ಷ ಸಾಕ್ಷಿಯಂತಾಗಿದೆ.

ಕಾರ್ಖಾನೆಗಳ ಆಮಿಷಕ್ಕೆ ಬಲಿಯಾದ ರೈತ..

2006-07ನೇ ಸಾಲಿನಲ್ಲಿ ರಾಜ್ಯದಲ್ಲಿ ಸುಮಾರು 3.70 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸುಮಾರು 388 ಲಕ್ಷ ಮೆಟ್ರಿಕ್ ಟನ್ ಕಬ್ಬು ಬೆಳೆಯಾಗಿದೆ. 2004-05 ರಲ್ಲಿ ಇದರ ಪ್ರಮಾಣ ಸುಮಾರು 256 ಲಕ್ಷ ಮೆಟ್ರಿಕ್ ಟನ್‌ಗಳಾಗಿತ್ತು. ಅಂದರೆ ಕಳೆದ ಮೂರು ವರ್ಷಗಳಲ್ಲಿ ಸುಮಾರು 100 ಲಕ್ಷ ಮೆಟ್ರಿಕ್ ಟನ್ ಕಬ್ಬನ್ನು ಅಧಿಕವಾಗಿ ಬೆಳೆಯಲಾಗಿದೆ. ರೈತರು ಭಾರಿ ಪ್ರಮಾಣದಲ್ಲಿ ಕಬ್ಬಿನ ಬೆಳೆ ಬೆಳೆಯಲು ಸರ್ಕಾರದ ಉದಾರೀಕರಣದ ನೀತಿಯೇ ನೇರ ಕಾರಣ. ಯಾಕೆಂದರೆ ಕಬ್ಬನ್ನು ಬೆಳೆಯುವ ರೈತನಿಗೆ ಯಾವುದೇ ಸಬ್ಸಿಡಿ ನೀಡಲು ಸರ್ಕಾರ ತಯಾರಿಲ್ಲ. ಆದರೆ ಕಬ್ಬು ಅರೆಯುವ ಸಕ್ಕರೆ ಕಾರ್ಖಾನೆಗೆ ಮಾತ್ರ ಪ್ರತಿ ಟನ್‌ಗೆ 300 ರೂ. ಸಬ್ಸಿಡಿ ನೀಡಿತು. ಸರ್ಕಾರದ ಈ ಸಬ್ಸಿಡಿ ಹಣವನ್ನು ಕಬಳಿಸಲು ಸಕ್ಕರೆ ಕಾರ್ಖಾನೆಗಳು ರೈತರು ಹೆಚ್ಚೆಚ್ಚು ಕಬ್ಬನ್ನು ಬೆಳೆಯಲು ಪ್ರಚೋದನೆ ನೀಡಿದವು. ಕಾರ್ಖಾನೆಗಳು ಬೀಸಿದ ಈ ಹುಸಿ ಆಮಿಷಕ್ಕೆ ಬಲಿಯಾದ ರೈತಾಪಿ ವರ್ಗಕ್ಕೆ ತುಂಬಾ ಹಣ ಸಿಗುವ ಆಸೆಯಿಂದ ನಾ ಮುಂದು ತಾ ಮುಂದು ಎಂಬಂತೆ ಕಬ್ಬು ಬೆಳೆದರು. ಇದರ ಪರಿಣಾಮವಾಗಿ ಈ ಬಾರಿ ಕಬ್ಬಿನ ಇಳುವರಿ 388 ಲಕ್ಷ ಮೆಟ್ರಿಕ್ ಟನ್‌ಗೆ ನೆಗೆಯಿತು. ಆದರೆ ಈ ಭಾರೀ ಪ್ರಮಾಣದ ಕಬ್ಬನ್ನು ಅರೆಯುವಷ್ಟು ಸಾಮರ್ಥ್ಯ ನಮ್ಮ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಇದೆಯೋ? ಇಲ್ಲ. ಹೀಗಾಗಿ ರಾಜ್ಯದಲ್ಲಿ ಬೆಳೆಯಲಾದ ಕಬ್ಬಿನಲ್ಲಿ ಸುಮಾರು 25 ಲಕ್ಷ ಮೆಟ್ರಿಕ್ ಟನ್ ಕಬ್ಬು ಅನಾಥವಾಗಿ ಬಿದ್ದಿದೆ. ಇದರಿಂದ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳ ಮುಂದೆಲ್ಲ ಕಬ್ಬಿನ ರಾಶಿಯೋ ರಾಶಿ...



ಮಂಡ್ಯ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ

ರಾಜ್ಯದ ಸಕ್ಕರೆ ಕಾರ್ಖಾನೆಗಳ ಚಿತ್ರಣ

ಒಟ್ಟು ಕಾರ್ಖಾನೆಗಳು	- 55
ಇದರಲ್ಲಿ ಸರ್ಕಾರಿ	- 02
ಸರ್ಕಾರಿ / ಖಾಸಗಿ ಸಹಭಾಗಿತ್ವ	- 01
ಸಹಕಾರಿ	- 22
ಖಾಸಗಿ	- 22
ಕೆಲಸ ನಿರ್ವಹಿಸುತ್ತಿರುವವು	- 47
ಕೆಲಸ ಮಾಡದ ಕಾರ್ಖಾನೆಗಳು	- 08


ಕಬ್ಬು ಅರೆಯಲು ಸಾಮರ್ಥ್ಯ ಅಂದಾಜು ದಿನಕ್ಕೆ 1.50 ಲಕ್ಷ ಮೆ.ಟನ್.

85 ಕಬ್ಬು ಬೆಳೆಗಾರರ ಆತ್ಮಹತ್ಯೆ...

ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳ ಸರಣಿ ಮುಂದುವರಿದೇ ಇದೆ. ಪರ್ಯಾಯ ಕೃಷಿ ನೀತಿಯನ್ನು ಜಾರಿ ಮಾಡದ ಹೊರತು ಈ ಆತ್ಮಹತ್ಯೆ ಸರಣಿ ತಡೆಯಲು ಸಾಧ್ಯವಿಲ್ಲ. ಆದರೆ ಆ ಬಗ್ಗೆ ರಾಜ್ಯದ ಕೋ-ಜಾ ಸರ್ಕಾರದ ಮುಖ್ಯಮಂತ್ರಿ, ಮಂತ್ರಿಮಹೋದಯರು ತಲೆ ಕೆಡಿಸಿಕೊಂಡಿಲ್ಲ. ಬದಲಾಗಿ-ಜನತಾ ದರ್ಶನ, ಗ್ರಾಮ ವಾಸ್ತವ್ಯ, ಸಂವಾದದ ಮೂಲಕ ಹುಸಿ-ಭರವಸೆ ನೀಡುವ ತಮ್ಮ ಯತ್ನ ಮುಂದುವರೆಸಿದ್ದಾರೆ. ಈ ಬಾರಿ ರಾಜ್ಯದಲ್ಲಿ ಸುಮಾರು 85 ಜನ ಕಬ್ಬು ಬೆಳೆಗಾರರು ಆತ್ಮಹತ್ಯೆಗೆ ಶರಣಾಗಿರುವುದು ಈ ಸರ್ಕಾರದ ನಿರ್ಲಕ್ಷ್ಯದ ಆಡಳಿತಕ್ಕೆ ಹಿಡಿದ ಕನ್ನಡಿಯಲ್ಲವೇ? ಕೇವಲ ಆತ್ಮಹತ್ಯೆ ಮಾಡಿಕೊಳ್ಳಬೇಡಿ ಎಂದು ಪದೇ-ಪದೇ ಮಾಡಲಾಗುವ ವಿನಂತಿಯಿಂದ ಮಾತ್ರವೇ ರೈತರ ಆತ್ಮಹತ್ಯೆ ತಡೆಯಲು ಸಾಧ್ಯವಿಲ್ಲ. ರೈತರ ಸಮಸ್ಯೆ ಪರಿಹಾರಕ್ಕಾಗಿ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ರೈತರ ಸಭೆ ನಡೆಸುವ ದಿನವೇ ರಾಜ್ಯದಲ್ಲಿ 3 ರೈತರು ಆತ್ಮಹತ್ಯೆಗೆ ಶರಣಾಗಿರುವುದು ಏನನ್ನು ಸೂಚಿಸುತ್ತದೆ?



■ **ಮಾರುತಿ ಮಾನ್ಪಡೆ**
ನಿರೂಪಣೆ: **ಕೆ.ಮಹಂತೇಶ್**



ರಾಜ್ಯದಲ್ಲಿ ಕಬ್ಬು ಬೆಳೆಯುವ ವಿಸ್ತೀರ್ಣ ಇಳುವರಿ ಪ್ರಮಾಣ

2004-05
3.05 ಲಕ್ಷ ಹೆಕ್ಟೇರ್
256 ಲಕ್ಷ ಮೆಟ್ರಿಕ್ ಟನ್

2005-06
3.70 ಲಕ್ಷ ಹೆಕ್ಟೇರ್
370 ಲಕ್ಷ ಮೆಟ್ರಿಕ್ ಟನ್

2006-07
3.70 ಲಕ್ಷ ಹೆಕ್ಟೇರ್
388 ಲಕ್ಷ ಮೆಟ್ರಿಕ್ ಟನ್

ಕೈ ಚೆಲ್ಲಿದ ಕೋ-ಜಾ ಸರ್ಕಾರ

ರಾಜ್ಯದಲ್ಲಿ ಈ ಬಾರಿ ಕಬ್ಬಿನ ಇಳುವಳಿ ಹೆಚ್ಚಾಗಲಿದೆ ಎಂಬ ಕಟು ಸತ್ಯ ಸರ್ಕಾರಕ್ಕೆ, ಸರ್ಕಾರಿ ಅಧಿಕಾರಿಗಳಿಗೆ ಆರು ತಿಂಗಳ ಮೊದಲೇ ಗೊತ್ತಿತ್ತು. ಈಗ ಅರೆಯದೆ ಉಳಿದಿರುವ 25 ಲಕ್ಷ ಮೆಟ್ರಿಕ್‌ಗಳಷ್ಟು ಕಬ್ಬನ್ನು ಅರೆಯಲು ಬೇಕಾದ ಮುಂಜಾಗ್ರತೆ ವಹಿಸಬಹುದಿತ್ತು. ಆದರೆ ಆ ಬಗ್ಗೆ ರಾಜ್ಯ ಸರ್ಕಾರ ತಲೆ ಕೆಡಿಸಿಕೊಳ್ಳಲಿಲ್ಲ. ಕೇವಲ ಕೇಂದ್ರ ಸರ್ಕಾರದತ್ತ ಕೈ ತೋರಿಸಿ, ಕೈ ಚೆಲ್ಲಿತು. ಕೇಂದ್ರ ಸರ್ಕಾರವು ಕೂಡ ಕೇವಲ ರಫ್ತಿಗೆ ಉತ್ತೇಜನ ನೀಡಲು ರಫ್ತುದಾರರಿಗೆ ಸಬ್ಸಿಡಿ ನೀಡಿದ ಹೊರತು ಕಬ್ಬು ಬೆಳೆಗಾರರಿಗೆ ಯಾವುದೇ ರಿಯಾಯಿತಿ ನೀಡಲಿಲ್ಲ. ರಾಜ್ಯ ಸರ್ಕಾರವೂ ಕೇಂದ್ರ ಸರ್ಕಾರದ ಈ ನೀತಿ ಬದಲಾಗಬೇಕೆಂದು ಆಗ್ರಹಿಸದೆ ಕಣ್ಣು ಮುಚ್ಚಿ ಕೇಂದ್ರದ ಉದಾರೀಕರಣ ನೀತಿಗೆ ಜೈ ಎಂದಿತು. ಪರಿಣಾಮವಾಗಿ ಈ ಬಾರಿ ರಾಜ್ಯದಲ್ಲಿ ಸುಮಾರು 85 ಕೇವಲ ಕಬ್ಬು ಬೆಳೆಗಾರರು ಆತ್ಮಹತ್ಯೆಗೆ ಶರಣಾದ ಆತಂಕದ ಸಂಗತಿಗಳು ಘಟಿಸಿದವು.

ಅವೈಜ್ಞಾನಿಕ ಪರಿಹಾರ

ಕೇಂದ್ರ-ರಾಜ್ಯ ಸರ್ಕಾರಗಳು 120 ಕೋಟಿ ಜನಸಂಖ್ಯೆ ಮೀರಿರುವ ಈ ಬೃಹತ್ ದೇಶದ ಜನತೆಯ ಬಾಯಲ್ಲಿ ಕೊಂಚವಾದರೂ ಸಕ್ಕರೆ ಹಾಕುವ ಪ್ರಯತ್ನ ನಡೆಸಲಿಲ್ಲ. ಬದಲಾಗಿ ರಫ್ತು ಉತ್ತೇಜಿಸಲು ಸಾಕಷ್ಟು ಸಬ್ಸಿಡಿ ನೀಡಿದವು. ಆದರೆ ಜಾಗತಿಕವಾಗಿಯೂ ಈ ಬಾರಿ ಕಬ್ಬಿನ ಇಳುವಳಿ ಅಧಿಕವಾಗಿದೆ. ಆದರಿಂದ ಸಕ್ಕರೆ ಉತ್ಪಾದನೆಯೂ ಹೆಚ್ಚಳವಾಗಿದೆ. ಹೀಗಾಗಿ ಭಾರತದಿಂದ ಯಾವ ಪ್ರಮಾಣದಲ್ಲಿ ಸಕ್ಕರೆಯನ್ನು ರಫ್ತು ಮಾಡಬೇಕೆಂಬ ಗುರಿ ಹೊಂದಲಾಗಿತ್ತೋ ಅದು ಸಾಧ್ಯವಾಗಿಲ್ಲ. ಮತ್ತೊಂದೆಡೆ ದೇಶಕ್ಕೆ ಆಮದಾಗುತ್ತಿರುವ ಸಕ್ಕರೆ ನಿಂತಿದೆ ಎಂದು ಸರ್ಕಾರ ಮೇಲ್ನೋಟಕ್ಕೆ ಹೇಳುತ್ತಿದೆ. ಆದರೆ ಅದು ಸತ್ಯವಲ್ಲ. ಸರ್ಕಾರ ಒಪ್ಪಿಕೊಂಡಿರುವ ಉದಾರೀಕರಣ ನೀತಿಯ ಭಾಗವಾಗಿ ದೇಶದೊಳಗೆ ಸಕ್ಕರೆ ಆಮದು ಆಗುತ್ತಲೇ ಇದೆ. ಹೀಗಾಗಿ ಸಕ್ಕರೆ ಕಾರ್ಖಾನೆಗಳಲ್ಲಿ ಸಕ್ಕರೆ ಮೂಟೆಗಳ ರಾಶಿ ಬಿದ್ದಿದೆ. ಪರಿಸ್ಥಿತಿ ಹೀಗಿರುವಾಗ ರಾಜ್ಯದಲ್ಲಿ ಆಡಳಿತ ಮಾಡುತ್ತಿರುವ ಸಮ್ಮಿಶ್ರ ಸರ್ಕಾರ ಮಾತ್ರ ಕಾಟಾಚಾರದ ಪರಿಹಾರ ಘೋಷಿಸಿದೆ. ಸರ್ಕಾರ ಘೋಷಿಸಿರುವ ಕಾರ್ಖಾನೆಯಲ್ಲಿ ಅರೆಯದೆ ಉಳಿದಿರುವ ರೈತರ ಪ್ರತಿ ಹೆಕ್ಟೇರ್ ಕಬ್ಬಿಗೆ ರೂ.25 ಸಾವಿರ ಪರಿಹಾರದ ಭರವಸೆ. ಆದರೆ ರಾಜ್ಯ ಸರ್ಕಾರವೇ ಸ್ವತಃ ಒಪ್ಪಿಕೊಂಡಿರುವಂತೆ i ಹೆಕ್ಟೇರ್‌ನಲ್ಲಿ ಕಬ್ಬು ಬೆಳೆಯಲು ಆಗುವ ವೆಚ್ಚ 50 ಸಾವಿರ ರೂಪಾಯಿಗಳು. ಅದೂ ಅಲ್ಲದೆ ಸಣ್ಣ ಮತ್ತು ಅತಿ ಸಣ್ಣ ರೈತರು ಕಬ್ಬಿನ ಖರ್ಚು ಇನ್ನೂ ದುಬಾರಿಯೇ ಆಗುತ್ತದೆ. ಹೀಗಿರುವಾಗ ಸರ್ಕಾರ ಘೋಷಿಸಿರುವ ಈ ಪರಿಹಾರದಿಂದ ಶ್ರೀಮಂತ-ರೈತರಿಗೆ ಸ್ವಲ್ಪ ಪ್ರಮಾಣದಲ್ಲಿ ಸಹಾಯವಾಗುವುದನ್ನು ಬಿಟ್ಟರೆ ಇದು ಸಣ್ಣ, ಅತಿ ಸಣ್ಣ ರೈತರಿಗಂತೂ ಅರೆ ಕಾಸಿನ ಮಜ್ಜಿಗೆಯೇ ಸರಿ. ಆದ್ದರಿಂದ ಇಂತಹ ಸಂಕಷ್ಟದಿಂದ ಈ ವಿಭಾಗವನ್ನು ಪಾರು ಮಾಡಲು ಅವರಿಗಾಗಿಯೇ ವಿಶೇಷ ಪ್ಯಾಕೇಜ್ ರೂಪಿಸ ಬೇಕಿರುವುದು ಇವತ್ತಿನ ಅನಿವಾರ್ಯವಾಗಿದೆ.

ಪರ್ಯಾಯ ದಾರಿ ಏನು?

ಅಖಿಲ ಭಾರತ ಕಿಸಾನ್ ಸಭಾ ಮತ್ತು ಕರ್ನಾಟಕದಲ್ಲಿ ಪ್ರಾಂತ ರೈತ ಸಂಘ ದೇಶದಲ್ಲಿ ಮತ್ತು ರಾಜ್ಯದಲ್ಲಿ ಕಬ್ಬು ಬೆಳೆಗಾರರು ಎದುರಿಸುತ್ತಿರುವ ಸಂಕಷ್ಟಗಳನ್ನು ಬಗೆಹರಿಸಲು ಹಲವು ಪರ್ಯಾಯ ದಾರಿಗಳನ್ನು ಸೂಚಿಸುತ್ತಿದೆ. ಅಲ್ಲದೆ ಅಂತಹ ಪರ್ಯಾಯ ನೀತಿಯಿಂದ ಮಾತ್ರವೇ ರೈತರನ್ನು ಆತ್ಮಹತ್ಯೆಯಿಂದ ವಿಮುಖಗೊಳಿಸಬಹುದೆಂದು ಪ್ರಚಾರ ನಡೆಸುತ್ತಿದೆ. ಅಲ್ಲದೆ ಆ ಬಗ್ಗೆ ಸರ್ಕಾರದ ಮೇಲೆ ಒತ್ತಡ

ಹಾಕಲು ಹೋರಾಟ ರೂಪಿಸಲು ನಿರ್ಧರಿಸಿದೆ.

1. ಆಂತರಿಕ ಬಳಕೆ ಹೆಚ್ಚು ಮಾಡಬೇಕು: ಭಾರತದಲ್ಲಿ ಅತ್ಯಧಿಕ ಕಬ್ಬು ಬೆಳೆಯಲಾಗುತ್ತಿದೆ. ಭಾರೀ ಪ್ರಮಾಣದಲ್ಲಿ ಸಕ್ಕರೆ ಉತ್ಪಾದಿಸಲಾಗುತ್ತಿದೆ. ಹಾಗಿದ್ದರೂ ಕಬ್ಬು ಬೆಳೆದ ರೈತ ಆತ್ಮಹತ್ಯೆಗೇಕೆ ಶರಣಾಗುತ್ತಿದ್ದಾರೆ? ಯಾಕೆಂದರೆ ಭಾರತದಲ್ಲಿರುವ ಕೋಟ್ಯಾಂತರ ಭಾರತೀಯರಿಗೆ ನಮ್ಮಲ್ಲಿಯೇ ಉತ್ಪಾದನೆಯಾಗುವ ಸಕ್ಕರೆಯನ್ನು ಕೊಂಡು ತಿನ್ನುವ ಸಾಮರ್ಥ್ಯ ಇಲ್ಲದಿರುವುದು. ನಮ್ಮ ಸರ್ಕಾರಗಳು ಈಗ ಮಾರಾಟ ಮಾಡುತ್ತಿರುವ ಪ್ರತಿ ಕೆ.ಜಿ.ಸಕ್ಕರೆ ಬೆಲೆಯನ್ನು ಕೇವಲ 5 ರೂಪಾಯಿ ಸಬ್ಸಿಡಿ ನೀಡಿ ಮಾರಾಟ ಮಾಡಿದರೆ ಸಾಕು, ಈಗ ಉತ್ಪಾದಿಸುವ ಸಕ್ಕರೆಯ ಪ್ರತಿ ಕಣ ಕಣವೂ ಭಾರತೀಯ ನಾಲಿಗೆಯನ್ನು ಸಿಹಿಯಾಗಿಸಿ, ಕಬ್ಬು ಬೆಳೆದ ರೈತನ ತುತ್ತಿನ ಚೀಲ ತುಂಬಿಸುತ್ತದೆ. ಮಾತ್ರವಲ್ಲ. ಅವನನ್ನು ಆತ್ಮಹತ್ಯೆಯಿಂದ ದೂರ ಮಾಡುತ್ತದೆ. ಇದು ಸಾಧ್ಯವಾಗಬೇಕಾದರೆ ಸರ್ಕಾರ ಪಡಿತರದ ಮೂಲಕ ಸಕ್ಕರೆಯನ್ನು ರಿಯಾಯ್ತಿ ದರದಲ್ಲಿ ನೀಡಲು ಮುಂದಾಗಬೇಕು.

2. ಆಲೆಮನೆಗೆ ಸಬ್ಸಿಡಿ ನೀಡಿ:- ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಸಬ್ಸಿಡಿ ನೀಡಿ ಕಬ್ಬು ಅರೆಯಲು ರಾಜ್ಯ ಸರ್ಕಾರ ಉತ್ತೇಜನ ನೀಡಿದೆ. ಹಾಗಿದ್ದು ಇನ್ನೂ 25 ಲಕ್ಷ ಮೆಟ್ರಿಕ್ ಟನ್ ಕಬ್ಬನ್ನು ಅರೆಯಲು ಸಾಧ್ಯವಾಗಿಲ್ಲ. ಆದ್ದರಿಂದ ಸರ್ಕಾರ ಕಾರ್ಖಾನೆಗೆ ನೀಡುವ ರೀತಿಯಲ್ಲೇ ರಾಜ್ಯದಲ್ಲಿ ರೈತರೇ ನಡೆಸುತ್ತಿರುವ ಆಲೆಮನೆಗಳಿಗೆ ಪ್ರತಿ ಕ್ವಿಂಟಾಲ್ ಬೆಲ್ಲ ತಯಾರಿಕೆಗೆ 500 ರೂಪಾಯಿ ಸಬ್ಸಿಡಿ ನೀಡಿದರೆ, ಅವುಗಳಿಗೆ ಅಗತ್ಯವಿರುವ ವಿದ್ಯುತ್‌ನ್ನು ರಿಯಾಯ್ತಿ ದರದಲ್ಲಿ ನೀಡಿದರೆ ಈಗಿರುವ ಸಮಸ್ಯೆಯನ್ನು ನಿವಾರಿಸಬಹುದು. ಇದರಿಂದ ಗ್ರಾಮೀಣ ಜನರಿಗೆ ಉದ್ಯೋಗವೂ ಲಭಿಸುವುದಲ್ಲದೆ, ರೈತರ ಕಬ್ಬಿಗೂ ಪರಿಹಾರ, ನ್ಯಾಯಯುತ ಬೆಲೆ ಸಿಗಲಿದೆ.

3. ಕಾರ್ಖಾನೆಗಳ ಅರೆಯುವ ಸಾಮರ್ಥ್ಯ ಹೆಚ್ಚಿಸಿ : ರಾಜ್ಯದಲ್ಲಿ ಕಬ್ಬಿನ ಇಳುವರಿ ಪ್ರಮಾಣ ಪ್ರತಿ ವರ್ಷ ಹೆಚ್ಚಾಗುತ್ತಿದೆ. ಇದನ್ನು ಸರಿದೂಗಿಸಲು ಸರ್ಕಾರ ಹೆಚ್ಚೆಚ್ಚು ಹೊಸ ಸಕ್ಕರೆ ಕಾರ್ಖಾನೆಗಳನ್ನು ಆರಂಭಿಸಬೇಕು. ಮತ್ತು ಈಗಿರುವ ಕಾರ್ಖಾನೆಗಳ ಅರೆಯುವ ಸಾಮರ್ಥ್ಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಅಷ್ಟು ಮಾತ್ರವಲ್ಲದೆ, ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಲಿಕ್ಕರ್, ಗೊಬ್ಬರ, ಕಾಗದ ಮತ್ತು ವಿದ್ಯುತ್ ಉತ್ಪಾದನೆಗೆ ಗಮನ ಹರಿಸಿ ಅವುಗಳ ಆದಾಯ ಹೆಚ್ಚಿಸಲು ಕ್ರಮ ವಹಿಸಬೇಕು. ಮತ್ತು ಇದೆಲ್ಲದಕ್ಕಿಂತ ಮುಖ್ಯವಾಗಿ ಕೈಗಾರಿಕಾ ಉತ್ಪನ್ನಗಳಿಗಿರುವಂತೆ ಕಬ್ಬಿಗೆ ವಿಮೆ ಯೋಜನೆಯನ್ನು ಜಾರಿಗೊಳಿಸಬೇಕು ಎನ್ನುವುದು ಪರ್ಯಾಯ ನೀತಿಯ ಪ್ರಮುಖ ಅಂಶಗಳಾಗಿವೆ.

ಈ ಪರ್ಯಾಯ ಕ್ರಮಗಳ ಜಾರಿಗಾಗಿ ಕರ್ನಾಟಕ ಪ್ರಾಂತ ರೈತ ಸಂಘ ಜೂನ್ 25 ರಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಬ್ಬು ಬೆಳೆಗಾರರ ಬೃಹತ್ ಹೋರಾಟ ನಡೆಸಲು ನಿರ್ಧರಿಸಿದೆ.

ಮಂಡ್ಯ

ರೈತನ ಮೈ ಹಿಂಡುವ ಕಬ್ಬು - ಕಾರ್ಖಾನೆ

ಟಿ.ಎಲ್.ಕೃಷ್ಣೇಗೌಡ

ಮಂಡ್ಯ ಜಿಲ್ಲೆ ಎಂದಾಕ್ಷಣ ಥುತ್ತನೇ ನೆನಪಾಗುವುದು ಸಮೃದ್ಧ ಹಸಿರು, ಓಲಾಡುವ ಕಬ್ಬಿನ ಗದ್ದೆ, ತೆನೆ ಬಾಗುವ ಭತ್ತದ ಬೆಳೆ, ಝುಳು ಝುಳು ಹರಿಯುವ ಜಲಧಾರೆ. ಬೆಂಗಳೂರು - ಮೈಸೂರು ರಸ್ತೆಯಲ್ಲಿ ಅದು ಹೋಗುವ ದಾರಿಹೋಕರಿಗೆ ಕಂಡದ್ದೆ ಮಂಡ್ಯ ಜಿಲ್ಲೆಯಲ್ಲಿ ಸಕಲವು ಎಂಬಂತೆ ಆರೋಪಿಸಲಾಗಿದೆ. ಆದರೆ ವಾಸ್ತವ ಬೇರೆಯೇ ಇದೆ. ಮಂಡ್ಯ ಜಿಲ್ಲೆಯಲ್ಲಿ ಈಗಲೂ ಗುಲ್ಬರ್ಗಾ, ರಾಯಚೂರನ್ನು ನಾಚಿಸುವ ಬರದ ಊರುಗಳಿವೆ. ಅಲ್ಲಿಯ ಕೂಲಿಕಾರರಂತೆ ಇಲ್ಲಿಂದಲ್ಲೂ ಬೆಂಗಳೂರಿಗೆ ಬೇಸಿಗೆಯಲ್ಲಿ ಗುಳೇ ಹೋಗುವ ಜನಕ್ಕೇನೂ ಬರವಿಲ್ಲ. ಕಬ್ಬಿನ ಜಿಲ್ಲೆ ಮಂಡ್ಯದಲ್ಲಿ



ಕಳೆದ ಒಂದು ತಿಂಗಳಿಂದ ಐದು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರೆಲ್ಲರ ಬದುಕು ಕಬ್ಬಿನ ಬೆಳೆಯೊಡನೆ ಬೆಸೆದುಕೊಂಡಿದ್ದಂತೂ ಸತ್ಯ. ಕಬ್ಬಿನ ಬೆಳೆಗೆ ಬಂದಿರುವ ಕುತ್ತು - ರೈತನ ಕೊರಳಿಗೆ ಉರುಳಾಗಿದೆ.

ಮಾಲೀಕರ ಮುಂದೆ ಮಂಡಿಯೂರಿದ 'ಮುಖ್ಯಮಂತ್ರಿ'

ಮಂಡ್ಯ ಜಿಲ್ಲೆಯಲ್ಲಿ, ಐದು ಸಕ್ಕರೆ ಕಾರ್ಖಾನೆಗಳು ಮತ್ತು ಸಾವಿರಾರು ಆಲೆಮನೆಗಳನ್ನು ನಂಬಿ 1 ರಿಂದ 1.2 ಲಕ್ಷ ಎಕರೆಯಲ್ಲಿ ಸುಮಾರು 60 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಕಬ್ಬನ್ನು ಬೆಳೆಯಲಾಗುತ್ತಿದೆ. ಪ್ರತಿ ವರ್ಷವೂ ಕಬ್ಬನ್ನು ಕಟಾವು ಮಾಡಿ ವಿಲೇವಾರಿ ಮಾಡುವುದು ರೈತನಿಗೆ ದುಸ್ತರವಾಗುತ್ತಿದೆ. ಕಾರ್ಖಾನೆಗಳು ಅರೆಯುವುದನ್ನು ಆರಂಭಿಸುವಾಗ ಸರಿಯಾದ ಬೆಲೆ ನಿಗದಿಗಾಗಿ ಹೋರಾಡುವುದು ಪ್ರತಿವರ್ಷದ ಕಾಯಕವಾಗಿದೆ. ಖಾಸಗಿ ಕಾರ್ಖಾನೆಗಳ ಲಾಭಿಗೆ ಮಣಿಯುವ ಸರ್ಕಾರ ಸರಿಯಾದ ಬೆಲೆ ನಿಗದಿಪಡಿಸಲು ಮೀನ-ಮೇಷ ಎಣಿಸುತ್ತದೆ. ಈ ವರ್ಷವೂ ಹಾಗೆ ಆಯಿತು.

ವಿರಾವೇಶದ ಮಾತು

ಮುಖ್ಯಮಂತ್ರಿ ಕುಮಾರಸ್ವಾಮಿಯವರು ವೀರಾವೇಷದಿಂದ ಮಾತನಾಡಿ ಟನ್ ಒಂದಕ್ಕೆ 1,200-00 ರೂ. ನಿಗದಿಪಡಿಸಿದರು. ಆದರೆ ಖಾಸಗಿ ಕಾರ್ಖಾನೆಗಳು ಈ ದರ ನೀಡಲು ಒಪ್ಪಲೇ ಇಲ್ಲ. ಸ್ವತಃ ಸರ್ಕಾರಿ ಸ್ವಾಮ್ಯದ ಮೈ ಷುಗರ್ ಈ ಬೆಲೆಗೆ ಒಪ್ಪಲಿಲ್ಲ. ಕೊನೆಗೆ ಮಾಲೀಕರ 'ಆಶೀರ್ವಾದ'ಕ್ಕೆ ಮಂಡಿಯೂರಿದ ಮುಖ್ಯಮಂತ್ರಿಗಳು 1,100-00 ರೂ.ಗಳನ್ನು ನಿಗದಿಪಡಿಸಿ ಆದೇಶ ಮಾಡಿದರು. ಈ ಜಗ್ಗಾಟದಲ್ಲಿ ಕಾರ್ಖಾನೆಗಳು ಆರಂಭವಾಗುವುದು 2 ತಿಂಗಳು ತಡವಾಯಿತು. ಮುಖ್ಯಮಂತ್ರಿಗಳ ವಿಶ್ವಾಸಘಾತುಕತನದಿಂದ ಕಾರ್ಖಾನೆಗಳು ತಡವಾಗಿ ಆರಂಭವಾದುದಕ್ಕೆ ಕುಮಾರಸ್ವಾಮಿರವರು ಇದನ್ನು ರೈತ ಮುಖಂಡರ ಮೇಲೆ ಹೊರಿಸಲು ನೋಡಿದರು.

ಸರ್ಕಾರವೇ ಕೊಂದ ಮೈ ಷುಗರ್:

ರಾಜ್ಯದ ಏಕ ಮಾತ್ರ ಸರ್ಕಾರಿ ಸ್ವಾಮ್ಯದ ಕಾರ್ಖಾನೆ ಮೈ ಷುಗರ್. ಈ ಕಾರ್ಖಾನೆ ನೀಡುವ ಬೆಲೆಯನ್ನು ಆಧರಿಸಿ ಖಾಸಗಿ ಕಾರ್ಖಾನೆಗಳು ಬೆಲೆ ನಿಗಗಿಪಡಿಸುತ್ತಿದ್ದವು. ಹೀಗಾಗಿ ಖಾಸಗಿ ಕಾರ್ಖಾನೆಗಳು ಕಡಿಮೆ ಬೆಲೆಗೆ ರೈತರೊಡನೆ ಚೌಕಾಸಿ ನಡೆಸಲು ಅಷ್ಟೊಂದು ಅವಕಾಶವಿರಲಿಲ್ಲ. ಅನೇಕ ವರ್ಷ ಮೈ ಷುಗರ್, ರೈತರಿಗೆ ಮತ್ತು ಕಾರ್ಮಿಕರಿಗೆ ಲಾಭಾಂಶವನ್ನು ನೀಡುತ್ತಿದ್ದರಿಂದ ಖಾಸಗೀ ಕಾರ್ಖಾನೆಗಳು ಹೊಟ್ಟೆ ಉರಿದುಕೊಳ್ಳುತ್ತಿದ್ದರು. ಆದ್ದರಿಂದ ಮೈ ಷುಗರ್ ಇದ್ದರೆ ತಾನೇ ಖಾಸಗಿಯವರಿಗೆ ಸ್ಪರ್ಧೆ ಎಂದು ತಿಳಿದ ಸರ್ಕಾರ ಅದನ್ನು ಮುಗಿಸಲು ಸಂಚು ಮಾಡಿ ಮೈ ಷುಗರ್‌ನ್ನು ಇನ್ನೇನು ಮುಚ್ಚುವ ಹಂತಕ್ಕೆ ತಂದು ನಿಲ್ಲಿಸಿದೆ. ಇದೇ ಕಬ್ಬನ್ನು ಅರೆಯುವ ಖಾಸಗಿ ಕಾರ್ಖಾನೆಗಳು ಕೋಟ್ಯಾಂತರ ರೂ. ಲಾಭ ಗಳಿಸುತ್ತಿದ್ದರೆ, ಇದನ್ನು ನೋಡಿ ಮೈ ಷುಗರ್ ನರಳಿ ನರಕ ಸೇರುತ್ತಿದೆ.

ರೈತರ ಮನೆ ಬಾಗಿಲ ಬಂದ ಕಾರ್ಖಾನೆ ಕಾರ್ಖಾನೆ ಬಾಗಿಲಿಗೆ ಎಡ ತಾಕುವ ರೈತ

ಮಂಡ್ಯ ಜಿಲ್ಲೆಯಲ್ಲಿ ಈಗ ಒಟ್ಟು 3 ರಿಂದ 4 ಲಕ್ಷ ಟನ್ ಕಾರ್ಖಾನೆಗೆ ನೋಂದಾವಣೆಯಾಗಿರುವ ಕಬ್ಬು ಅರೆಯದೆ ಹಾಗೆ ಉಳಿದಿದೆ. ಕೆ.ಆರ್.ಎಸ್.ನಲ್ಲಿ ನೀರಿಲ್ಲದ ಪರಿಣಾಮ ಕಳೆದ 3 ತಿಂಗಳಿಂದ ನೀರಿಲ್ಲದೆ ಕಬ್ಬಿನ ಬೆಳೆ ಸಂಪೂರ್ಣ ಒಣಗಿ ನಿಂತಿದೆ. ಬಹುಶಃ ಮೈ ಷುಗರ್ ಸರಿಯಾಗಿ ಕೆಲಸ ನಿರ್ವಹಿಸಿದರೆ ಮಂಡ್ಯ ಜಿಲ್ಲೆಯ ರೈತರಿಗೆ ಈ ದುಃಸ್ಥಿತಿ ಬರುತ್ತಿರಲಿಲ್ಲ. ಕಳೆದ ವರ್ಷ ಕಬ್ಬಿನ ಲಭ್ಯತೆ ಕಡಿಮೆ ಇದ್ದ ಕಾರಣ ರೈತನ ಮನೆಗೆ ತಿರುಗುವ ಸರದಿ ಕಾರ್ಖಾನೆಗಳದ್ದಾಗಿತ್ತು. ಇದರಿಂದ ಉತ್ಸಾಹಗೊಂಡ ರೈತರು ಮತ್ತು ರೈತರಲ್ಲಿ ಸ್ಪರ್ಧೆ ಹೆಚ್ಚಿಸಿ ಅವರನ್ನು ಶೋಷಿಸಲು ಅನುಕೂಲ ಕಲ್ಪಿಸಿಕೊಳ್ಳಲು ಖಾಸಗಿ ಕಾರ್ಖಾನೆಗಳು ಒಡ್ಡಿದ ಪ್ರಲೋಪನೆ ಯಿಂದಾಗಿ ಈ ವರ್ಷ ಕಾರ್ಖಾನೆಗಳು ಅರೆಯುವ ಸಾಮರ್ಥ್ಯಕ್ಕಿಂತ ಹೆಚ್ಚಿನ ಬೆಳೆ ಬೆಳೆಯಲಾಗಿದೆ. ಇದರಿಂದಾಗಿ ರೈತ ತನ್ನೆಲ್ಲಾ ಕೆಲಸಗಳನ್ನು ಬದಿಗೊತ್ತಿ. ಕಟಾವು ಅನುಮತಿ ಪಡೆಯಲು ಕಾರ್ಖಾನೆಯ ಬಾಗಿಲಿಗೆ ಅಲೆಯುವುದು ನಿತ್ಯದ ಕಾಯಕವಾಗಿದೆ. ಕಾರ್ಖಾನೆಯವರ ಉದ್ಧಟತನ ರೈತನ ಸಹನೆಯನ್ನು ಕೆಣಕುತ್ತಿದೆ.

ಕುಸಿದ ಸಕ್ಕರೆ ಬೆಲೆ, ನಾಟಕ ವಾಡುತ್ತಿರುವ ಕಾರ್ಖಾನೆಗಳು

ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆ ವಿಪರೀತ ಕುಸಿದಿದೆ. ಕಳೆದ ವರ್ಷ 1,500-1,800 ರೂ ಇದ್ದದ್ದು, ಈ ವರ್ಷ 1,100-1,200 ರೂ.ಗಳಿಗೆ ಬಂದು ನಿಂತಿದೆ. ಸರ್ಕಾರದ ಉದಾರೀಕರಣ ನೀತಿಗಳಿಂದಾಗಿ ಜನರ ಕೊಳ್ಳುವ ಶಕ್ತಿ ನಿರಂತರವಾಗಿ ಕುಸಿಯುತ್ತಿರುವುದು, ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ಸಕ್ಕರೆ ವಿತರಿಸಲು ನಿರಾಕರಿಸುತ್ತಿರುವುದು ಮತ್ತು ವಿದೇಶದಿಂದ ಸಕ್ಕರೆ ಆಮದು ಆಗುತ್ತಿರುವುದು ಭಾರತೀಯ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆ ಕುಸಿತಕ್ಕೆ ಕಾರಣ. ಸಕ್ಕರೆ ಬೆಲೆ ಏರುಮುಖದಲ್ಲಿ ಇದ್ದಾಗ ಲಾಭದ ಕೊಳ್ಳೆ ಹೊಡೆಯಲು ಹಗಲು-ರಾತ್ರಿ ಕಬ್ಬನ್ನು ಅರೆಯುತ್ತಿದ್ದ ಕಾರ್ಖಾನೆಗಳು ಈಗ ಯಾವುದಾದರೂ ನೆಪ ಹೇಳಿ ಕಾರ್ಖಾನೆಯನ್ನು

ಪುಟ 12 ಕ್ಕೆ

ಸಿಹಿಯಾದ ಕಬ್ಬಿನಿಂದ ಹೈರಾಣಾದ ರೈತ ಬೀದರ್, ಗುಲ್ಬರ್ಗಾ ಕಬ್ಬು ಬೆಳೆಗಾರರ ಕಥೆ

ಇದು ಸಕ್ಕರೆ ಕಾರ್ಖಾನೆಗಳು ಬೀಸಿದ ಸಿಹಿಯಾದ ಆಶೆಗೆ ಬಲಿಯಾಗಿ ಹೈರಾಣಾದ ಗುಲ್ಬರ್ಗಾ-ಬೀದರ್ ಜಿಲ್ಲೆಯ ಕಬ್ಬು ಬೆಳೆಗಾರರ ಕಥೆ. ಕೇವಲ ಈ ವರ್ಷದಲ್ಲೇ ಈ ಎರಡು ಜಿಲ್ಲೆಯಲ್ಲಿ ಸುಮಾರು 25 ರಿಂದ 30 ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಾರ್ಖಾನೆಗಳು ಸೃಷ್ಟಿಸಿದ ಭ್ರಮೆ :

ಗುಲ್ಬರ್ಗಾ ಜಿಲ್ಲೆಯಲ್ಲಿ ವಾರ್ಷಿಕ ಕಬ್ಬು ಬೆಳೆಯುವ ಪ್ರಮಾಣ 4 ರಿಂದ 5 ಲಕ್ಷ ಟನ್. ಆದರೆ ಜಿಲ್ಲೆಯಲ್ಲಿ ಈ ಬಾರಿ ಸಕ್ಕರೆ ಕಾರ್ಖಾನೆಗಳು ನೀಡಿದ ಹುಸಿ ಭರವಸೆಗೆ ಮರುಳಾಗಿ ರೈತರು ಬೆಳೆದಿರುವ ಕಬ್ಬು 12 ಲಕ್ಷಕ್ಕಿಂತ ಅಧಿಕ ಟನ್‌ಗಳಷ್ಟು. ಇದಕ್ಕೆ ನೇರ ಹೊಣೆ ಸಕ್ಕರೆ ಕಾರ್ಖಾನೆಗಳದ್ದೆ. ಯಾವ್ಯಾವ ಕಾರ್ಖಾನೆ ಪಾಲು ಎಷ್ಟೆಷ್ಟು ಅನ್ನೋದನ್ನು ಈ ವಿವರಗಳೇ ಸಾಕ್ಷಿಕರಿಸುತ್ತಿವೆ.

ಹೂಗಾರ ಶುಗರ್ಸ್ :

ಬೆಳಗಾಂನ ಹೂಗಾರ ಶುಗರ್ಸ್ ಕಂಪನಿಯ ಜೇವರ್ಗಿಯಲ್ಲಿ ಕಾರ್ಖಾನೆಯ ಸ್ಥಾಪನೆಗೆ ಅಡಿಗಲ್ಲು ಹಾಕಿದ್ದು 3-4 ವರ್ಷಗಳ ಹಿಂದೆ, ಅಂದಿನ ವಿರೋಧ ಪಕ್ಷದ ನಾಯಕ ಧರಂ ಸಿಂಗ್ ಈ ಕಾರ್ಯ ನೆರವೇರಿಸಿದ್ದರು. ಅದೇ ಕೊನೆ ಕಾರ್ಖಾನೆ. ಮತ್ತೆ ಮೇಲೇಳಲಿಲ್ಲ. ಆದರೆ ಕಾರ್ಖಾನೆಗೆ ಅಡಿಗಲ್ಲು ಬೀಳುತ್ತಿದ್ದಂತೆ ಕಬ್ಬಿನ ತಳಿ ನೆಟ್ಟು ಕಬ್ಬು ಬೆಳೆಯಲಾರಂಭಿಸಿದ ರೈತರಿಗೆಲ್ಲಾ ಸಿಕ್ಕದ್ದು ಬರೀ ಭರವಸೆಗಳು ಮಾತ್ರ. ಈ ಕಾರ್ಖಾನೆಯ ಭರವಸೆಯಿಂದ ಜೇವರ್ಗಿಯ 2790 ಹೆಕ್ಟೇರ್‌ನಲ್ಲಿ ಒಟ್ಟು 2 ಲಕ್ಷದ 9 ಸಾವಿರ 250 ಟನ್ ಕಬ್ಬು ಬೆಳೆದ ರೈತರ ಭೂಮಿಗೆ ಮಾತ್ರ ಮಣ್ಣು ಬಿದ್ದಿತು.

ರೇಣುಕಾ ಶುಗರ್ಸ್

ಮೇಲಿನದೂ ಹುಗಾರ ಶುಗರ್ ಕಾರ್ಖಾನೆ ನಂಬಿ ಮೋಸ ಹೋದ ಕಥೆಯಾದ್ರೆ, ಅಫಜಲಪುರ ರೈತರ ಪಾಲಿಗೆ ಉರುಳಾಗಿದ್ದು ರೇಣುಕಾ ಶುಗರ್ಸ್ ಕಂಪನಿಯ ಅತಿಯಾದ ಭರವಸೆ.

ಪ್ರತಿದಿನ 5 ಸಾವಿರ ಟನ್ ಕಬ್ಬು ಅರೆಯುವುದಾಗಿ ರೈತರನ್ನು ನಂಬಿಸಿ ಕಬ್ಬು ಬೆಳೆಯಲು ಪ್ರಚೋದನೆ ನೀಡಿದ ಕಾರ್ಖಾನೆ ಆಡಳಿತ, ಕಾರ್ಖಾನೆಯಲ್ಲಿ ಅಳವಡಿಸಿಕೊಂಡಿದ್ದು ಮಾತ್ರ ಡಕೋಟಾ ಮಿಷಿನರಿಗಳನ್ನು. ಇದರಿಂದ ಅದು ಒಂದು ದಿನವೂ 5 ಸಾವಿರ ಟನ್ ಕಬ್ಬನ್ನು ಅರೆಯಲೇ ಇಲ್ಲ. ಆದರೆ ಕಾರ್ಖಾನೆ ಮಾತಿಗೆ ಮರುಳಾಗಿ ಇಲ್ಲಿನ ರೈತರು ಬೆಳೆದಿದ್ದು ಮಾತ್ರ ಬರೋಬ್ಬರಿ 4 ಲಕ್ಷ ಟನ್ ಕಬ್ಬನ್ನು. ಆದರೆ ಹಳೆ ಮಿಷನರಿ ಬಳಸಿ ಕಾರ್ಖಾನೆ ಅರೆದಿದ್ದು ಮಾತ್ರ ಕೇವಲ 1.80 ಲಕ್ಷ ಕಬ್ಬನ್ನು ಮಾತ್ರ. ಪರಿಸ್ಥಿತಿ ಹೀಗಿದ್ದರೂ ಸುಳ್ಳು ಭರವಸೆ ನೀಡುವುದನ್ನು ಮಾತ್ರ ಕಾರ್ಖಾನೆ ಆಡಳಿತ ಬಿಡಲಿಲ್ಲ. ಕಾರ್ಖಾನೆಯಲ್ಲಿ ಕಬ್ಬು ಅರೆಯಲು ಬೇಕಾದ ಯಂತ್ರೋಪಕರಣಗಳು ಇಲ್ಲದಿದ್ದಾಗ್ಯೂ ಪುನಃ ಫೆಬ್ರವರಿಯಿಂದ ಜೂನ್ ವರೆಗೆ 5 ಲಕ್ಷ ಟನ್ ಕಬ್ಬು ಅರೆಯಲು ಭರವಸೆ ನೀಡುತ್ತಲೇ ಬಂತು ಆದರೆ ಅದರಿಂದ ಅದು

ಪುಟ 12

ಧರ್ಮನಿರಪೇಕ್ಷತೆಯತ್ತ ಕ್ರಮಿಸಬೇಕಾದ ಹೆಜ್ಜೆಗಳು

ನಾವು ಎರಡು ತಿಂಗಳ ಹಿಂದೆ ಗುಲಬರ್ಗಾದಿಂದ ಕೆಲವು ಪ್ರಗತಿಪರರು ಅಧ್ಯಯನಕ್ಕೆಂದು ಕೇರಳಕ್ಕೆ ಹೋಗಿದ್ದೆವು. ನಮ್ಮ ಹವ್ಯಾಸಿ ತಂಡವು ಕೇರಳ ರಾಜ್ಯದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಸ್ಥಿತಿಗತಿಗಳ ಪರಾಮರ್ಶೆಗೆಂದು ಹೋಗಿತ್ತು. ಹೀಗಾಗಿ ಅಲ್ಲಿನ ಮಂದಿರ, ಮಸೀದಿ, ಚರ್ಚ್, ಸಂಘ, ಸಂಸ್ಥೆಗಳು, ಕುಟುಂಬ, ವ್ಯಕ್ತಿ ಹೀಗೆ ಎಲ್ಲರನ್ನು ಭೇಟಿ ಮಾಡಲಾಯಿತು.

ಡಾ. ಮೀನಾಕ್ಷಿ ಬಾಳಿ

ದೇಶದ ಸುಪ್ರಸಿದ್ಧ ದೇವಾಲಯವೊಂದರ ವಿಶಾಲ ಘೌಳಿ. ತುಸು ಹೆಚ್ಚೆ ಎನ್ನಬಹುದಾದ ಜನಸಂದಣಿ. ತೀರ ಪ್ರಾಚೀನವಲ್ಲದಿದ್ದರೂ ಮಧ್ಯಕಾಲೀನ ವಾಸ್ತುಶಿಲ್ಪ ಹೊಂದಿರುವ ದೇವಸ್ಥಾನದ ಕಲಾವಂತಿಕೆಯಂತೂ ಮನಮೋಹಕವಾದುದೇ ಸರಿ. ಅತ್ಯಂತ ಬೆಲೆಬಾಳುವ ಚಂದನ, ಸಾಗವಾನಿ ಕಟ್ಟಿಗೆಯನ್ನು ಯಥೇಚ್ಛವಾಗಿ ಬಳಸಿ ಸುಂದರ ಕಲಾಕುಸುರಿಯಿಂದ ಮಾಡಿದ ದೇವಸ್ಥಾನದ ಒಳಾಂಗಣವೂ ಕಣ್ಮನ ಸೆಳೆಯತೊಡಗಿತ್ತು. ಗರ್ಭಗುಡಿ ಒಳಹೊರಗೆ ಸುತ್ತಮುತ್ತಲೂ ಲಕ್ಷ ಲಕ್ಷ ಝುರಮಗಿಸುವ ದೀಪಗಳ ಆವಳಿಯು ಭಕ್ತರ ಮನದಲ್ಲಿ ಧನ್ಯತೆ ಮೂಡಿಸುವಂತಿದ್ದವು. ತರಹೇವಾರಿ ದೀಪಸ್ತಂಭಗಳು, ವಿವಿಧ ನಮೂನೆಯ ದೀಪಾಲಂಕಾರಗಳನ್ನು ನೋಡಬೇಕು ಎಂದರೆ ಖಂಡಿತ ಕೇರಳದ ಗುರುವಾಯೂರು ಶ್ರೀಕೃಷ್ಣನ ದೇವಸ್ಥಾನಕ್ಕೆ ಹೋಗಬೇಕು. ನಾವು ಎರಡು ತಿಂಗಳ ಹಿಂದೆ ಗುಲಬರ್ಗಾದಿಂದ ಕೆಲವು ಪ್ರಗತಿಪರರು ಅಧ್ಯಯನಕ್ಕೆಂದು ಕೇರಳಕ್ಕೆ ಹೋಗಿದ್ದೆವು. ನಮ್ಮ ಹವ್ಯಾಸಿ ತಂಡವು ಕೇರಳ ರಾಜ್ಯದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಸ್ಥಿತಿಗತಿಗಳ ಪರಾಮರ್ಶೆಗೆಂದು ಹೋಗಿತ್ತು. ಹೀಗಾಗಿ ಅಲ್ಲಿನ ಮಂದಿರ, ಮಸೀದಿ, ಚರ್ಚ್, ಸಂಘ, ಸಂಸ್ಥೆಗಳು, ಕುಟುಂಬ, ವ್ಯಕ್ತಿ ಹೀಗೆ ಎಲ್ಲರನ್ನು ಭೇಟಿ ಮಾಡಲಾಯಿತು. "ಮಾನವ ಕುಲಂ ತಾನೊಂದೆ ವಲಂ" ಎಂಬ ಅನುಭವವಾಣಿಯಲ್ಲಿ ನಂಬಿಕೆ ಇಟ್ಟಿರುವ ಇವರ್ಯಾರಿಗೂ ದೇವರು, ದಿಂಡರು ನಂಬಿಕೆ ಇರಲಿಲ್ಲವಾದರೂ ಅಧ್ಯಯನದ ಕುತೂಹಲಕ್ಕೆಂದು ಅಲ್ಲಿನ ಪ್ರಸಿದ್ಧ ಗುರುವಾಯೂರಿನ ಶ್ರೀಕೃಷ್ಣ ದೇವಸ್ಥಾನಕ್ಕೆ ಹೋದರು.

ವಸ್ತ್ರ ಸಂಹಿತೆ

ಒಟ್ಟು ಎಂಟು ಜನರ ಈ ತಂಡವು ದೇವರ ದರ್ಶನಕ್ಕೆಂದು ಸರದಿಯಲ್ಲಿ ನಿಂತರು. ಅಷ್ಟರಲ್ಲಿ ಪೊಲೀಸ್ ಪೇದೆಯೊಬ್ಬ ಬಂದು ಪ್ಯಾಂಟ್, ಷರ್ಟ್ ತೊಟ್ಟ ಗಂಡಸರನ್ನು ಮತ್ತು ಚೂಡಿದಾರ್



ಡ್ರೆಸ್ ಧರಿಸಿದ್ದ ಸ್ತ್ರೀಯರನ್ನು ಸರದಿಯಿಂದ ದೂರ ಸರಿಸಿದರು. ನಾವೆಲ್ಲರೂ ಹೀಗೇಕೆ ಅವರನ್ನು ಆಚೆ ಕಳಿಸುತ್ತಿದ್ದೀರಿ? ಎಂದು ಕೇಳಲಾಗಿ ಆತ ತನ್ನ ಹರಕು ಮುರುಕು ದ್ರಾವಿಡ ಉಚ್ಚಾರದ ಹಿಂದಿಯಲ್ಲಿ ಉತ್ತರಿಸಿದರು. ಮಂದಿರ ಪ್ರವೇಶ ಪಡೆಯಬೇಕಾದರೆ ಗಂಡಸರು ಲುಂಗಿ ಅಥವಾ ಪಂಚೆ ತೊಟ್ಟಿರಬೇಕಂತೆ, ಹೆಂಗಸರು ಸೀರೆ ಅಥವಾ ಲಂಗದಾವಣಿ ಧರಿಸಿರಬೇಕಂತೆ.

ದೇವಸ್ಥಾನ ಮಂಡಳಿಯವರ ಪ್ರಕಾರ ಶುದ್ಧದೇಶಿ ಉಡುಪಿನಲ್ಲಿ ಮಾತ್ರ ಮಂದಿರ ಪ್ರವೇಶವಂತೆ. ಸರಿ ನಮ್ಮ ಗುಂಪಿನಲ್ಲಿ ಪ್ಯಾಂಟ್, ಚೂಡಿದಾರ್ ಧರಿಸಿದ್ದ ಪುರುಷರು ಮತ್ತು ಸ್ತ್ರೀಯರು ಹಿಂದೆ ಸರಿದು ಸೀರೆ, ಲುಂಗಿ ಧರಿಸಿದವರು ಒಳನಡೆದವು. ದೇವಸ್ಥಾನದ ಘೌಳಿಯಲ್ಲಿ ಹಿಂದೂಗಳಲ್ಲದವರಿಗೆ ಮಂದಿರ ಪ್ರವೇಶವಿಲ್ಲ ಎಂಬ ನಾಮಫಲಕವೂ ಇದ್ದಿರಲು ಸಾಕು. ಇಲ್ಲಿರುವ ಒಂದು ಸ್ವಾರಸ್ಯವೆಂದರೆ ನಮ್ಮ ಸಂಗಾತಿಯಾಗಿದ್ದ ಭಾರತ ಜ್ಞಾನ ವಿಜ್ಞಾನ ಸಮಿತಿಯ ಸದಸ್ಯನಾಗಿರುವ, ಮುಸ್ಲಿಂ ಧರ್ಮದ "ಮೆಹರಾಜ್ ಪಟೇಲ" ಎಂಬ ಯುವಕನು ಕೇರಳಿಯರ ತಲೆಯ ಮೇಲೆ ಹೊಡೆದಂತೆ ಶುಭ್ರ ಬಿಳಿ ಲುಂಗಿ ತೊಟ್ಟಿದ್ದನು. ಆದ್ದರಿಂದ ಈತ ಸರಸರನೆ ಮಂದಿರದೊಳು ಪ್ರವೇಶ ಪಡೆದು ಎಲ್ಲಾ ಪೂಜಾವಿಧಿಗಳನ್ನು ನೆರವೇರಿಸಿದನು. ಪ್ಯಾಂಟ್ ತೊಟ್ಟಿದ್ದ ಹಿಂದೂ ಪುರುಷ ಮತ್ತು ಮಹಿಳೆಯರು ಹೊರಗೆ ಕುಳಿತು ಹಾಸ್ಯಚಟಾಕಿಗಳನ್ನು ಹಾರಿಸತೊಡಗಿದರು. ಗುರುವಾಯೂರಿನಿಂದ ತುಸು ದೂರದಲ್ಲಿರುವ ತ್ರಿಶೂರ್ ನಗರದಲ್ಲಿರುವ ಶಿವದೇವಾಲಯವೊಂದರಲ್ಲಿಯೂ ಹಿಂದೂಗಳಲ್ಲದವರಿಗೆ ಪ್ರವೇಶವಿಲ್ಲ ಎಂದು ನಾಮಫಲಕವನ್ನೇನೋ ಹಾಕಿದ್ದರು. ಆದರೆ ಅಲ್ಲಿಯೂ ನಮ್ಮ ಗುಂಪಿನ ಮುಸ್ಲಿಂ ಯುವಕರು ಯಾವ ಅಡೆತಡೆ ಇಲ್ಲದೆ ಮಂದಿರ ಪ್ರವೇಶ ಪಡೆದರು. ಅಲ್ಲಿಯ ಸುಂದರ ಶಿಲ್ಪಕಲೆಯನ್ನು ವೀಕ್ಷಿಸಿದರು. ಕೇರಳದ ಹಲವಾರು ಹಿಂದೂ ದೇವಸ್ಥಾನಗಳಲ್ಲಿ ಈ ರೀತಿಯ ನಾಮಫಲಕಗಳನ್ನು ಹಾಕಲಾಗಿದೆ. ಆದರೆ ದರ್ಶಕ್ಕೆ ಬಂದವರಲ್ಲಿ ಅವರು ಹಿಂದೂಗಳು ಹೌದು, ಅಲ್ಲವೇ? ಎಂದು ಗುರುತಿಸಲು ಯಾವುದೇ ಧಾರ್ಮಿಕ ವಿಧಿವಿಧಾನಗಳಿಲ್ಲ. ಅಷ್ಟಕ್ಕೂ ಅಲ್ಲಿಯ ಜನರನ್ನು ಕಂಡು ನಿಮ್ಮಲ್ಲಿ ಜಾತಿಯತೆ, ಅಸ್ಪೃಶ್ಯತೆ ಇದೆಯೇ? ಎಂದು ಕೇಳಲಾಗಿ ಅವರು ಥಟ್ಟನೆ "ನೋನೋ, ನೋ ಕಾಸ್ಟಿಜಮ್ ಒರು ಜಾತಿ ಒರು ಮತಂ" ಎಂದು ಉತ್ತರಿಸುತ್ತಾರೆ. "ಮತ್ತೆ ಈ ರೀತಿ ಬೋರ್ಡು ಹಾಕಿದಿರಲ್ಲ" ಎಂದರೆ "ಓ ಅದೋ ಅದು ದೇವಸ್ಥಾನದ ಅರ್ಚಕರ ನಿಯಮ" ಎಂದು ಹೇಳುತ್ತಾರೆ.

ತಿಳಿಯದಂತೆ ಬಂದರೆ ನಾವೇನೂ ಮಾಡುವುದಿಲ್ಲ

ಒಂದು ಕಡೆ ದೇವಸ್ಥಾನದ ಅರ್ಚಕನಿಗೆ ನೇರವಾಗಿ "ನೀವೂ ಹಿಂದೂಗಳಲ್ಲದವರನ್ನು ಈ ಜನಸಂತೆಯಲ್ಲಿ ಹೇಗೆ ಗುರುತಿಸುವಿರಿ? ಅವರನ್ನು ಗುರುತಿಸಲು ಏನು ಮಾನದಂಡಗಳಿವೆ?" ಎಂದು ಕೇಳಿದೆವು. ಅದಕ್ಕೆ ಆತ ಹಿಂದೂಗಳಲ್ಲದವರನ್ನು ಗುರುತಿಸಲು ಹಾಗೇನು ಮಾನದಂಡಗಳಿಲ್ಲ. ಕೇರಳದ ಮುಸ್ಲಿಂ, ಕ್ರಿಶ್ಚಿಯನ್ ಜನಾಂಗದವರು ತಾವಾಗಿಯೇ ಯಾರೂ ಬರುವುದೇ ಇಲ್ಲ. ಆದರೆ ಹೊರರಾಜ್ಯದವರು ತಮ್ಮ ಪಾಡಿಗೆ ತಾವು ನಮಗೆ ತಿಳಿಯದಂತೆ ಬಂದರೆ ನಾವೇನು ಮಾಡುವುದಿಲ್ಲ ಎಂದನು.

ಚರ್ಚ್, ಮಸೀದಿಗಳಲ್ಲಂತೂ ಹಾಗೇನು ನಿರ್ಬಂಧಗಳಿರುವುದು ಕಾಣಿಸಲಿಲ್ಲ. ಇದರರ್ಥ ಅಲ್ಲಿಯ ಜನತೆಯ ಮತಧರ್ಮಗಳ ವಿಷಯದಲ್ಲಿ ಅಷ್ಟೇನು ಮೂಲಭೂತವಾದಿಗಳಾಗಿಲ್ಲ. ನಾವು ಗಮನಿಸಿರುವಂತೆ ಕೇರಳದ ಜನಸಾಮಾನ್ಯರು ಜಾತಿವಾದಿಗಳಲ್ಲ. ದೇವಸ್ಥಾನದ ಅರ್ಚಕರಾಗಿರುವ ಬೆರಳೆಣಿಕೆಯ ನಂಬೂದರಿಗಳು ಮಾತ್ರ ಯಾವತ್ತೂ ಮನುವಾದಿಗಳಂತೆ ವರ್ತಿಸುತ್ತಾರೆ. ಉಳಿದಂತೆ ಸಾಮಾನ್ಯ ಪ್ರಜೆಗಳಲ್ಲಿ ಜಾತಿ, ಮತಧರ್ಮ ಮತ್ತು ವೈದಿಕಶಾಹಿಯ ಕುರಿತು ಕಠಿಣ ಮೌಢ್ಯಗಳಿಲ್ಲ. ಉತ್ತರ ಭಾರತದ 'ಹಿಂದೂವಾದಿ' ರಾಜ್ಯಗಳಲ್ಲಿರುವಷ್ಟು ಮೌಢ್ಯ, ಕಂದಾಚಾರಗಳು ದಕ್ಷಿಣದ ರಾಜ್ಯಗಳಲ್ಲಿ ಕಾಣಸಿಗುವುದಿಲ್ಲ. ಅದರಲ್ಲಿಯೂ ಕೇರಳದಲ್ಲಿ ಸನಾತನೀ, ಜಮಿನ್ದಾರಿ ಕಪಿಮುಷ್ಠಿಗಳು ಬಲಿಷ್ಠವಾಗಿಲ್ಲ. ಅತಿಹೆಚ್ಚು ವಿದ್ಯಾವಂತರನ್ನು ಹೊಂದಿರುವ ಕಮ್ಯೂನಿಸ್ಟ್ ಚಳುವಳಿಯ ಇತಿಹಾಸವಿರುವ ಕೇರಳ ರಾಜ್ಯದಲ್ಲಿ ಸೆಕ್ಯೂಲರ್ ಮನೋಭಾವವು ಅವರ ರಕ್ತಕ್ಕೆ ಅಂಟಿಕೊಂಡು ಬಂದಿದೆ. ಉಳಿದೆಲ್ಲ ರಾಜ್ಯಗಳು ಕೋಮುವಾದ, ಜಾತಿವಾದಗಳ ದಳ್ಳುರಿಗಳಲ್ಲಿ ಬೇಯುತ್ತಿರುವಾಗ ತುದಿಯಂಚಿನಲ್ಲಿರುವ ಕಡಲ ಕಿನಾರೆಯ ಪುಟ್ಟ ಕೇರಳವು ಈ ಪರಿ ಸೆಕ್ಯೂಲರ್ ಆಗಿ ಬೆಳೆಯಲು ಕಾರಣಗಳು ಇಲ್ಲದಿಲ್ಲ. ದಶಕಗಳ ಹಿಂದೆಯೇ ಜಾತೀಯತೆ, ಅಸ್ಪೃಶ್ಯತೆಯ ವಿರುದ್ಧ ದಂಗೆ ಹೂಡಿದ್ದ ನಾರಾಯಣಗುರು ಚಳುವಳಿ ಮತ್ತು ಕಮ್ಯೂನಿಸ್ಟ್ ಕಟ್ಟಾಳುವಾಗಿದ್ದ ಎ.ಕೆ.ಗೋಪಾಲನ್‌ರಂಥವರ ನಾಯಕತ್ವದಲ್ಲಿ ನಡೆಸಿದ್ದ ಗುರುವಾಯೂರ್ ಮಂದಿರ ಪ್ರವೇಶ ಚಳುವಳಿಗಳು ಅವರ ವರ್ತಮಾನದ ನಡುವಳಿಗಳ ಮೇಲೆ ಪ್ರಭಾವ ಬೀರಿವೆ.

ಜೆ.ಏಸುದಾಸ್‌ಗೆ ಪ್ರವೇಶವಿಲ್ಲ

ಹೀಗಿರುವಾಗಲೂ ಗುರುವಾಯೂರು ಮಂದಿರಗಳಲ್ಲಿ ಇತರ ಧರ್ಮೀಯರಿಗೆ ಪ್ರವೇಶ ಕುರಿತು ಪದೇ ಪದೇ ವಿವಾದಗಳು ಏಳುತ್ತಲೇ ಇರುತ್ತವೆ. ಖ್ಯಾತ ಗಾಯಕರಾಗಿರುವ ಜೇಸುದಾಸ್ ಅವರು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರು ಎಂಬ ಕಾರಣಕ್ಕೆ ಹಿಂದೊಮ್ಮೆ ಅವರಿಗೆ ಮಂದಿರ ಪ್ರವೇಶ ನೀಡಲಿಲ್ಲ. ಈಗ ಮತ್ತೆ ಕೇಂದ್ರ ಸಚಿವರಾಗಿರುವ ವೈಯಲಾರ್ ರವಿಯವರ ಮೊಮ್ಮಗನಿಗೆ ಗುರುವಾಯೂರು ಮಂದಿರದಲ್ಲಿ ಅನ್ನ ತಿನ್ನಿಸುವ ಕಾರ್ಯಕ್ರಮ ನಡೆಸಿದ್ದನ್ನು ಅಲ್ಲಿಯ ಅರ್ಚಕ ಮಂಡಳಿ ಖಂಡಿಸುತ್ತಿದೆ. ವೈಯಲಾರ್ ಅವರ ಪತ್ನಿ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದ್ದವರು ಎಂಬ ಕಾರಣಕ್ಕಾಗಿ ಅಲ್ಲಿಯ ಪೂಜಾರಿಗಳು ಸಚಿವರ ಮೊಮ್ಮಗನ ಕಾರ್ಯಕ್ರಮವನ್ನು ಧಿಕ್ಕರಿಸಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ದೇವಸ್ಥಾನದ ಶುದ್ಧೀಕರಣ ಕೈಗೊಂಡಿದ್ದಾರೆ. ಕೆಲವು ದಿನಗಳ ಹಿಂದೆ ನಟಿ ಜಯಮಾಲಾಳ ಅಯ್ಯಪ್ಪಸ್ವಾಮಿ ದೇವಸ್ಥಾನ ಪ್ರವೇಶ ಕುರಿತಂತೆ ಇದೇ ರೀತಿಯ ವಿವಾದ ಎಬ್ಬಿಸಲಾಗಿತ್ತು.

ಸಕ್ರಿಯ ರಾಜಕೀಯ ಕುತಂತ್ರ

ಇಂಥ ವಿವಾದಗಳನ್ನು ಎಬ್ಬಿಸುವುದರ ಹಿಂದೆ ಕೇವಲ ಧಾರ್ಮಿಕ ನಂಬಿಕೆಗಳಷ್ಟೇ ಇದ್ದಂತಿಲ್ಲ. ತೀರ ಸೂಕ್ಷ್ಮವಾಗಿ ಗಮನಿಸಿದಾಗ ಇಂಥ ವಿವಾದಗಳ ಹಿಂದೆ ಚಾರಿತ್ರಿಕ ನಂಬಿಕೆಗಳೊಂದಿಗೆ ವರ್ತಮಾನದ ರಾಜಕೀಯ ಕುತಂತ್ರಗಳು ಇದ್ದಂತೆ ತೋರುತ್ತದೆ. ಉದ್ದೇಶಪೂರ್ವಕ ಹುನ್ನಾರಗಳು ಸಕ್ರಿಯವಾಗಿರುವಂತೆ ಭಾಸವಾಗುತ್ತವೆ. ಏಕೆಂದರೆ ಅಲ್ಲಿಯ ದೇವಸ್ಥಾನಗಳಲ್ಲಿ ವೈದಿಕಶಾಹಿಯ ನೆರಳಂತೂ ಇದ್ದೇ ಇದೆ. ಆದರೆ ಇತರೆಡೆ ಇರುವಂತೆ ವೈದಿಕರ ಕಪಿಮುಷ್ಠಿಯಂತೂ ಇಲ್ಲ. ನಮ್ಮ ಪ್ರವಾಸದುದ್ದಕ್ಕೂ ಹಿಂದೂಯೇತರ ಸದಸ್ಯರಿದ್ದು ಅವರೆಲ್ಲ ಎಲ್ಲ ದೇವಸ್ಥಾನಗಳಲ್ಲಿ ಪ್ರವೇಶ ಪಡೆದು ಎಲ್ಲ ಸಾಮಾನ್ಯರರತೆ ಪೂಜಾ ವಿಧಿಗಳನ್ನು ಕೈಗೊಂಡರು. ಅವರ್ಯಾರಿಗೂ ಮುಜುಗರ ಉಂಟು ಮಾಡುವಂತೆ ನಡೆಸಿಕೊಂಡದ್ದು ನಮ್ಮ ಗಮನಕ್ಕೆ ಬರಲಿಲ್ಲ. ಹೀಗೆಂದು ಅಲ್ಲಿ ವೈದಿಕರ ಜೋರು ಇಲ್ಲವೆಂದಿಲ್ಲ. ಇದೆ. ಆದರೆ ಅಲ್ಲಿ ಉತ್ತರ ಭಾರತದಂತೆ ಅವರ ಪುಂಡಾಟಿಕೆಗೆ ಅವಕಾಶವಿಲ್ಲ. ಏಕೆಂದರೆ ಅಲ್ಲಿ ಪದೇ ಪದೇ ಸೆಕ್ಯೂಲರ್ ಮನೋಭಾವಕ್ಕೆ ಬದ್ಧರಾದ ಕಮ್ಯೂನಿಸ್ಟರು ಆಳ್ವಿಕೆ ನಡೆಸಿದ್ದರಿಂದ, ಆ ಚಳುವಳಿ ಬಲವಾಗಿರುವುದರಿಂದ ಇವರ ನಂತರ ಬಂದ ಕಾಂಗ್ರೆಸ್ಸಿಗರಿಗೂ ಇಂತಹ ಆಡಳಿತ ನೀಡುವುದು ಅನಿವಾರ್ಯವಾಗಿ ಪರಿಣಮಿಸಿದೆ. ಹೀಗಾಗಿ ಅಲ್ಲಿಯ ಜನಸಾಮಾನ್ಯರು ಇಂಥ ಜಾತಿ, ಕೋಮು ದ್ವೇಷಗಳನ್ನು ಇಷ್ಟಪಡುವುದಿಲ್ಲ ಮತ್ತು ಇಂಥ ವಿವಾದಗಳು ಎದ್ದಾಗ ವೃಥಾ ಆವೇಶಕ್ಕೆ ಒಳಗಾಗುವುದಿಲ್ಲ. ಆದರೂ ಬೆರಳೆಣಿಕೆಯಷ್ಟು ವೈದಿಕರು ಆಗಾಗ ಇಂಥ ಹೀನ ವರ್ತನೆಗಳನ್ನು ಮಾಡುತ್ತ ಆಡಳಿತ ನಡೆಸುವವರಿಗೆ ಮುಜುಗರ ಉಂಟು ಮಾಡುತ್ತಲೇ ಇರುತ್ತಾರೆ. ಕೇರಳದ ಮುಖ್ಯಮಂತ್ರಿ ವಿ.ಎಸ್.ಅಚ್ಯುತಾನಂದನ್ ಗುರುವಾಯೂರು ದೇವಸ್ಥಾನದ ಅರ್ಚಕರ ಕ್ರಮವನ್ನು ಈಗಾಗಲೇ ಖಂಡಿಸಿದ್ದಾರೆ. ಆದರೆ ಇಷ್ಟು ಮಾತ್ರ ಸಾಲದು. ಇದೇ ಸಂದರ್ಭವನ್ನು ಬಳಸಿಕೊಂಡು ಗುರುವಾಯೂರು ಮತ್ತು ಅಯ್ಯಪ್ಪಸ್ವಾಮಿ ದೇವಸ್ಥಾನಗಳಲ್ಲಿರುವ ಅನಿಷ್ಠ ಪದ್ಧತಿಗಳನ್ನು ರದ್ದುಪಡಿಸಬೇಕು. ಕಮ್ಯೂನಿಷ್ಟರ ವಿರುದ್ಧ ಹರಿಹಾಯಲೆಂದೇ ಇಂಥ ಪ್ರಸಂಗಗಳನ್ನು ಸೃಷ್ಟಿಸುತ್ತಿರುವ ಸನಾತನಿಗಳ ಆಟಾಟೋಪಕ್ಕೆ ಕಡಿವಾಣ ಹಾಕಬೇಕು. ○


ಏಸುದಾಸ್

ಗುರುವಾಯೂರು ದೇವಾಲಯ ಪ್ರವೇಶ ಚಳುವಳಿ



1932 ರಲ್ಲಿ ಸಖಾವು ಕೃಷ್ಣಪಿಳ್ಳೈ, ಎ.ಕೆ.ಗೋಪಾಲನ್, ಕೇಳಪ್ಪನ್, ಮುಂತಾದವರ ನೇತೃತ್ವದಲ್ಲಿ ನಡೆದ ಕೇರಳದ ಗುರುವಾಯೂರು ದೇವಾಲಯ ಪ್ರವೇಶ ಚಳುವಳಿಯು ಕೇರಳದಲ್ಲಿ ಮಾತ್ರವಲ್ಲ ರಾಷ್ಟ್ರವ್ಯಾಪಿಯಾಗಿ ಗಮನ ಸೆಳೆದು ಪ್ರಭಾವ ಬೀರಿತು.


ದಲಿತರಿಗೆ ದೇವಾಲಯಕ್ಕೆ ಪ್ರವೇಶವಿಲ್ಲ. ಇತರ ಜಾತಿಗಳವರು ದೇವಾಲಯ ಪ್ರವೇಶಿಸಿದರೂ ನಂಬೂದರಿಗಳನ್ನು ಹೊರತುಪಡಿಸಿ ಬೇರೆ ಯಾರೂ ಶ್ರೀ ಕ್ಷೇತ್ರದ ಮುಂಭಾಗದ ಗಂಟೆ ಬಾರಿಸುವಂತಿರಲಿಲ್ಲ. ಕೇರಳ ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪಕ ಮುಖಂಡರಲ್ಲಿ ಒಬ್ಬರಾದ ಕಾಂ: ಪಿ.ಕೃಷ್ಣಪಿಳ್ಳೈ ಒಮ್ಮೆ ಈ ಗುರುವಾಯೂರು ದೇವಾಲಯ ಪ್ರವೇಶಿಸಿ ಗಂಟೆ ಬಾರಿಸಿದ್ದೊಂದು ಜಾತಿವಾದಿಗಳಿಗೆ ಆಘಾತವಾಗಿ ದೇವಾಲಯದ ಕಾವಲುಗಾರರು ಕೃಷ್ಣಪಿಳ್ಳೈಯವರನ್ನು ಚೆನ್ನಾಗಿ ಥಳಿಸಿದರು.

ಕೃಷ್ಣಪಿಳ್ಳೈಯವರ ಮೇಲಿನ ಈ ಹಲ್ಲೆಯು ದೇವಾಲಯ ಪ್ರವೇಶದ ಮತ್ತೊಂದು ಹಂತದ ಬೃಹತ್ ಆಂದೋಲನಕ್ಕೆ ನಾಂದಿ ಹಾಡಿತು. ಮತ್ತೊಬ್ಬ ಜನಪ್ರಿಯ ಮುಖಂಡರಾದ ಕೇಳಪ್ಪನ್ ಅವರು ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ಆರಂಭಿಸಿದರೆ, ಕೇರಳದಾದ್ಯಂತ ಹೊಸ ಸಂಚಲನ ಮೂಡಿಸಿದ ಜಾಗೃತಿ ಜಾಥಾಗಳು ನೂರಾರು ಬೃಹತ್ ಸಾರ್ವಜನಿಕ ಸಭೆಗಳು, ಆಂದೋಲನಗಳು ನಡೆದವು. ಇವುಗಳಿಗೆ ದಲಿತರು, ಹಿಂದುಳಿದವರು ಮಾತ್ರವಲ್ಲದೆ, ದೊಡ್ಡ ಸಂಖ್ಯೆಯ ಮೇಲ್ಜಾತಿ ಜನಗಳು ಬೆಂಬಲ ನೀಡಿದರು.

ಇಂಥ ಚಳುವಳಿಯ ಭಾಗವಾಗಿ ಸುಮಾರು ಒಂದು ಸಾವಿರದಷ್ಟು ಜನರೊಂದಿಗೆ ಎ.ಕೆ.ಗೋಪಾಲನ್‌ರವರು ದೇವಾಲಯ ಪ್ರವೇಶಕ್ಕೆ ಮುಂದಾದಾಗ ಪುರೋಹಿತಶಾಹಿ, ಜಾತಿವಾದಿ ವ್ಯವಸ್ಥೆಯ ಬೆಂಬಲಿಗರು ಮೃಗಗಳಂತೆ ಮೇಲೆ ಬಿದ್ದು ಎಕೆಜಿರವರ ಮೇಲೆ ಹಲ್ಲೆ ಮಾಡಿದರು.

ಎಕೆಜಿಯವರಿಗೆ ಹಲವಾರು ದಿನ ಅನ್ನಾಹಾರ ಸೇವಿಸಲೂ ಆಗದಂತೆ ಬಡಿದ ಜಾತಿವಾದಿಗಳ ಒಂದೊಂದು ಪೆಟ್ಟು ಕೇರಳದಲ್ಲಿ ಹೊಸ ಹೊಸ ಚಳುವಳಿಗಳಿಗೆ ಸ್ಫೂರ್ತಿಯಾಯಿತು ಎಂಬುದು ಈಗ ಇತಿಹಾಸ. ಇದಾದ ಸುಮಾರು 75 ವರ್ಷಗಳ ನಂತರವಾದರೂ ಈ ಜಾತಿವಾದಿ, ಪುರೋಹಿತಶಾಹಿಗಳ ಗುಣ ಬದಲಾಗಿದೆಯೇ ಎಂದರೆ ಉಹುಂ, ಬದಲಾಗಿಲ್ಲ. ಕ್ರಿಶ್ಚಿಯನ್ನರು, ಮುಸ್ಲಿಮರು, ಇತರರು ಈ ದೇವಾಲಯಗಳಲ್ಲಿ ಪೂಜಿಸುವುದಿರಲಿ ನೋಡುವುದಕ್ಕಾದರೂ ಸರಿ ಈ ದೇವಾಲಯ ಪ್ರವೇಶಿಸುವಂತಿಲ್ಲ ಎನ್ನುತ್ತಾರೆ ಇವರು.

ಕೇರಳದ ಪ್ರಜ್ಞಾವಂತ ಜನತೆ ಈ ಸವಾಲನ್ನು ಎದುರಿಸಲು ಸಜ್ಜಾಗುತ್ತಿದ್ದಾರೆ. ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ನೇತೃತ್ವದಲ್ಲಿ ಈಗ ಮತ್ತೊಂದು ದೇವಾಲಯ ಪ್ರವೇಶ ಚಳುವಳಿಯ ಸಿದ್ಧತೆ ನಡೆದಿದೆ ಕೇರಳದಲ್ಲಿ.



■ ಜಿ.ಎಸ್.ಮಣಿ

ರೈತರಿಗೆ ಸಾಲ ಸಿಗುವುದೇ ಕಡಿಮೆ ಸಿಕ್ಕರೆ ಆತ್ಮಹತ್ಯೆ?

ವಿಚಿತ್ರವೆನಿಸಬಹುದಲ್ಲವೇ? ಆದರೆ ಇದು ನಿಜ. ರೈತರಿಗೆ ಕೇಳಿದಾಗೆಲ್ಲ ಸಾಲ ಸಿಗುತ್ತದೆಯೇ? ಖಂಡಿತ ಇಲ್ಲ. ಇಂದೂ ದೇಶದ ಶೇ.73 ರಷ್ಟು ರೈತಾಪಿ ಕುಟುಂಬಗಳಿಗೆ ಸಾಂಸ್ಥಿಕ ಸಾಲ ದೊರಕುವುದಿಲ್ಲ. ಸಾಲ ಬೇಕಾದರೆ ಇವರು ಹಳ್ಳಿಗಳಲ್ಲಿನ ಲೇವಾದೇವಿಗಾರರ ಬಳಿ ಹೋಗುವುದು ಅನಿವಾರ್ಯ.

ರೈತರಿಗೆ ನೀಡುವ ಸಾಲದ ಬಗ್ಗೆ ಸರ್ಕಾರ ತುತ್ತೂರಿ ಸದಾ ಊದುತ್ತಲೇ ಇವೆ. ಆದರೆ ಆ ಪ್ರಮಾಣದಲ್ಲಿ ರೈತರಿಗೆ ಸಾಲ ದೊರೆಯುವುದಿಲ್ಲ. ಅಷ್ಟೇ ಅಲ್ಲ, ಸಿಕ್ಕಿದಾಗ ಅದು ಬಹಳ ತುಟ್ಟಿ ದರದ್ದೂ ಹೌದು.

ಕಳೆದ ಒಂದು ವರ್ಷದಲ್ಲಿ ಅಂದರೆ 2006-07 ಹಣಕಾಸು ವರ್ಷದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು ಬರೀ ಎರಡು ಲಕ್ಷ ರೈತ ಕುಟುಂಬಗಳಿಗೆ ಸಾಲ ನೀಡಿವೆ. ಇದರಲ್ಲಿ ಬಡ ರೈತರ ಪಾಲು ಎಷ್ಟು ಎಂಬ ಬಗ್ಗೆ ಸಂದೇಹವೇನಿಲ್ಲ. ಬಡರೈತರ ಪಾಲು ಅತಿ ಕಡಿಮೆ. ಅದಕ್ಕಾಗಿಯೇ ಕೇಂದ್ರ ಸರ್ಕಾರದ ಹಣಕಾಸು ಮಂತ್ರಾಲಯ ಈಗ ಹೆಚ್ಚಿನ ಸಂಖ್ಯೆಯಲ್ಲಿ ರೈತರಿಗೆ ಸಾಲ ನೀಡಿ ಎಂದು ಬ್ಯಾಂಕುಗಳ ಮೇಲೆ ಒತ್ತಡ ಹೇರುತ್ತಿದೆ.

ಇದೇ ಸರ್ಕಾರ ಹಣಕಾಸು ವಲಯದ ತೀವ್ರ ಉದಾರೀಕರಣವನ್ನು ಬಯಸುತ್ತದೆ ಎಂಬುದೂ ವಾಸ್ತವ. ಉದಾರೀಕರಣ ಎಂಬುದು ಯಾವತ್ತೂ ಶ್ರೀಮಂತರ ಪರ ಮತ್ತು ಬಡವರ ವಿರುದ್ಧ ಎಂಬುದೂ ಗೊತ್ತಿರುವ ವಿಷಯ. ಇಂತಹ ಉದಾರೀಕರಣವನ್ನು ಬಿಡಬೇಕು, ಕೃಷಿ ವಲಯಕ್ಕೆ ಪೂರ್ತಿಯಾಗಿ ಬಡ್ಡಿ ದರವನ್ನು ಕಡಿಮೆ ಮಾಡಬೇಕು ಎಂಬ ಎಡಪಕ್ಷಗಳ ಸೂಚನೆಯನ್ನು ಕೇಂದ್ರ ಹಣಕಾಸು ಮಂತ್ರಿಗಳು ತಳ್ಳಿ ಹಾಕಿದ್ದಾರೆ.

ಕೃಷಿ ಉತ್ಪನ್ನಗಳಿಗೆ ಸರಿಯಾದ ಬೆಂಬಲ ಬೆಲೆ ನೀಡುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತಿಲ್ಲ. ಕೃಷಿ ಲಾಗುವಾಡುಗಳ ಬೆಲೆಗಳನ್ನು ನಿಯಂತ್ರಣದಲ್ಲಿಟ್ಟಿಲ್ಲ.

ಉದಾರೀಕರಣದ ನೆರಳಿನಡಿ ದೊಡ್ಡ ದೊಡ್ಡ ಕಂಪನಿಗಳು ಕೃಷಿ ಉತ್ಪನ್ನಗಳ ಮಾರಾಟದಲ್ಲಿ ತೊಡಗಿವೆ. ಯಾವುದೇ ಅಡೆತಡೆಯಿಲ್ಲದೆ ಅವು ರೈತರನ್ನು ಹಿಂಡುತ್ತವೆ. ರೈತರಿಂದ ಅತಿ ಕಡಿಮೆ ಬೆಲೆಗೆ ಕೊಟ್ಟು ಗ್ರಾಹಕರಿಗೆ ಅತಿ ಹೆಚ್ಚಿನ ಬೆಲೆಗೆ ಮಾರಿ ಅತ್ಯಂತ ದೊಡ್ಡ ಪ್ರಮಾಣದ ಲಾಭ ಹೊಡೆಯುತ್ತಿವೆ.

ಇವೆಲ್ಲದರ ಒಟ್ಟು ಮೊತ್ತವೇ ರೈತರ ಆತ್ಮಹತ್ಯೆಗಳು. ರೈತನಿಗೆ ಬೆಳೆ ಬೆಳೆಯಲು ದೊಡ್ಡ ಬಂಡವಾಳ ಬೇಕು. ಅದಕ್ಕಾಗಿ ಸಾಲ ಪಡೆಯುತ್ತಾನೆ. ಈ ಸಾಲದ ಮೇಲಿನ ಬಡ್ಡಿಯೂ ಅಪಾರ. ಬೆಳೆ ಬರುವ ಗ್ಯಾರಂಟಿಯಿಲ್ಲ. ಬಾರದ ಬೆಳೆಗೆ ವಿಮೆಯಿಲ್ಲ; ಬೆಳೆ ಬಂದರೂ ಒಳ್ಳೆ ಬೆಲೆ ಸಿಗುವ ಖಾತರಿಯಿಲ್ಲ. ಸಾಲ ಏರುತ್ತಲೇ ಹೋಗುತ್ತದೆ. ರೈತನಿಗೆ ದಿಕ್ಕೆ ತೋರುವುದಿಲ್ಲ. ಕುಟುಂಬವನ್ನು ಪೋಷಿಸುವ ದಾರಿಯಿರುವುದಿಲ್ಲ. ಸಾಲ ನೀಡಿದವನನ್ನು ನೋಡಲು ಮುಖ ವಿರುವುದಿಲ್ಲ. ಸಾಲ ನೀಡಿದವನ ಒತ್ತಡ ತಡೆದು ಕೊಳ್ಳುವ ಶಕ್ತಿಯಿರುವುದಿಲ್ಲ. ಕೊನೆಯೊಂದೇ ದಾರಿ ಕಾಣುತ್ತದೆ-'ಅದೇ ಆತ್ಮಹತ್ಯೆ'.

ಈ ಪರಿಸ್ಥಿತಿಯನ್ನು ಬದಲಿಸಬಯಸಿದರೆ ಉದಾರೀಕರಣವನ್ನು ತೊರೆಯ ಬೇಕಾಗುತ್ತದೆ. ಸರ್ಕಾರಗಳು ಅದಕ್ಕೆ ತಯಾರಿರುವವೆ? ಇಲ್ಲ.

ಅನಿಸಿಕೆ

ದೇಶದ ಮುಸ್ಲಿಮರು ಇತ್ತೀಚಿನ ವರ್ಷಗಳಲ್ಲಿ ಕಮ್ಯುನಿಸ್ಟರ ಹತ್ತಿರ ಸರಿಯುತ್ತಿರುವ ಬೆಳವಣಿಗೆಗಳು ನಡೆಯುತ್ತಿರುವಾಗ ಮುಸ್ಲಿಮರನ್ನು ನಿರಂತರವಾಗಿ ತನ್ನ ಹದ್ದುಬಸ್ತಿನಲ್ಲಿಟ್ಟು ಮುಖ್ಯವಾಹಿನಿಯಿಂದ ಬೇರ್ಪಡಿಸುತ್ತಾ ಬಂದ ಮುಸ್ಲಿಂ ಮೂಲಭೂತವಾದಿ, ತೀವ್ರವಾದಿ ಶಕ್ತಿಗಳು ಕಳವಳಗೊಂಡಿದ್ದಾರೆ.

ಮುಸ್ಲಿಂ ಮೂಲಭೂತವಾದ ಕುರುಡು ಕಮ್ಯೂನಿಸ್ಟ್ ವಿರೋಧ

ಕಳೆದ ಮಹಾ ಚುನಾವಣೆ ಮತ್ತು ಕೇರಳ, ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಕಮ್ಯುನಿಸ್ಟರು ಜಯಭೇರಿ ಬಾರಿಸಿದ ನಂತರ ಮುಸ್ಲಿಂ ಸಮುದಾಯದೊಳಗಡೆ ಆಗುತ್ತಿರುವ ಬೆಳವಣಿಗೆಗಳು ಕುತೂಹಲಕಾರಿಯಾಗಿದೆ.

ಬಾಬ್ರಿಮಸೀದಿ ಧ್ವಂಸದ ನಂತರ ಸಂಘ ಪರಿವಾರವು ಮುಸ್ಲಿಮರ ಮೇಲೆ ನಿರಂತರ ದಾಳಿ ನಡೆಸಿ ಅವರ ಮರ್ದನ ತೀವ್ರಗೊಳಿಸಿತು. ಆಡಳಿತ ಯಂತ್ರ ಕೋಮುವಾದೀಕರಣಗೊಂಡಿತು. ಗುಜರಾತ್ ಗಲಭೆ ಮುಸ್ಲಿಂರನ್ನು ತಲ್ಲಣಗೊಳಿಸಿತು. ಈ ಸಂದರ್ಭದಲ್ಲಿ ಕಾಂಗ್ರೆಸ್‌ನ ಮೃದು ಹಿಂದುತ್ವದ ನಿಲುವು. ಕಾಂಗ್ರೆಸ್ಸಿಗೆ ಪರ್ಯಾಯವಾಗಿ ಬೆಳೆದುಬಂದ ಜಾತ್ಯಾತೀತ, ಪ್ರಾದೇಶಿಕ ಪಕ್ಷಗಳು ಅನುಕೂಲ ಸಿಂಧು ರಾಜಕೀಯದಲ್ಲಿ ತೊಡಗಿ ಎನ್.ಡಿ.ಎ.ಕೂಟನವನ್ನು ಸೇರಿದ್ದು ಮುಸ್ಲಿಮರನ್ನು ಅಸಹಾಯಕರನ್ನಾಗಿಸಿತು. ಈ ಸಂದರ್ಭದಲ್ಲಿ ದೇಶದ ಎಡಪಕ್ಷಗಳು ಕೋಮುವಾದದ ವಿರುದ್ಧ ತೆಗೆದುಕೊಂಡ ಗಟ್ಟಿ ನಿಲುವು, ಎಡಪಕ್ಷಗಳು ಪ್ರಬಲವಾಗಿರುವ ರಾಜ್ಯಗಳಲ್ಲಿ ಕೋಮುಗಲಭೆಗಳು ನಡೆಯದಂತೆ ನೋಡಿಕೊಂಡದ್ದು ಮುಸ್ಲಿಮರಲ್ಲಿ ಹೊಸ ಭರವಸೆಯನ್ನು ಮೂಡಿಸಿತು. ನಿರಂತರವಾಗಿ ಮುಸ್ಲಿಂ ಲೀಗಿನ ಕಪಿಮುಷ್ಠಿಯಲ್ಲಿದ್ದ ಕೇರಳದ ಮುಸ್ಲಿಮರು ಕಳೆದ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಯಲ್ಲಿ ಮುಸ್ಲಿಂ ಲೀಗನ್ನು ಅದರ ಭದ್ರಕೋಟೆಗಳಲ್ಲಿ ಸೋಲಿಸಿ ಎಡಪಕ್ಷಗಳನ್ನು ಗೆಲ್ಲಿಸಿದ್ದಾರೆ.


ಹೀಗೆ ದೇಶದ ಮುಸ್ಲಿಮರು ಇತ್ತೀಚಿನ ವರ್ಷಗಳಲ್ಲಿ ಕಮ್ಯುನಿಸ್ಟರ ಹತ್ತಿರ ಸರಿಯುತ್ತಿರುವ ಬೆಳವಣಿಗೆಗಳು ನಡೆಯುತ್ತಿರುವಾಗ ಮುಸ್ಲಿಮರನ್ನು ನಿರಂತರವಾಗಿ ತನ್ನ ಹದ್ದುಬಸ್ತಿನಲ್ಲಿಟ್ಟು ಮುಖ್ಯವಾಹಿನಿಯಿಂದ ಬೇರ್ಪಡಿಸುತ್ತಾ ಬಂದ ಮುಸ್ಲಿಂ ಮೂಲಭೂತವಾದಿ, ತೀವ್ರವಾದಿ ಶಕ್ತಿಗಳು ಕಳವಳಗೊಂಡಿದ್ದಾರೆ. ಮುಸ್ಲಿಮರು ಕಮ್ಯುನಿಸ್ಟ್ ಪಕ್ಷ ಮತ್ತದರ ಸಾಮೂಹಿಕ ಸಂಘಟನೆಗಳ ಬಳಿ ಸಾಗದಂತೆ ಮಾಡಲು ಸಕಲ ಪ್ರಯತ್ನದಲ್ಲಿ ತೊಡಗಿದ್ದಾರೆ.

ಮುಸ್ಲಿಮರ ಮಧ್ಯೆ ಜಾತ್ಯಾತೀತತೆಯ ಮುಖವಾಡ ಧರಿಸಿ ಗುಪ್ತವಾಗಿ ಕಾರ್ಯಾಚರಿಸುತ್ತಾ, ಇತ್ತೀಚೆಗಷ್ಟೇ ಬಹಿರಂಗವಾಗಿ ಕಾಣಿಸಿಕೊಂಡ ಸಂಘಟನೆ ಮತ್ತು ಆರ್.ಎಸ್.ಎಸ್.ನ ಹಾಗೆಯೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದೆ, ದೇಶ ವಿಭಜನೆಯನ್ನು ಬೆಂಬಲಿಸಿ, ಭಾರತದಲ್ಲಿ ದೈವ ಸಾಮ್ರಾಜ್ಯದ ಕನಸು ಕಾಣುತ್ತಿರುವ ಸಂಘಟನೆಗಳು ಇತ್ತೀಚೆಗೆ ಕಮ್ಯುನಿಸ್ಟರ ಮೇಲೆ ತಮ್ಮ ದಾಳಿಯನ್ನು ತೀವ್ರಗೊಳಿಸಿದ್ದಾರೆ.

ಕಮ್ಯುನಿಸ್ಟರ ಮೇಲೆ ಕೆಸರೆರಚಲು ವಿಷಯ ಸಿಗದೆ ಚಡಪಡಿಸುತ್ತಿದ್ದ ಇವರು ನಂದಿಗ್ರಾಮ ಘಟನೆಯನ್ನು ನೆಪವಾಗಿಟ್ಟುಕೊಂಡು ತಮ್ಮ ಮುಖವಾಣಿ ಪತ್ರಿಕೆಯಲ್ಲಿ ಕಮ್ಯುನಿಸ್ಟರಿಗೂ ಇತರ ಬಲಪಂಥೀಯರಿಗೂ ವ್ಯತ್ಯಾಸವಿಲ್ಲ, ಕಮ್ಯುನಿಸ್ಟರು ರೈತ ವಿರೋಧಿಗಳು, ಜನ ವಿರೋಧಿಗಳು ಎಂದು ಹುಯಿಲೆಬ್ಬಿಸುತ್ತಿದ್ದಾರೆ. ಎಡಪಕ್ಷಗಳ ವಿರೋಧಿಗಳಿಂದ ಪುಂಖಾನುಪುಂಖ ಅಂಕಣ, ಲೇಖನಗಳನ್ನು ಬರೆಯಿಸುತ್ತಿದ್ದಾರೆ.

ಜಾಗತಿಕ ಮಟ್ಟದಲ್ಲಿ ಸಾಮ್ರಾಜ್ಯ ಶಾಹಿಯು ಜಗತ್ತನ್ನು ತನ್ನ ಅಧೀನಕ್ಕೊಳಪಡಿಸಲು ಬುಷ್ ನೇತೃತ್ವದಲ್ಲಿ ನಡೆಸುತ್ತಿರುವ ಯುದ್ಧ, ದಿಗ್ಬಂಧನವನ್ನು ಮುಸ್ಲಿಮರ ಮೇಲೆ ಕ್ರಿಶ್ಚಿಯನ್ನರು, ಯಹೂದಿಗಳು ನಡೆಸುತ್ತಿರುವ ದಾಳಿ ಎಂಬಷ್ಟಕ್ಕೆ ಸಂಕುಚಿತಗೊಳಿಸಿ ಧರ್ಮ ಯುದ್ಧದ ಹೆಸರಿನಲ್ಲಿ ಮುಸ್ಲಿಮರನ್ನು ದಾರಿ ತಪ್ಪಿಸುತ್ತಿರುವ ಇವರು, ಕಮ್ಯುನಿಸ್ಟರು ಬುಷ್‌ನ ಭಯೋತ್ಪಾದನೆಯ ವಿರುದ್ಧದ ಯುದ್ಧ, ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಸಂಘಟಿಸುತ್ತಿರುವ ಸಾಮೂಹಿಕ ಹೋರಾಟಗಳತ್ತ ಮುಸ್ಲಿಮರು ಆಕರ್ಷಿತರಾಗುತ್ತಿರುವುದು ಮತ್ತು ಈ ಹೋರಾಟಗಳಲ್ಲಿ ಭಾಗವಹಿಸುತ್ತಿ ರುವುದರಿಂದ ಕಂಗಾಲಾಗಿದ್ದಾರೆ.

ದುಡಿಯುವ ಮುಸ್ಲಿಮರು ನೆಮ್ಮದಿಯಿಂದ ಇರುವುದನ್ನು ಬಯಸದ ಮುಸ್ಲಿಂ ಆಳುವ ವರ್ಗದ -ಪರವಾದ ಮತ್ತು ಸಾಮ್ರಾಜ್ಯಶಾಹಿಗಳ ಬಾಲಬಡುಕರಾದ ಈ ಶಕ್ತಿಗಳು ಆ ಕಾರಣಕ್ಕಾಗಿಯೇ ಕಮ್ಯುನಿಸ್ಟರು ಬಲಗೊಂಡರೆ ಕೋಮುವಾದಿಗಳು ದುರ್ಬಲಗೊಳ್ಳುತ್ತವೆ, ಮುಸ್ಲಿಮರು ಕಮ್ಯುನಿಸ್ಟರ ಜೊತೆ ಸೇರಿದರೆ ವಾಸ್ತವತೆಯನ್ನು ಅರಿತುಕೊಳ್ಳುತ್ತಾರೆ, ಹಾಗಾದರೆ ಮುಸ್ಲಿಮರನ್ನು ತೀವ್ರವಾದದ ಕಡೆಗೆ ಆಕರ್ಷಿಸಲು ಸಾಧ್ಯವಿಲ್ಲ, ತಮ್ಮ ವಿಚಾರಧಾರೆಗೆ ಮುಸ್ಲಿಮರ ಪ್ರಜಾಸತ್ತಾತ್ಮಕ ಚಳುವಳಿಗಳಲ್ಲಿ ತೊಡಗಿ ಕೋಮುವಾದಿ ಶಕ್ತಿಗಳನ್ನು ಎದುರಿಸುವ ಮಾರ್ಗವನ್ನು ತುಳಿಯಬಹುದು ಹಾಗೂ ಅವರು ಆತಂಕದಲ್ಲಿರುವ ಪರಿಸ್ಥಿತಿ ಇರಬೇಕು ಎಂದು ಬಯಸುತ್ತವೆ. ಮುಸ್ಲಿಮೇತರರೆಲ್ಲರೂ ಶತ್ರುಗಳು ಎಂದು ಬೋಧಿಸುವ ಇವರು ಕಮ್ಯುನಿಸ್ಟರ ಜಾತ್ಯಾತೀತ ನಿಲುವಿನಿಂದಾಗಿ ಮುಸ್ಲಿಮರು ಕಮ್ಯುನಿಸ್ಟರನ್ನು



ತಮ್ಮ ನೈಜ ಮಿತ್ರರು ಎಂದು ಪರಿಗಣಿಸುವುದನ್ನು ಸಹಿಸುತ್ತಿಲ್ಲ.

ನಂದಿ ಗ್ರಾಮ ಪ್ರಶ್ನೆಯಲ್ಲಿ ಬಿಜೆಪಿ, ತೃಣಮೂಲದಂತಹ ಕೋಮುವಾದಿ, ಪಾಳೇಗಾರಿ ಶಕ್ತಿಗಳ ಜೊತೆ ಕೈಜೋಡಿಸಿ ಮುಸ್ಲಿಮರ ಮಸೀದಿ ಒಡೆಯುತ್ತಾರೆ ಎಂದು ಹುಯಿಲೆಬ್ಬಿಸಿದ ಈ ಮೂಲಭೂತವಾದಿಗಳು ಮೂವತ್ತು ವರ್ಷಗಳಿಂದ ಒಂದೇ ಒಂದು ಕೋಮುಗಲಭೆಗೆ ಅವಕಾಶ ಕೊಡದೆ ಮುಸ್ಲಿಮರು ಘನತೆಯಿಂದ ಬಾಳಲು ಅವಕಾಶ ಮಾಡಿಕೊಟ್ಟ ಕಮ್ಯುನಿಸ್ಟರನ್ನು ತೆಗಳುತ್ತಾ ನಮಗೆ ಗುಜರಾತಿನ ಮೋದಿಯಾದರೂ ಆದೀತು ಭಟ್ಟಾಚಾರ್ಯ ಬೇಡ ಅಂದದ್ದನ್ನು ಈ ಎಲ್ಲಾ ಹಿನ್ನೆಲೆಯಿಂದ ಅರ್ಥೈಸಬೇಕಾಗಿದೆ.

ಇವರ ಒಂದು ಪತ್ರಿಕೆಯಲ್ಲಿ ಇತ್ತೀಚೆಗೆ ಆ ಪತ್ರಿಕೆಯ ಸಂಪಾದಕರು ಕಮ್ಯುನಿಜಂನ್ನು ವ್ಯಾಧಿ ಎಂದು ಕರೆದಿದ್ದಾರೆ. ಕಮ್ಯುನಿಸ್ಟರು ಯಾವುದೇ ಸಮಯದಲ್ಲಿ ಬಣ್ಣ ಬದಲಾಯಿಸಿ ಕೋಮುವಾದಿಗಳಾಗಿ ಬದಲಾಗಿ ಮುಸ್ಲಿಮರನ್ನು ಮರ್ದಿಸಬಹುದು ಎಂದು ವಿಷ ಕಕ್ಕಿ ಇದಕ್ಕೆ ಯುಗೋಸ್ಲಾವಿಯಾದ ಸುಳ್ಳು ಉದಾಹರಣೆಗಳನ್ನು ಕೊಟ್ಟು ಮುಸ್ಲಿಮರನ್ನು ದಾರಿ ತಪ್ಪಿಸುತ್ತಿದ್ದಾರೆ.

ಒಟ್ಟಾರೆಯಾಗಿ ದೇಶದಲ್ಲಿ ಕಮ್ಯುನಿಸ್ಟ್ ಚಳುವಳಿ ಬಲಗೊಳ್ಳುತ್ತಿರುವುದರಿಂದ ಮುಸ್ಲಿಮರು ಸಾಮ್ರಾಜ್ಯಶಾಹಿ, ಕೋಮುವಾದ ವಿರೋಧಿ ಹೋರಾಟದ ಭಾಗವಾಗಿ ಈ ಚಳುವಳಿಯ ಜೊತೆಗೆ ಸೇರುತ್ತಿರುವುದರಿಂದ ಕಂಗೆಟ್ಟಿರುವ ಮುಸ್ಲಿಂ ತೀವ್ರವಾದಿ ಶಕ್ತಿಗಳು ಕಮ್ಯುನಿಸ್ಟರಿಂದ ಮುಸ್ಲಿಮರನ್ನು ಬೇರ್ಪಡಿಸುವ ಶತಪ್ರಯತ್ನದಲ್ಲಿ ತೊಡಗಿದ್ದಾರೆ. ದೇಶದಲ್ಲಿ ಹಿಂದೂ, ಮುಸ್ಲಿಂ ಸಂಘರ್ಷವನ್ನು ತೀವ್ರಗೊಳಿಸಿ ತಾವು ಬಲಗೊಳ್ಳುವುದರ ಜೊತೆಗೆ ಸಂಘಪರಿವಾರವನ್ನು ಇನ್ನಷ್ಟು ಬಲಗೊಳಿಸುವ ಇವರ ಪ್ರಯತ್ನವನ್ನು ವಿಫಲಗೊಳಿಸಬೇಕಾಗಿದೆ.

ಈಗಾಗಲೇ ಮುಸ್ಲಿಂ ಸಮಾಜದೊಳಗಡೆ ಇರುವ ಕೆಲವು ನೈಜ ಮುಸ್ಲಿಂ ಸಂಘಟನೆಗಳು ಹಾಗೂ ಮುಸ್ಲಿಂ ವಿದ್ವಾಂಸರು ಇವರ ಜೆಹಾದ್ ಮತ್ತು ಆತ್ಮರಕ್ಷಣಾವಾದ ಧರ್ಮಬಾಹಿರ ಮತ್ತು ಈ ಮೂಲಕ ಇವರು ಮುಸ್ಲಿಮರನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡುತ್ತಿದ್ದಾರೆ ಎಂಬ ವಿಷಯವನ್ನು ಮುಸ್ಲಿಂ ಸಮುದಾಯಕ್ಕೆ ತಿಳಿಹೇಳುವ ಕೆಲಸವನ್ನು ಮಾಡುತ್ತಿದ್ದಾರೆ.

ದುರಂತವೆಂದರೆ ವಿಚಾರವಾದಿಗಳು, ತಾವೇ ಕೋಮುವಾದದ ವಿರುದ್ಧದ ಹೋರಾಟದ ವಾರಸುದಾರರು, ಕ್ರಾಂತಿಕಾರಿಗಳು ಎಂದು ಬೊಬ್ಬೆ ಹೊಡೆಯುತ್ತಿರುವ ಕೆಲವರು 'ದೈವಸಾಮ್ರಾಜ್ಯವಾದಿ' ಮೂಲಭೂತವಾದಿ ಗಳೊಂದಿಗೆ ವೇದಿಕೆ ಹಂಚಿಕೊಳ್ಳುವುದು ಹಾಗೂ ಇವರನ್ನು ಸಮರ್ಥಿಸಿಕೊಳ್ಳುವ ಕೆಲಸದಲ್ಲಿ ತೊಡಗಿರುವುದು.

■ ಮುನೀರ್ ಕಾಟಿಪಳ್ಳ

ರೈತನ ಮೈ ಹಿಂಡುವ ಕಬ್ಬು - ಕಾರ್ಖಾನೆ

ಪುಟ 9 ರಿಂದ

ನಿಲ್ಲಿಸುತ್ತಿವೆ. ತಿಂಗಳಿಗೆ 1 ಲಕ್ಷ ಟನ್ ಕಬ್ಬು ಅರೆಯುವ ಸಾಮರ್ಥ್ಯದ ಚಾಮುಂಡೇಶ್ವರಿ ಕಾರ್ಖಾನೆ ಕಳೆದ 1 ತಿಂಗಳಲ್ಲಿ ಅರೆದಿರುವುದು ಕೇವಲ 30 ಸಾವಿರ ಟನ್. ಈ ನಾಟಕದ ಬೆಂಕಿಯಲ್ಲಿ ರೈತ ಬೆಂದು ಹೋಗುತ್ತಿದ್ದಾನೆ. ಕಾರ್ಖಾನೆಗೆ ಕಬ್ಬು ತೆಗೆದುಕೊಂಡು ಹೋದ ರೈತರು ವಾರಗಟ್ಟಲೇ, ಕಾರ್ಖಾನೆಯ ಆವರಣದಲ್ಲೋ ರಸ್ತೆಯಲ್ಲೋ ಕಳೆಯುತ್ತಿದ್ದರೆ, ಕಟಾವು ಆಗಿರುವ ಕಬ್ಬು ತಿಂಗಳುಗಟ್ಟಲೆ ಒಣಗಿ ಸೌದೆಯಾಗುತ್ತಿದೆ. ಲಾಭವಾಗುತ್ತಿದ್ದಾಗ ಗಂಟಲಿಲ್ಲದೆ ನುಂಗಿದ ಕಾರ್ಖಾನೆಗಳು ನಷ್ಟದ ಕಡುಬನ್ನು ರೈತನ ಗಂಟಲಲ್ಲಿ ತುರುಕಿ ಪ್ರಾಣ ತೆಗೆಯುತ್ತಿವೆ.

ಕುಸಿದ ಬೆಲ್ಲದ ಬೆಲೆ, ನಿಂತು ಹೋದ ಗಾಣಗಳು :

ಬೆಲ್ಲದ ಬೆಲೆ ಸಂಪೂರ್ಣ ನೆಲಕಚ್ಚಿದೆ. ಕ್ವಿಂಟಲ್ ಬೆಲ್ಲಕ್ಕೆ 1,800-2,000 ರೂ.ಗಳು ಇದ್ದದ್ದು, ಇಂದು 800-900 ರೂ.ಗಳಿಗೆ ಬಂದು ನಿಂತಿದೆ. ಈ ಬೆಲೆ ಪಡೆದು ಯಾವುದೇ ಗಾಣದ ಮಾಲೀಕರು ಬೆಲ್ಲ ತಯಾರಿಸಲು ಸಾಧ್ಯವಿಲ್ಲ. ಇದರಿಂದಾಗಿ ಗಾಣದ ಮಾಲೀಕರು ರೈತರ ಹತ್ತಿರ 400-500 ರೂ.ಗಳಿಗೆ ಕಬ್ಬನ್ನು ಕೇಳುತ್ತಾರೆ. ಬಂದಷ್ಟೇ ಹಣಕ್ಕೂ ಮಾರುವ ಶೋಚನೀಯ ಸ್ಥಿತಿ ರೈತನದು. ಸ್ವತಃ ರೈತರು ಆಗಿರುವ ಗಾಣದ ಮಾಲೀಕರು ಇಂದು ಹತಾಶೆಯಿಂದ ಕೈಚೆಲ್ಲಿ ಕುಳಿತು ಗಾಣಗಳನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಪರಿಣಾಮವಾಗಿ ಗಾಣಗಳಲ್ಲಿ ದುಡಿಯುತ್ತಿದ್ದ ಲಕ್ಷಾಂತರ ಕಾರ್ಮಿಕರು ಅನೇಕ ತಿಂಗಳುಗಳಿಂದ ಕೆಲಸವಿಲ್ಲದೆ ಪರಿತಪಿಸುವಂತಾಗಿದೆ. ದಿನವು 25 ಜನರಿಗೆ ಕೆಲಸ ನೀಡುತ್ತಿದ್ದ ದೇವಿಪುರ ಗ್ರಾಮದ ಆಲೆಮನೆಯೊಂದು ಮುಚ್ಚಿ ಹೋಗುವ ಹಂತಕ್ಕೆ ಬಂದಿದೆ.

ಮಧ್ಯ ಪ್ರವೇಶಿಸದ ಸರ್ಕಾರದ ಮೊಸಳೆ ಕಣ್ಣೀರು

ಇಷ್ಟೆಲ್ಲಾ ಅನಾಹುತವಾಗಿ ರೈತರು ಇಹಲೋಕ ತ್ಯಜಿಸಲು ಆರಂಭಿಸಿದ ನಂತರ ನಾಟಕ ಶುರುಮಾಡಿದ ಸರ್ಕಾರ ಅರೆಯದ ಕಬ್ಬಿಗೆ ಎಕರೆಯೊಂದಕ್ಕೆ 10,000-00 ರೂ. ಪರಿಹಾರ ನೀಡುತ್ತೇವೆ ಎಂದು ಹೇಳಿದೆ. ಆದರೆ ಕಬ್ಬು ಬೆಳೆಗಾರರನ್ನು ಸಂಕಷ್ಟಕ್ಕೆ ನೂಕಿದ ನೀತಿಗಳ ಬಗ್ಗೆ ಒಂದು ಸಣ್ಣ ಆತ್ಮ ಅವಲೋಕನದ ಮಾತು ಈ ಸರ್ಕಾರದಿಂದ ಬರಲಿಲ್ಲ. ಪರಿಹಾರ ನೀಡಲು ಕಾರ್ಖಾನೆಗಳಿಗೆ ನೊಂದಾವಣೆಯಾಗಿರುವ ರೈತರ ಪಟ್ಟಿಯನ್ನು ತಯಾರಿಸಲು ನಿರ್ದೇಶನ ನೀಡಲಾಗಿದೆ. ಆದರೆ ಗಾಣಗಳಿಗೆ ಕಬ್ಬು ಸರಬರಾಜು ಮಾಡುತ್ತಿದ್ದ ರೈತರ ಪಟ್ಟಿ ಕಾರ್ಖಾನೆಗಳಲ್ಲಿ ಸಿಗುವುದಿಲ್ಲ. ಅಂದರೆ ಪರಿಹಾರದ ವ್ಯಾಪ್ತಿಯಿಂದ ಅವರನ್ನು ಹೊರಗಿಟ್ಟಂತೆಯೇ ಸರಿ. ನೀರಿಲ್ಲದೆ ಒಣಗಿ ನಿಂತ ಕಬ್ಬಿಗೆ ಪರಿಹಾರ ನೀಡುವ ಬಗ್ಗೆಯೇನೂ ಈ ಸರ್ಕಾರ ಚಕಾರವೆತ್ತಿಲ್ಲ. ಈ ಸರ್ಕಾರದ ಮೊಸಳೆ ಕಣ್ಣೀರಿಗೆ ಇದು ಸಾಕ್ಷಿ. ಎಕರೆಗೆ ಹತ್ತು ಸಾವಿರ ರೂ.ಪರಿಹಾರ ನೀಡುವುದಾಗಿ ಸರ್ಕಾರ ಹೇಳಿದೆ. ಆದರೆ ಒಂದು ಎಕರೆಯಲ್ಲಿ ಕಬ್ಬನ್ನು ಬೆಳೆಯಲು 12-15 ಸಾವಿರ ರೂ ಖರ್ಚು ತಗಲುತ್ತದೆ. ಕಬ್ಬಿನ ಬೆಳೆ ಬೇರೆ ಬೆಳೆಗಳಂತೆ ಕಟಾವು ಮಾಡದೇ ಹೋದರೆ ಗದ್ದೆಯಲ್ಲೇ ನಾಶವಾಗುವುದಿಲ್ಲ. ಒಣ ಕಟ್ಟಿಗೆಯಂತೆ ನಿಂತಿರುತ್ತದೆ. ಕೂಳೆ ಬೆಳೆ ತೆಗೆಯಲು, ಬೇರೆ ಬೆಳೆ/ಬೆಳೆಯಲು ಬೆಳೆದು ನಿಂತ ಕಬ್ಬನ್ನು ಕಟಾವು ಮಾಡಿ ಗದ್ದೆಯಿಂದ ಹೊರಗೆ ಸಾಗಿಸಲೇಬೇಕು. ಹೀಗೆ ಸಾಗಿಸಲು ಟನ್ ಒಂದಕ್ಕೆ 300-400 ರೂ.ಗಳು ಖರ್ಚಾಗುತ್ತದೆ. ಎಕರೆಗೆ 40-50 ಟನ್ ಬೆಳೆ ಇಳುವರಿ ಬಂದರೆ 15-18 ಸಾವಿರ ಕಟಾವಿನ ವೆಚ್ಚವೇ ತಗಲುತ್ತದೆ ಅಂದರೆ ಬೆಳೆ ಮತ್ತು ಕಟಾವು ಸೇರಿ ಎಕರೆಗೆ 25-30 ಸಾವಿರ ರೂ. ಖರ್ಚಾಗುವಾಗ ಸರ್ಕಾರ ನೀಡುವ ಪರಿಹಾರ ಆನೆ ಹೊಟ್ಟೆಗೆ ಆರು ಕಾಸಿನ ಮಜ್ಜಿಗೆಯಂತೆ ! ಆದ್ದರಿಂದ ಎಕರೆಗೆ ಕನಿಷ್ಠ 25 ಸಾವಿರ ರೂ.ಗಳ ಪರಿಹಾರವನ್ನು ನೀಡಬೇಕು. ಒಣಗಿ ಹೋದ, ಗಾಣವನ್ನು ನಂಬಿದ ಎಲ್ಲಾ ಬೆಳೆಗಳಿಗೂ ಪರಿಹಾರವನ್ನು ನೀಡಬೇಕು. ಕೃಷಿಯನ್ನು ರೈತರನ್ನು ಉಳಿಸಬೇಕಾದರೆ ನೂತನ ಕೃಷಿ ನೀತಿಗೆ ಸರ್ಕಾರ ಮಂಗಳ ಹಾಡಲೇ ಬೇಕು. ○

ಬೀದರ್, ಗುಲ್ಬರ್ಗಾ ಕಬ್ಬು ಬೆಳೆಗಾರರ ಕಥೆ...

ಪುಟ 7 ರಿಂದ

ಸಾಧ್ಯವಾಗಲಿಲ್ಲ.

ಆಳಂದ ಶುಗರ್ಸ್ :

ಇನ್ನು ಆಳುವ ಮತ್ತು ಗುಲ್ಬರ್ಗಾ ತಾಲ್ಲೂಕಿನ ರೈತರಿಗೆ ವರದಾನವಾಗಬೇಕಿದ್ದ ಆಳಂದ ಶುಗರ್ಸ್ ಕಥೆಯೂ ಇಂತಾದ್ದೆ. ಈ ಮೊದಲು ಸಹಕಾರಿ ರಂಗದಲ್ಲಿದ್ದ ಈ ಕಾರ್ಖಾನೆಯನ್ನು ಸರ್ಕಾರ ರೇಣುಕ ಶುಗರ್ಸ್‌ಗೆ ವಹಿಸಿತು. ಅಲ್ಲದೆ ನಿತ್ಯ 2,500 ಸಾಮರ್ಥ್ಯದ ಕಾರ್ಖಾನೆಯನ್ನು 5 ಸಾವಿರ ತನಗೆ ಏರಿಸುವ ಭರವಸೆ ನೀಡಿತು. ಆದರೆ ಅದು ಜಾರಿಯಾಗಲಿಲ್ಲ. ಈ ಮೂಲಕ ಅದೂ ರೈತರಿಗೆ ಮೋಸ ಮಾಡಿತು.

ಇನ್ನು ಚಂಚೋಳಿಯಲ್ಲಿ ಶಾಸಕ ವೈಜನಾಥ ಪಾಟೀಲ್ ಸಕ್ಕರೆ ಕಾರ್ಖಾನೆ ಸಂಬಂಧ ರೈತರಿಂದ ಷೇರು ಸಂಗ್ರಹಿಸಿ ಶಂಕು ಸ್ಥಾಪನೆ ಮಾಡಿದರು. ಆದರೆ ಅದು ಕೂಡ ಕಾರ್ಯರೂಪಕ್ಕೆ ಬರಲಿಲ್ಲ.

ಈ ಎಲ್ಲಾ ಕಾರ್ಖಾನೆಗಳು ಒಡ್ಡಿದ ಆಸೆಗೆ ಬಲಿಯಾದ ಜಿಲ್ಲೆಯ ರೈತರೂ ಬಾರಿ ಪ್ರಮಾಣದಲ್ಲಿ ಕಬ್ಬು ಬೆಳೆದ ಪರಿಣಾಮ ಇದೀಗ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದಲ್ಲದೆ ಕಳೆದ ಬಾರಿಯಂತೆ ಪಕ್ಕದ ಬೀದರ್ ಮತ್ತು ಆಂಧ್ರ ಕಾರ್ಖಾನೆಗಳು ಕಬ್ಬು ಖರೀದಿಸಬಹುದೆಂದು ನಂಬಿಕೊಂಡಿದ್ದ ರೈತರಿಗೆ ಈ ಬಾರಿ ಆ ಭರವಸೆ ಕೂಡ ಸಿಕ್ಕಲ್ಲ. ಹೀಗಾಗಿ ಜಿಲ್ಲೆಯಲ್ಲಿನ ಕಬ್ಬು ಹೆಚ್ಚುವರಿಯಾಗಿ ಬಿದ್ದಿದೆ. ಮೊದಲೇ ಬೀಜ, ಗೊಬ್ಬರ, ಅಂತೆಲ್ಲಾ ಹೈರಾಣಾಗಿದ್ದ ರೈತ ಮತ್ತಷ್ಟು ಕುಸಿದು ಬಿದ್ದಿದ್ದಾನೆ. ಇದರ ಪರಿಣಾಮ ಜಿಲ್ಲೆಯಲ್ಲಿ 8 ಜನ ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

(ಗುಲ್ಬರ್ಗಾ ಜಿಲ್ಲೆಯಲ್ಲಿ ಕಳೆದ ವರ್ಷ ಬೆಳೆಯಾದ ಕಬ್ಬು ಸುಮಾರು 5 ಲಕ್ಷ ಟನ್ ಆದರೆ ಈ ಬಾರಿ ಅದು 12 ಲಕ್ಷ ಟನ್‌ಗಿಂತ ಅಧಿಕ)

ಜಿಲ್ಲೆಯ ಕಬ್ಬಿನ ಇಳುವರಿ

ತಾಲ್ಲೂಕು	ಹೆಕ್ಟೇರ್‌ಗಳಲ್ಲಿ	ಟನ್‌ಗಳು
ಅಫ್ಜಲ್‌ಪುರ	5476	4,10,700 ಲಕ್ಷ
ಆಳಂದ	3832	2,87,400 ಲಕ್ಷ
ಚಂಚೋಳಿ	1043	78,225 ಸಾವಿರ
ಗುಲ್ಬರ್ಗಾ	3020	2,26,500 ಲಕ್ಷ
ಜೇವರ್ಗಿ	2790	2,09,250 ಲಕ್ಷ
ಸೇಡಂ	30	2250
ಶಾಹಾಪುರ	78	5850
ಸುರಪುರ	120	9000
ಯಾದಗೀರ್	23	1725

ಬೀದರ್ :

ಇನ್ನು ಬೀದರ್ ಜಿಲ್ಲೆಯಲ್ಲಿರುವ ಬಿಎಸ್‌ಎಸ್‌ಕೆ, ಸಾರಂಜಾ ಮತ್ತು ಬಾಲ್ಕಿಯ ಮಹಾತ್ಮಗಾಂಧಿ ಸಹಕಾರಿ ಕಾರ್ಖಾನೆಗಳು ನಿತ್ಯ ತಲಾ 5 ಸಾವಿರ ಟನ್ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿವೆ. ಈ ಬಾರಿ ಈ ಮೂರು ಕಾರ್ಖಾನೆಗಳು ಅರೆದಿದ್ದು 18 ಲಕ್ಷ ಟನ್. ಆದರೆ ಜಿಲ್ಲೆಯಲ್ಲಿ ಬೆಳೆಯಲಾದ ಕಬ್ಬು 30 ಲಕ್ಷ ಟನ್.

ಹೆಚ್ಚುವರಿ ಕಬ್ಬು ಉಳಿಯಲು ಕಾರಣ:

1.ಪ್ರತಿ ವರ್ಷ ಜಿಲ್ಲೆಯ ಸಣ್ಣ ಸಣ್ಣ ಘಟಕಗಳು ಬೆಲ್ಲ ಉತ್ಪಾದಿಸುತ್ತಿದ್ದವು. ಆ ಬೆಲ್ಲವನ್ನು ಪಕ್ಕದ ಮಹಾರಾಷ್ಟ್ರ ಲಿಕ್ಕರ್ ಉತ್ಪಾದನೆಗಾಗಿ ಖರೀದಿಸುತಿತ್ತು. ಆದರೆ ಮಹಾರಾಷ್ಟ್ರ ಸರ್ಕಾರ ಲಿಕ್ಕರ್ ಉತ್ಪಾದನೆ ಮೇಲೆ ನಿಷೇಧ ಹೇರಿರುವ ಪರಿಣಾಮ ಬೀದರ್ ಜಿಲ್ಲೆಯ ಬೆಲ್ಲಕ್ಕೆ ಬೇಡಿಕೆ ಬರಲಿಲ್ಲ. ಹಾಗಾಗಿ ಹೆಚ್ಚುವರಿ ಕಬ್ಬು ಉಳಿಯಿತು.

2. ಪ್ರತಿ ಬಾರಿ ಇಲ್ಲಿನ ಕಬ್ಬನ್ನು ಆಂಧ್ರ ಮತ್ತು ಮಹಾರಾಷ್ಟ್ರ ಕಾರ್ಖಾನೆಗಳು ಖರೀದಿ ಮಾಡುತ್ತಿದ್ದವು. ಆದರೆ ಈ ಬಾರಿ ಅದೂ ಆಗಲಿಲ್ಲ.

3. ಇದರೊಂದಿಗೆ ಕೇವಲ ಷೇರುದಾರರ ಕಬ್ಬನ್ನು ಮಾತ್ರ ಅರೆಯುವುದಾಗಿ ಕಾರ್ಖಾನೆಗಳು ಹೇಳಿದ್ದರಿಂದ ಷೇರುದಾರರಲ್ಲದವರ ಕಬ್ಬು ಹಾಗೆ ಉಳಿಯಿತು.

4. ಇದೆಲ್ಲದರ ಪರಿಣಾಮವಾಗಿ ಈ ವರ್ಷ ಬೀದರ್ ಜಿಲ್ಲೆಯಲ್ಲಿ 45 ರೈತರು ಆತ್ಮಹತ್ಯೆ ಮಾಡಿಕೊಂಡರೆ ಅದರಲ್ಲಿ ಕಬ್ಬು ಬೆಳೆಗಾರರ ಸಂಖ್ಯೆ ಸುಮಾರು 20.

○ **ಪಾವೆಲ್**

ರಿಯಲ್ ಎಸ್ಟೇಟ್ ದಂಧೆಗೆ.....

ಪುಟ 5 ರಿಂದ

ಎಂಬುದನ್ನು ಅವರು ಮರೆತಿದ್ದಾರೆ.

ಇಲ್ಲಿ ಪ್ರತಿಯೊಬ್ಬರೂ ಯೋಚಿಸಬೇಕಾದ ಮತ್ತೊಂದು ವಿಷಯ ಎಂದರೆ ಕೇಂದ್ರ ಸರ್ಕಾರ ಎಸ್‌ಇಜಡ್ ಕುರಿತು ಇನ್ನೂ ಸ್ಪಷ್ಟವಾದ ಕಾನೂನು ನೀತಿ ನಿಯಮಗಳನ್ನು ರೂಪಿಸಿಲ್ಲ. ಇರುವ ಕಾನೂನು ರಿಯಲ್ ಎಸ್ಟೇಟ್ ದಂಧೆಗೆ ಪೂರಕವಾಗಿದೆ. ಅಷ್ಟೇ ಅಲ್ಲದೆ ಸರ್ಕಾರವೇ ವಲಯಗಳನ್ನು ಸ್ಥಾಪಿಸಿ ನಿಗದಿತ ಅವಧಿಗೆ ಉದ್ಯಮಿಗಳಿಗೆ ನೀಡಿ ತೆರಿಗೆ ವಸೂಲಿ ಮಾಡಿ ಅಭಿವೃದ್ಧಿ ಕಾರ್ಯಗಳಿಗೆ ಬಳಸುವ ಯೋಜನೆ ಇಲ್ಲಿಲ್ಲ. ಕನಿಷ್ಟ ಸರ್ಕಾರವಾದರೂ ರೈತರಿಂದ ಭೂಮಿ ಖರೀದಿಸಿ ಉದ್ಯಮಿಗಳಿಗೆ ಲೀಸ್ ಆಧಾರದಲ್ಲಿ ಒದಗಿಸಿದರೆ ಮುಂದೊಂದು ದಿನ ಭೂಮಿ ವಾಪಸ್ ಬರಲಿದೆ ಎಂಬ ಆಶಯವನ್ನಾದರೂ ಉಳಿಸಿಕೊಳ್ಳಬಹುದು. ಆದರೆ ಉದ್ಯಮಿಗಳು ನೇರವಾಗಿ ರೈತರಿಂದ ಭೂಮಿ ಖರೀದಿಸಲು ಹೇಳಿರುವುದರಿಂದ ರೈತರು ಮತ್ತು ಸರ್ಕಾರ ಇಬ್ಬರೂ ಭೂಮಿ ಮೇಲಿನ ಒಡೆತನ ಕಳೆದುಕೊಳ್ಳಲಿದ್ದಾರೆ. ಒಂದು ವೇಳೆ ಕಂಪನಿಯೊಂದು ಉದ್ಯಮ ಸ್ಥಾಪಿಸಿ ಕೆಲವೇ ದಿನಗಳಲ್ಲಿ ದಿವಾಳಿಯಾಗಿದೆ ಎಂದು ನೆಪ ಒಡ್ಡಿ ಹೆಚ್ಚು ಲಾಭಕ್ಕೆ ಮತ್ತೊಂದು ಕಂಪನಿಗೆ ಭೂಮಿ ಮಾರಾಟ ಮಾಡಿ [illegible]ಾಯನ ಮಾಡುವುದಿಲ್ಲ ಎಂಬುದಕ್ಕೆ ಗ್ಯಾರಂಟಿ [illegible]. ಇತ್ತ ಜನತೆಗೆ ಕೆಲಸವೂ ಇಲ್ಲದೆ ಭೂಮಿಯೂ [illegible] ಮರಳುಗಾಡಿನಲ್ಲಿ [illegible]ರಿಗೆ ಹಪಹಪಿಸುವಂತಾಗುತ್ತದೆ. ಆಗ ರೈತರ ರಕ್ಷಣೆಗೆ ಯಾವ ಕಾನೂನು, ಕೋರ್ಟ್ ಕಚೇರಿಯೂ ಬರುವುದಿಲ್ಲ. ಬರಲು ಸಾಧ್ಯವೂ ಇಲ್ಲದಂತಾಗುತ್ತದೆ.

ದೇವನಹಳ್ಳಿಗೆ ಹತ್ತಿರ!

ನಂದಗುಡಿಯಿಂದ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೇವಲ 20 ಕಿ.ಮೀಟರ್‌ಗಳು ಮಾತ್ರ ಇದ್ದು, ಇಲ್ಲಿನ ಎಸ್‌ಇಜಡ್ ನಿರ್ಮಾಣಕ್ಕೆ ಪ್ರಮುಖ ಕಾರಣವಾಗಿದೆ. ನಂದಗುಡಿಯಿಂದ ಹೆದ್ದಾರಿ ನಿರ್ಮಾಣ ಮಾಡಿದರೆ ದೇವನ ಹಳ್ಳಿಗೆ ಕೇವಲ 10 ನಿಮಿಷಕ್ಕೆ ತಲುಪಬಹುದಾಗಿದೆ. ಹಾಗಾಗಿ ಈ ಪ್ರದೇಶದ ಮೇಲೆ ಬಂಡವಾಳಗಾರರ ಕಾಕದೃಷ್ಟಿ ಬಿದ್ದಿದೆ ಎಂಬುದು ನಿಶ್ಚಿತವಾಗಿ ಎನ್ನುತ್ತಾರೆ ಮನೋಹರ್.

ರೈತರಿಗೆ ಒಳ್ಳೆಯದು ಮಾಡಬೇಕೆಂದು, ಆರ್ಥಿಕ ಅಭಿವೃದ್ಧಿಗೆ ನೆರವಾಗಬೇಕೆಂಬ ಸುಬುದ್ಧಿ ಉದ್ಯಮಿಗಳಿಗೆ ಇದ್ದಲ್ಲಿ ಅತ್ಯಂತ ಹಿಂದುಳಿದ ಬಾಗೇಪಲ್ಲಿ, ಬಂಗಾರಪೇಟೆ ಯಂತಹ ತಾಲೂಕುಗಳಲ್ಲಿ ಎಸ್‌ಇಜಡ್ ಸ್ಥಾಪಿಸಲಿ. ಅದನ್ನು ಬಿಟ್ಟು ನಂದಗುಡಿ ಬಳಿ ಸ್ಥಾಪಿಸುವ ಹಿಂದಿರುವ ಗುಟ್ಟಾದರೂ ಏನು?


ಬೆಂಗಳೂರು ಮತ್ತು ಸುತ್ತ ಮುತ್ತ ಐಟಿ, ಬಿಟಿ ಮತ್ತಿತರ ವಲಯ ಸ್ಥಾಪನೆಗೆ ಸರ್ಕಾರ ಈಗಾಗಲೆ ಪ್ರಸ್ತಾವನೆ ಸಲ್ಲಿಸಿದೆ. ಹಾಗಿದ್ದ ಮೇಲೆ ನಂದುಗುಡಿಯಲ್ಲಿ ಯಾವ ಉದ್ಯಮಕ್ಕೆ ಎಸ್‌ಇಜಡ್ ಸ್ಥಾಪಿಸಲಿದೆ ಎಂಬುದನ್ನು ಹೇಳದಿರುವುದು ಹಲವಾರು ಸಂಶಯಗಳನ್ನು ಹುಟ್ಟು ಹಾಕುತ್ತವೆ.

ನಂದಗುಡಿಯಲ್ಲಿ ಸ್ಥಾಪಿಸುವ ಎಸ್‌ಇಜಡ್ ಕುರಿತು ಸರ್ಕಾರ ಬಹಿರಂಗವಾಗಿ ಪ್ರಕಟಿಸಬೇಕು. ಅಲ್ಲಿನ ಜನಕ್ಕೆ ಉದ್ಯೋಗ ಸೃಷ್ಟಿಯಾಗುವಂತಹ ವಲಯಗಳನ್ನು ಮಾತ್ರ ಸ್ಥಾಪಿಸಬೇಕು. ಅವರಿಗೇ ಪ್ರಥಮ ಆದ್ಯತೆ ನೀಡಬೇಕು. ಭೂಮಿ ಹೊಂದಿರುವವರಿಗೂ, ಈಗಿರುವ ಭೂಮಿಯಿಂದಲೇ ತಮ್ಮ ಜೀವನ ಸಾಗಿಸುತ್ತಿರುವವರಿಗೂ ಪರಿಹಾರ ನೀಡಬೇಕು. ಸಮರ್ಪಕವಾದ ಪುನರ್‌ವಸತಿ ಯೋಜನೆಗಳನ್ನು ಕೈಗೊಳ್ಳಬೇಕೆಂಬುದು ನಾಗರಾಜ್ ಒತ್ತಾಯಿಸಿದ್ದಾರೆ. ಒಂದು ವೇಳೆ ಅಲ್ಲಿನ ಕೃಷಿ ಕೂಲಿ ಕಾರ್ಮಿಕರು ಈ ವಲಯಗಳಲ್ಲಿ ಸೃಷ್ಟಿಯಾಗುವ ಉದ್ಯೋಗಕ್ಕೆ ಅರ್ಹರಾಗದಿದ್ದಲ್ಲಿ ಅವರಿಗೆ ಕಂಪನಿಗಳೇ ತರಬೇತಿ ನೀಡಬೇಕು.

ಈ ಪ್ರದೇಶದಲ್ಲಿರುವ ಹಲವಾರು ಪುಡಾರಿಗಳನ್ನು ಪುಸಲಾಯಿಸುವತ್ತಲೂ ಸರ್ಕಾರ ಮುಂದಾಗಿದೆ. ರೈತರ ಪರ ಮಾತನಾಡುವವರನ್ನು ಜನರಿಂದ ದೂರ ಮಾಡಲು, ರೈತರ ದಿಕ್ಕು ತಪ್ಪಿಸುವ ಎಲ್ಲ ಕುತಂತ್ರಗಳನ್ನು ಮಾಡಲಿದೆ. ಭಾರತೀಯ ಕಿಸಾನ್ ಸಂಘದಂತಹ ಇನ್ನೂ ಹಲವಾರು ಸಂಘಟನೆಗಳು, ಹೋರಾಟ ಸಮಿತಿಗಳು ಹುಟ್ಟಿಕೊಂಡು ರೈತರ ಪರ ಎಂಬಂತೆ ನಾಟಕವಾಗಿ ಉದ್ಯಮಿಗಳ ಪರ ನಿಲುವು ತಳೆಯುವಂತಹ ಪಿತೂರಿಗಳಲ್ಲಿ ಉದ್ಯಮಿಗಳೂ ಪರಿಣಿತರು. ಪುಡಾರಿಗಳು, ಚೇಲಾಗಳ ಯೋಗ್ಯತೆಗೆ ತಕ್ಕಂತೆ ಅವರ ಹಣ ಬಿಸಾಕಲು ಹಿಂದೆ ಮುಂದೆ ನೋಡುವುದಿಲ್ಲ.

ಹಲವಾರು ದೊಡ್ಡ ದೊಡ್ಡ ರಾಜಕಾರಣಿಗಳು ರೈತರ ಹಿತ ಆಲಕ್ಷಿಸಿ ಎಸ್‌ಇಜಡ್ ಲಾಭ ಪಡೆಯಲು ಮುಂದಾಗುತ್ತಾರೆ. ಅಲ್ಲಿನ ಕೆಲವು ರಾಜಕಾರಣಿಗಳ ಬೆಂಬಲವಿಲ್ಲದಿದ್ದಲ್ಲಿ ಈ ಯೋಜನೆ ಸಾಧ್ಯವಿಲ್ಲ ಎಂಬುದನ್ನು ಅರಿತಿರುವ ಉದ್ಯಮಿಗಳು ಅವರ ಕೈಯನ್ನೂ ಬೆಚ್ಚಗೆ ಮಾಡಲಿದ್ದಾರೆ. ರಾಜ್ಯದ ಅಧಿಕಾರದಲ್ಲಿರುವ ಮುಖಂಡರು, ಹೊಸಕೋಟೆ ತಾಲ್ಲೂಕಿನಲ್ಲಿರುವ ಕೆಲವು ಮುಖಂಡರು ಬೇನಾಮಿ ಹೆಸರಿನಲ್ಲಿ ತಮ್ಮದೇ ಆದ ಉದ್ದಮಗಳನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ ○

ರೈತರು ಏನನ್ನುತ್ತಾರೆ



ಯಾವೊಬ್ಬ ರೈತನ ಆತ್ಮಹತ್ಯೆ ಇಲ್ಲದ ನಂದಗುಡಿ ಹೋಬಳಿಗೆ ಎಸ್‌ಇಝಡ್‌ಗೆ ಯಾಕೆ ನಮ್ಮ ಪಾಡಿಗೆ ನಮ್ಮನ್ನು ಬಿಟ್ಟರೆ ಈಗಿನಂಗೆ ನೆಮ್ಮದಿ ಬದುಕು ಬದುಕೊತೇವೆ.

ಬಿ.ಕೃಷ್ಣಪ್ಪ ಹಿಂಡಿಗನಾಳದ ರೈತರು

★

ಸ್ವಂತ ಅರ್ದ ಎಕರೆ ಜಮೀನಲ್ಲಿ ತರಕಾರಿ ಬೆಳೆದು ಹಸು, ಕುರಿ ಸಾಕಿಕೊಂಡು ಹಾಲು ಮಾರಿ 20 ಜನರ ಕುಟುಂಬ ಬದುಕು ಸಾಗಿಸುತ್ತಿದ್ದೇವೆ. ಅದನ್ನು ಕಿತ್ತುಕೊಂಡರೆ ನಾವೆಲ್ಲಾ ಏನು ಕೆರೆ ಭಾವಿ ನೋಡ್ಕೋಬೇಕಾ?

ಮುನಿವೆಂಕಟ ರೈತರು, ಹಿಂಡಗಿನಾಳ

ಭರವಸೆ ಮೂಡಿಸಿದ ಕೂಲಿಕಾರರ ಅಖಿಲ ಭಾರತ ಸಮ್ಮೇಳನ

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ 6ನೇ ಸಮ್ಮೇಳನವು ಜೂನ್ 3 ರಿಂದ 5ರವರೆಗೆ ಭಗತ್‌ಸಿಂಗ್‌ರ ಪಂಜಾಬ್‌ನ ನವಾಶಹರ್ ಎಂಬಲ್ಲಿ ಜರುಗಿತು. ಕರ್ನಾಟಕದಿಂದ 29 ಜನ ಕೂಲಿಕಾರರ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕರ್ನಾಟಕದ ಜನತೆಗೆ ಇದೊಂದು ಸಂಕ್ಷಿಪ್ತ ವರದಿ

ಜದ ಅತ್ಯಂತ ಕೆಳಸ್ತರದಲ್ಲಿರುವ ಕೃಷಿ ಲಿಕಾರರನ್ನು ಕಳೆದ 25 ವರ್ಷಗಳಿಂದ ಘಟಿಸುತ್ತಾ ಅವರ ಹಕ್ಕುಗಳಿಗಾಗಿ ದೇಶಾದ್ಯಂತ ಮರಶೀಲ ಹೋರಾಟಗಳನ್ನು ನಡೆಸುತ್ತಾ ದಿರುವ ಅಖಿಲ ಭಾರತ ಕೃಷಿ ಕೂಲಿಕಾರರ ಘದ 6ನೇ ಸಮ್ಮೇಳನ ಹುತಾತ್ಮ ಭಗತ್‌ಸಿಂಗ್ ವರ ನಾಡಿನಲ್ಲಿ ನಡೆಯಿತು. ದೇಶದ 13 ಪ್ರಮುಖ ಜ್ಯಗಳ ಸುಮಾರು 43 ಲಕ್ಷ ಸದಸ್ಯರನ್ನು ಪ್ರತಿನಿಧಿಸಿ ಟ್ಟು 664 ಪ್ರತಿನಿಧಿಗಳು ಮತ್ತು 18 ಜನ ವೀಕ್ಷಕರು ಮ್ಮೇಳನದಲ್ಲಿ ಭಾಗವಹಿಸಿದ್ದರು.

ಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ

ಸಮ್ಮೇಳನದ ಮೊದಲ ದಿನ ಬೆಳಿಗ್ಗೆ 11 ಗಂಟೆಗೆ ಮ್ಮೇಳನದ ಪ್ರತಿನಿಧಿಗಳು ಮೆರವಣಿಗೆಯಲ್ಲಿ ೋಷಣೆಗಳನ್ನು ಕೂಗುತ್ತಾ ನಗರದ ಮುಖ್ಯ ತ್ತದಲ್ಲಿರುವ ಡಾ: ಅಂಬೇಡ್ಕರ್ ಅವರ ಪ್ರತಿಮೆಯ ಳಿಗೆ ಬಂದರು. ಆರಂಭದಲ್ಲಿ ಸಂಘದ ಅಧ್ಯಕ್ಷರಾದ .ರಾಮಯ್ಯ ನವರು ಡಾ: ಅಂಬೇಡ್ಕರ್ ಅವರ ತಿಮೆಗೆ ಮಾಲಾರ್ಪಣೆ ಮಾಡಿದರು. ಅನಂತರ ಂಘದ ಪ್ರಧಾನ ಕಾರ್ಯದರ್ಶಿ .ವಿಜಯರಾಘವನ್ ಮತ್ತು ಇನ್ನುಳಿದ ದಾಧಿಕಾರಿಗಳು ಬೇರೆ ಬೇರೆ ರಾಜ್ಯಗಳ ುಖಂಡರು ಮಹಿಳಾ ಮುಖಂಡರೂ ಸೇರಿದಂತೆ ಾತಿ ಅಸ್ಪೃಶ್ಯತೆಯ ವಿರುದ್ಧ, ಸಮಾನತೆಗಾಗಿ ೋರಾಡಿದ ಮಹಾನ್ ಹೋರಾಟಗಾರ ಡಾ: ಂಬೇಡ್ಕರ್ ಅವರಿಗೆ ಗೌರವ ಸಲ್ಲಿಸಿದರು.

ಸಮ್ಮೇಳನದ ಕಲಾಪಗಳು ಬೃಹತ್ ಬಹಿರಂಗ ಧಿವೇಶನದೊಂದಿಗೆ ಆರಂಭವಾದವು. ಸುಡು ುಡುವ ಬಿಸಿಲನ್ನು ಲೆಕ್ಕಿಸದೆ ಪಂಜಾಬದ ವಿವಿಧ ಿಲ್ಲೆಗಳಿಂದ ಆಗಮಿಸಿದ್ದ ಹತ್ತಾರು ಸಾವಿರ ಕೃಷಿ ೂಲಿಕಾರರು ಬಹಿರಂಗ ಸಭೆಯಲ್ಲಿ



ವರದಿ ಮೇಲಿನ ಚರ್ಚೆಯಲ್ಲಿ ಚಂದ್ರಪ್ಪ ಹೊಸ್ಕೇರಾ

ಭಾಗವಹಿಸಿದ್ದರು. ಮಹಿಳಾ ಕೃಷಿ ಕೂಲಿಕಾರರೂ ದೊಡ್ಡ ಸಂಖ್ಯೆಯಲ್ಲಿದ್ದರು.

ಸಿಪಿಐ(ಎಂ) ಪೊಲಿಟ್ ಬ್ಯೂರೊ ಸದಸ್ಯರೂ ರಾಜ್ಯಸಭಾ ಸದಸ್ಯರೂ ಆಗಿರುವ ವೃಂದಾ ಕಾರಟ್ ಅವರು ಮುಖ್ಯ ಭಾಷಣಕಾರರಾಗಿದ್ದರು. ಕೇಂದ್ರದ ಯು.ಪಿ.ಎ ಸರ್ಕಾರದ ಬಡವರ ವಿರೋಧಿ ನೀತಿಗಳನ್ನು ಕಟುವಾಗಿ ಟೀಕಿಸಿದ ಅವರು ಮಹಿಳಾ ಕೃಷಿ ಕೂಲಿಕಾರರ ಪರಿಸ್ಥಿತಿ ಕುರಿತು ಕಳವಳ ವ್ಯಕ್ತಪಡಿಸಿದರು. ಕೃಷಿ ಕೂಲಿಕಾರರು ತಮ್ಮ ಜೀವನ ಪರಿಸ್ಥಿತಿಯನ್ನು ಬದಲಾಯಿಸಲು ಹೆಚ್ಚೆಚ್ಚು ಸಮರಶೀಲ ಹೋರಾಟಗಳಿಗೆ ಮುಂದಾಗಬೇಕೆಂದು ಹೇಳಿದ ಅವರು ಅಂತಹ ಹೋರಾಟಗಳಿಗೆ ತಮ್ಮ ಪಕ್ಷದ ಸಂಪೂರ್ಣ ಬೆಂಬಲವಿದೆ ಎಂದು ಹೇಳಿದರು.

ಪ್ರತಿನಿಧಿಗಳ ಅಧಿವೇಶನ

ಸಂಘದ ಅಖಿಲ ಭಾರತ ಅಧ್ಯಕ್ಷರು ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನದ ಕಲಾಪಗಳಿಗೆ ಚಾಲನೆ ನೀಡಿದರು. ಸಭಾಂಗಣಕ್ಕೆ ಹುತಾತ್ಮ ಭಗತ್‌ಸಿಂಗ್ ಅವರ ಹೆಸರನ್ನು ಇಡಲಾಗಿತ್ತು.

ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾದ ಎಸ್.ಆರ್.ಪಿಳ್ಳೆ ಸಮ್ಮೇಳನವನ್ನು ಉದ್ಘಾಟಿಸಿದರು. ದೇಶದಲ್ಲಿ ಇಂದು ಕೃಷಿರಂಗದ ಎಲ್ಲ ಸ್ತರಗಳಿಗೆ ಆವರಿಸುತ್ತಿರುವ ಬಿಕ್ಕಟ್ಟಿಗೆ ದೇಶದಲ್ಲಿ 1991ರಿಂದ ಜಾರಿಗೊಳಿಸಲಾಗುತ್ತಿರುವ ಉದಾರೀಕರಣ, ಜಾಗತೀಕರಣ ನೀತಿಗಳೇ ಕಾರಣ ಎಂದು ಹೇಳಿದ ಅವರು ಈ ನೀತಿಗಳು ಕೃಷಿ ರಂಗದಲ್ಲಿ ಉಂಟುಮಾಡಿರುವ ಅನಾಹುತವು ಇನ್ನೂ ಮುಂದುವರೆದಿರುವ ರೈತರ ಆತ್ಮಹತ್ಯೆಗಳಲ್ಲಿ ವ್ಯಕ್ತವಾಗುತ್ತಿದೆ ಎಂದರು. ರೈತರು ದಿವಾಳಿಯಾಗುತ್ತಿದ್ದಂತೆ ಕೃಷಿ ಕೂಲಿಕಾರರು ಯಾವುದೋ ದೊಡ್ಡ ದುರಂತಕ್ಕೆ ಒಳಗಾಗಿ ನಿರಾಶ್ರಿತರಾದವರಂತೆ ನಗರ ಪ್ರದೇಶಗಳಿಗೆ ಕುಟುಂಬ ಸಮೇತರಾಗಿ ವಲಸೆ ಹೋಗುತ್ತಿದ್ದಾರೆ. ಇಂತಹ ವಿನಾಶಕಾರಿ ನೀತಿಗಳನ್ನು ಬದಲಾಯಿಸಲು ದೊಡ್ಡ ಹೋರಾಟ ನಡೆಯಬೇಕಿದೆ ಎಂದು ಹೇಳಿದ ಅವರು ಈ ಹೋರಾಟದಲ್ಲಿ ಕೃಷಿ ಕೂಲಿಕಾರರು ಮತ್ತು ಬಡರೈತರು ನಿರ್ವಹಿಸಬೇಕಾದ ಪಾತ್ರವನ್ನು ಕುರಿತು ಸಮ್ಮೇಳನದಲ್ಲಿ ವಿವರವಾದ ಚರ್ಚೆಯಾಗಬೇಕೆಂದು




ಕರೆ ನೀಡಿದರು.

ಪ್ರಧಾನ ಕಾರ್ಯದರ್ಶಿಗಳ ವರದಿ

2003ರಲ್ಲಿ ಕೇರಳದಲ್ಲಿ ಜರುಗಿದ ಸಂಘದ 5ನೇ ಅಖಿಲ ಭಾರತ ಸಮ್ಮೇಳನದ ನಂತರದ ಬೆಳವಣಿಗೆಗಳ ಕುರಿತು, ತೀವ್ರಗೊಂಡಿರುವ ಕೂಲಿಕಾರ ಸಂಕಷ್ಟಗಳ ಕುರಿತು ಹಾಗೂ ಕೂಲಿಕಾರರ ಸಂಘ ಈ ಅವಧಿಯಲ್ಲಿ ನಡೆಸಿದ ಹೋರಾಟಗಳ ಕುರಿತು ವಿವರವಾದ ಮುದ್ರಿತ ವರದಿಯನ್ನು ಮಂಡಿಸಿದರು. ಒಂದು ಇಡೀ ದಿನ ವರದಿಯ ಮೇಲೆ ಚರ್ಚೆ ನಡೆಯಿತು. ಚರ್ಚೆಯಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ತಮ್ಮ ತಮ್ಮ ರಾಜ್ಯಗಳ ಶ್ರೀಮಂತ ಅನುಭವಗಳನ್ನು ಸಮ್ಮೇಳನದ ಮುಂದಿಟ್ಟರು.

ಪ್ರತಿನಿಧಿಗಳು ನೀಡಿದ ಸಲಹೆಗಳನ್ನು ಸ್ವಾಗತಿಸಿ ಮಾತನಾಡಿದ ಪ್ರಧಾನ ಕಾರ್ಯದರ್ಶಿ ಎ.ವಿಜಯರಾಘವನ್ ದೇಶದ ವಿವಿಧ ಭಾಗಗಳಲ್ಲಿ ಹೆಚ್ಚುತ್ತಿರುವ ಸಂಘದ ಸದಸ್ಯತ್ವ ಮತ್ತು ಚಟುವಟಿಕೆಗಳು ನಮ್ಮೆಲ್ಲರಲ್ಲಿ ಭರವಸೆಯನ್ನು ಮೂಡಿಸಿದೆ ಎಂದು ಬಣ್ಣಿಸಿದರು. ಅನಂತರ ಪ್ರಧಾನ ಕಾರ್ಯದರ್ಶಿ ವರದಿಯನ್ನು ಸರ್ವಾನುಮತ ದಿಂದ ಅಂಗೀಕರಿಸಲಾಯಿತು. ಸಂಘಟನೆಯ ಬೆಳ್ಳಿ ಹಬ್ಬವನ್ನು ದೇಶಾದ್ಯಂತ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಯಿತು.



ಕಂದಾಪುರದಲ್ಲಿ ಕೃಷಿಕೂಲಿಕಾರರ ಸಮಾವೇಶ

ಮುಖ್ಯ ನಿರ್ಣಯಗಳು

ಸಮ್ಮೇಳನವು ಅನೇಕ ನಿರ್ಣಯಗಳನ್ನು ಚರ್ಚಿಸಿ ಅಂಗೀಕರಿಸಿತು. ಮುಖ್ಯವಾದವುಗಳು ಈ ಕೆಳಗಿನಂತಿವೆ.1. ಜಾತಿ ದೌರ್ಜನ್ಯ ಮತ್ತು ತಾರತಮ್ಯದ ವಿರುದ್ಧ ಒಂದಾಗಿ ಹೋರಾಡಲು ನಿರ್ಧಾರ. 2. ಕೃಷಿ ಕೂಲಿಕಾರರ ಸಮಗ್ರ ಕೇಂದ್ರೀಯ ಶಾಸನಕ್ಕಾಗಿ ಆಗ್ರಹ. 3.ಎಲ್ಲರಿಗೂ ಸಿಗುವಂತಹ ಉತ್ತಮ ರೇಷನ್ ವ್ಯವಸ್ಥೆಗಾಗಿ ಮತ್ತು ಎಲ್ಲ ಕೂಲಿಕಾರರಿಗೆ ಅಂತ್ಯೋದಯ ದರಗಳಲ್ಲಿ ಸಮರ್ಪಕ ರೇಷನ್ ಒದಗಿಸಲು ಒತ್ತಾಯಿಸಿ ಸಮರಶೀಲ ಹೋರಾಟ ನಡೆಸಲು ತೀರ್ಮಾನ 4. ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಗೆ ಸಾಕಷ್ಟು ಹಣವನ್ನು ಒದಗಿಸಿ ಅದನ್ನು ಪರಿಣಾಮಕಾರಿಯಾಗಿ ಎಲ್ಲ ಜಿಲ್ಲೆಗಳಲ್ಲಿಯೂ ಜಾರಿ ಮಾಡುವಂತೆ ಅದನ್ನು ಪರಿಣಾಮಕಾರಿಯಾಗಿ ಎಲ್ಲ ಜಿಲ್ಲೆಗಳಲ್ಲಿಯೂ ಜಾರಿ ಮಾಡುವಂತೆ ಒತ್ತಾಯ. 5.ವಲಸೆ ಕಾರ್ಮಿಕರ ಸಮಸ್ಯೆಗಳನ್ನು ಎತ್ತಿಕೊಂಡು ಎಲ್ಲಾ ರಾಜ್ಯಗಳಲ್ಲಿಯೂ ಹೋರಾಟಗಳನ್ನು ನಡೆಸುವುದು. 6. ಪರಿಶಿಷ್ಟ ಪಂಗಡಗಳ ಮತ್ತು ಇತರ ಅರಣ್ಯವಾಸಿಗಳ ಅರಣ್ಯ ಹಕ್ಕುಗಳ ಕಾಯ್ದೆ 2006 ರ ತ್ವರಿತ ಜಾರಿಗೆ ಆಗ್ರಹ 7. ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಪ್ರವೇಶಕ್ಕೆ ವಿರೋಧ. 8. ಮಹಿಳೆಯರ ಹಕ್ಕುಗಳಿಗೆ ರಕ್ಷಣೆ.


ಚುನಾವಣೆ

ಅಂತಿಮವಾಗಿ ಸಮ್ಮೇಳನವು 7 ಜನ ಪದಾಧಿಕಾರಿಗಳನ್ನು ಒಳಗೊಂಡ 35 ಸದಸ್ಯರುಳ್ಳ ಕೇಂದ್ರ ಕಾರ್ಯಕಾರಿ ಸಮಿತಿಯನ್ನು 108 ಜನ ಸದಸ್ಯರುಳ್ಳ ಜನರಲ್ ಕೌನ್ಸಿಲ್ ಅನ್ನು ಆಯ್ಕೆ ಮಾಡಿತು.

ಅಧ್ಯಕ್ಷರು : ಪಿ.ರಾಮಯ್ಯ (ಆಂಧ್ರಪ್ರದೇಶ), ಉಪಾಧ್ಯಕ್ಷರು:1) ಭಾನುಲಾಲ್ ಸಾಹ(ತ್ರಿಪುರ)(2) ಕುಮಾರ್ ಶಿರಾಲ್ಕರ್(ಮಹಾರಾಷ್ಟ್ರ), ಪ್ರಧಾನ ಕಾರ್ಯದರ್ಶಿ ಎ.ವಿಜಯರಾಘವನ್ (ಕೇರಳ), ಜಂಟಿ ಕಾರ್ಯದರ್ಶಿಗಳು: (1)ಸುನೀತ್ ಚೋಪ್ರಾ, (ಪಂಜಾಬ), (2) ಹನ್ನನ್ ಮುಲ್ಲಾ (ಪಶ್ಚಿಮ ಬಂಗಾಳ) (3) ಸಾರಂಗ್‌ಧರ್ ಪಾಸ್ವಾನ್(ಬಿಹಾರ) ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಯಾಗಿದ್ದು ಜನರಲ್ ಕೌನ್ಸಿಲಿಗೆ ನಿತ್ಯಾನಂದಸ್ವಾಮಿ ಅವರಲ್ಲದೆ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರ ಹೊಸ್ಕೇರಾ ಮತ್ತು ಉಪಾಧ್ಯಕ್ಷರಾದ ಪುಟ್ಟಮಾದು (ಮಂಡ್ಯ) ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ವರದಿ: **ಎನ್.ಎಸ್.**


★



ಇರೋ 3 ಎಕರೆ ಜಮೀನಲ್ಲಿ ತರಕಾರಿಗಳು, ಗುಲಾಬಿ, ರುದ್ರಾಕ್ಷಿ ಹೂ ಬೆಳೆದು ವರ್ಷಕ್ಕೆ ಲಕ್ಷಾಂತರ ಸಂಪಾದನೆ ಮಾಡಿಕೊಂಡು ನೆಮ್ಮದಿ ಯಾಗಿದ್ದೇವೆ. ಬೇರೇನು ಗೊತ್ತಿಲ್ಲದ ನಾವು ಹೋಗೋ ದೆಲ್ಲಿ ಮಾಡೋದೇನು?

ಹೆಚ್.ಎಂ.ಕುಮಾರ ಹಿಂಡಗಿನಾಳ ರೈತರು,

★



ಕೃಷಿ ಪಾಠಶಾಲೆಯಲ್ಲಿ ತರಬೇತಿ ಪಡೆದು ಕೃಷಿಯೊಂದಿಗೆ ಆಧುನಿಕವಾಗಿ ಕುರಿ, ಹಸು ಸಾಕಿ ಹಾಲು, ಕುರಿ ಮಾರಾಟದಿಂದ ಚನ್ನಾಗಿ ಬದುಕು ಸಾಗಿಸುತ್ತಿದ್ದೇವೆ. ಬದುಕು ಹಾಳು ಮಾಡೊ ಎಸ್‌ಇಝಡ್ ನಮಗೆ ಬೇಡವೇ ಬೇಡ

ವಿಜಯಕುಮಾರ ರೈತರು, ನೆಲವಾಗಿಲು,

★

ಕೃಷಿ ಬಿಟ್ಟು ನಮಗೇನು ತಿಳಿಯದು. ಸರ್ಕಾರವಾಗಲಿ, ಉದ್ಯಮಿಗಳಾಗಲಿ, ನಮ್ಮ ಜಮೀನು ಕಿತ್ತುಕೊಳ್ಳೋದು ಬೇಡ ಕಿತ್ತುಕೊಳ್ಳೋಕೆ ಅವರ್‍ಯಾರೂ ಪಿತ್ರಾರ್ಜಿತ ಆಸ್ತಿ, ಜಮೀನು ನಮ್ಮ ಮಕ್ಕಳಿಗೂ ಬೇಕು.

ಕೇಶವ, ಶ್ರೀನಿವಾಸ,
ಕೃಷ್ಣಪ್ಪ.ಹೆಚ್.ಎಂ,
ಕೆಂಚೇಗೌಡ.ಹೆಚ್.ಎಸ್.

★

ರೈತರು ಹಿಂಡಗನಾಳ, ನಂದಗುಡಿ (ಹೋ) ರೇಷ್ಮೆಕೃಷಿ ಮತ್ತು ರೇಷ್ಮೆ ಗೂಡುನಿಂದ ಎಳೆ ತೆಗೆವ ಉಪಕಸಬಿನಿಂದ ಸಾವಿರಾರು ಜನರ ಬದುಕು ಹಸನವಾಗಿಸುವ ಈ ಭೂಮಿಯೇ ಎಸ್.ಇ.ಝಡ್. ಯಾಕೆ, ಜನರನ್ನು ಸಾಯಿಸೋಕಾ?

ಸೈಯದ್ ಖಲೀಲ್
ರೇಷ್ಮೆಗೂಡಿನಿಂದ ಎಳೆ ತೆಗೆವವರು,
ಹಿಂಡಿಗನಾಳ

ಸಂದರ್ಶನ :
ಹನುಮಂತ ರಾವ್ ಹವಾಲ್ದಾರ್

ಜಗದಗಲ

ಶರತ್‌ಚಂದ್ರ

ಪ್ಯಾಲೆಸ್ಟೈನ್: ಫತಾ ಮತ್ತು ಹಮಾಸ್ ನಡುವೆ ಅಂತರ್ಯುದ್ಧ

ಪ್ಯಾಲೇಸ್ಟೈನ್‌ನ ಚರಿತ್ರೆಯಲ್ಲಿ ಇನ್ನೊಂದು ದುರಂತಮಯ ಅಧ್ಯಾಯ ಆರಂಭವಾಗಿದೆ. ಅಮೆರಿಕಾ-ಇಸ್ರೇಲಿ ಕೂಟ ಎಷ್ಟು ಪ್ರಯತ್ನ ಮಾಡಿದರೂ ತಾಯ್ನಾಡಿಗೆ ಹೋರಾಡುತ್ತಿದ್ದ ಪ್ಯಾಲೇಸ್ಟೈನ್ ಜನತೆಯ ಐಕ್ಯತೆ ಮುರಿಯಲು ಈ ವರೆಗೆ ಸಾಧ್ಯವಾಗಿರಲಿಲ್ಲ. ಫತಾ (ಯಾಸೆರ್ ಅರಾಫತ್ ಸ್ಥಾಪಿಸಿದ್ದ ಪ್ಯಾಲೇಸ್ಟೈನ್ ವಿಮೋಚನಾ ಹೋರಾಟದ ಅತಿ ದೊಡ್ಡ ಮತ್ತು ಮೊದಲ ಗುಂಪು) ಮತ್ತು ಹಮಾಸ್ (ಮುಸ್ಲಿಂ ಮೂಲಭೂತವಾದಿ ಗುಂಪು) ನಡುವೆ ಈಗ ಪ್ಯಾಲೇಸ್ಟೈನ್ ನಲ್ಲಿ ನಡೆಯುತ್ತಿರುವ ಅಂತರ್ಯುದ್ಧದಲ್ಲಿ ಪ್ಯಾಲೇಸ್ಟೈನ್ ಜನತೆಯ ಐಕ್ಯತೆ ಬಲಿಯಾಗಿದೆ. ಕಳೆದ ಹಲವು ದಿನಗಳಿಂದ ನಡೆಯುತ್ತಿರುವ ಈ ಅಂತರ್ಯುದ್ಧದಲ್ಲಿ ತೀವ್ರ ಸಾವು ನೋವುಗಳಾಗಿವೆ. ಸಂಘರ್ಷದ ಕೊನೆಯಲ್ಲಿ ಹಮಾಸ್ ಗಾಜಾ ಪಟ್ಟಿಯಲ್ಲಿ ನಿಯಂತ್ರಣ ಸಾಧಿಸಿದರೆ, ಪಶ್ಚಿಮ ದಂಡೆಯಲ್ಲಿ ಫತಾ ತನ್ನ ಅಧಿಪತ್ಯ ಮುಂದುವರೆಸಿದೆ. ಪ್ಯಾಲೇಸ್ಟೈನ್ ಜನ-ಪೂರ್ಣ ಸ್ವಾತಂತ್ರ್ಯಕ್ಕೆ ಅಡೆತಡೆ ಒಡ್ಡುತ್ತಿರುವ ಅಮೆರಿಕ-ಇಸ್ರೇಲಿ ಸರಕಾರಗಳ ವಿರುದ್ಧ ಹೋರಾಡುವ ಬದಲು ದಾಯಾದಿ ಕಲಹದಲ್ಲಿ ತೊಡಗುವ ಸ್ಥಿತಿ ಯಾಕೆ ಬಂತು ? ಪ್ಯಾಲೇಸ್ಟೈನ್ ಪಾರ್ಲಿಮೆಂಟು ಚುನಾವಣೆಗಳಲ್ಲಿ ಮೂಲಭೂತವಾದಿ ಗುಂಪು ಹಮಾಸ್ ಬಹುಮತ ಪಡೆದ ನಂತರವೂ, ಹಮಾಸ್-ಫತಾ ಸಂಯುಕ್ತ ರಾಷ್ಟ್ರೀಯ ಸರಕಾರ ನಡೆಸುತ್ತಿತ್ತು. ಅದು ಕುಸಿದು ಬಿದ್ದು, ಈಗಿನ ಪರಿಸ್ಥಿತಿ ಬಂದದ್ದು ಹೇಗೆ ?

ಪ್ಯಾಲೇಸ್ಟೈನ್ ಜನತೆ ಕಳೆದ ಚುನಾವಣೆಯಲ್ಲಿ ನೀಡಿದ ಸಾರ್ವಭೌಮ ತೀರ್ಪಿಗೆ ಮನ್ನಣೆ ನೀಡದೆ, ಅದನ್ನು ತಿರುಚಲು ಪ್ರಯತ್ನಿಸಿದ ಅಮೆರಿಕ-ಯುರೋಪಿಯನ್ ಒಕ್ಕೂಟ-ಇಸ್ರೇಲ್ ಗಳು ಇದಕ್ಕೆ ಮುಖ್ಯ ಕಾರಣರು. ಪ್ಯಾಲೇಸ್ಟೈನ್ ಜನತೆ ಅರಾಫತ್ ನಿಧನದ ನಂತರ ಆತನ ಉತ್ತರಾಧಿಕಾರಿ ಫತಾ ನಾಯಕ ಮೆಹಮ್ಮೂದ್ ಅಬ್ಬಾಸ್ ರನ್ನು ಅಧ್ಯಕ್ಷರಾಗಿ ಆರಿಸಿದರು. ಅಬ್ಬಾಸ್ ಅಮೆರಿಕನ್-ಇಸ್ರೇಲಿಗಳಿಗೆ ಸ್ವೀಕಾರಾರ್ಹನಾಗಿದ್ದ. ಅರಾಫತ್ ಬದಲಿಗೆ ಯಾವುದೇ ಬೇರೆ ನಾಯಕರು ಬಂದರೆ ಪ್ಯಾಲೇಸ್ಟೈನ್ ಸ್ವಾಯತ್ತತೆಯ ಸಮಸ್ಯೆ ಬಗೆಹರಿಯುತ್ತದೆ ಎಂಬ ಅಮೆರಿಕನ್ -ಇಸ್ರೇಲಿ ಹೇಳಿಕೆ ನಿಜವಾಗಬಹುದೇನೋ ಎಂದು ಕಾದರು. 1993ರ ಒಸ್ಲೋ ಶಾಂತಿ ಒಪ್ಪಂದದ ಪ್ರಕಾರ ಪ್ಯಾಲೆಸ್ಟೈನ್‌ಗೆ ಸ್ವಾಯತ್ತತೆ ಸಿಗಬಹುದು, ಪ್ಯಾಲೆಸ್ಟೈನ್ ಸರಕಾರದ ಅಧಿಕಾರ ಮುನಿಸಿಪಾಲಿಟಿಗಿಂತಲೂ ಕನಿಷ್ಠ ಸಂಪನ್ಮೂಲ ಮತ್ತು ಅಧಿಕಾರ ಇರುವ ದುಸ್ಥಿತಿ ತಪ್ಪಬಹುದು, ಪ್ಯಾಲೆಸ್ಟೈನ್ ಜನತೆಗೆ ಜೀವನೋಪಾಯಕ್ಕೆ ಯಾವುದೇ ನಿರ್ಬಂಧವಿಲ್ಲದೆ ಓಡಾಡುವ ಹಕ್ಕು ಸಿಗಬಹುದು ಮತ್ತು ಪ್ಯಾಲೆಸ್ಟೈನ್ ನೆಲದಲ್ಲಿ ಇಸ್ರೇಲಿಗಳು ನೆಲೆಸಿ ಇನ್ನಷ್ಟು ಹೆಚ್ಚು ಜಾಗ ಆಕ್ರಮಿಸಿಕೊಳ್ಳುವುದು ನಿಲ್ಲಬಹುದು ಎಂಬ ಪ್ಯಾಲೆಸ್ಟೈನ್ ಜನತೆಯ ನಿರೀಕ್ಷೆ ಹುಸಿಯಾಯಿತು.

ಅಬ್ಬಾಸ್ ನಾಯಕತ್ವದಲ್ಲಿ ಪ್ಯಾಲೆಸ್ಟೈನ್ ಸರಕಾರ ಮತ್ತು ಫತಾ, ಅಮೆರಿಕಾ- ಇಸ್ರೇಲಿಗಳ ವಿರುದ್ಧ ಪ್ರತಿರೋಧ ಒಡ್ಡುವ, ಪ್ಯಾಲೆಸ್ಟೈನ್ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುವ ಧೈರ್ಯ ಮತ್ತು ಇಚ್ಛಾಶಕ್ತಿ ಕಳೆದುಕೊಂಡಿದೆ ಎಂದು ಜನತೆಗೆ ಅನ್ನಿಸಿತ್ತು. ಆದ್ದರಿಂದ ಪಾರ್ಲಿಮೆಂಟು ಚುನಾವಣೆಯಲ್ಲಿ ಮೂಲಭೂತವಾದಿ ಗುಂಪು ಹಮಾಸ್ ಫತಾಕ್ಕಿಂತ ಹೆಚ್ಚು ಮತಗಳಿಸಿ ಬಹುಮತ ಪಡೆಯಿತು. ಹಮಾಸ್ ಫತಾಕ್ಕಿಂತ ಹೆಚ್ಚು ಧೈರ್ಯ ಮತ್ತು ಇಚ್ಛಾಶಕ್ತಿ ತೋರಿತ್ತು ಎಂಬುದು ಇದಕ್ಕೆ ಮುಖ್ಯ ಕಾರಣವಾಗಿತ್ತು. ಜನತೆ ಅವರ ಮೂಲಭೂತವಾದಕ್ಕೆ ಬೆಂಬಲ ತೋರಿದ್ದಲ್ಲ. ಬದಲಾಗಿ ಸಮಸ್ಯೆ ಪರಿಹಾರದತ್ತ ಯಾವುದೇ ನಿರ್ದಿಷ್ಟ ಪ್ರಗತಿ ತೋರದೆ (ಒಸ್ಲೋ ಒಪ್ಪಂದವನ್ನು ಪ್ರಾಮಾಣಿಕವಾಗಿ ಜಾರಿ ಮಾಡದೆ, ಯಾವುದೇ 'ಜಯ' 'ಸಾಧನೆ' ಕೊಡದೆ), ಅರಾಫತ್ ಇದ್ದಾಗಲೂ ಆ ಮೇಲೂ ಫತಾ ಮತ್ತು ಪಿ.ಎಲ್.ಒ ಅವನ್ನು ಇನ್ನಷ್ಟು ಮಣಿಸುತ್ತಾ, ಹಮಾಸ್ ನಂತಹ ಮೂಲಭೂತವಾದಿ ಶಕ್ತಿಯ ಬೆಳವಣಿಗೆಗೆ ಹಾದಿ ಮಾಡಿಕೊಟ್ಟಿತ್ತು. ಜ… ಬದಲಾವಣೆಗೆ ಮತ ನೀಡಿದ್ದರು.

ಆದರೆ ಪ್ರಜಾಪ್ರಭುತ್ವದ ಮಂತ್ರವನ್ನು ದಿನ… ಜಪಿಸುವ ಅಮೆರಿಕ ಮತ್ತು ಯುರೋಪಿಯನ್… ಸರಕಾರಗಳಿಗೆ ಪ್ಯಾಲೆಸ್ಟೈನ್ ಜನತೆಯ ಈ ತೀರ್ಪು… ಪಥ್ಯವಾಗಲಿಲ್ಲ. ಹಮಾಸ್ ಇರುವ ಸರಕಾರವನ್ನು… ನಾವು ಮಾನ್ಯ ಮಾಡುವುದಿಲ್ಲ, ಹಮಾಸ್… ಭಯೋತ್ಪಾದಕ ಸಂಘಟನೆ, ಹಮಾಸ್ ಇಸ್ರೇಲನ್ನು… ಮಾನ್ಯ ಮಾಡುವುದಿಲ್ಲ ಎನ್ನುವ ಕಾರಣ ಕೊಟ್ಟು… ಎಲ್ಲಾ ಮಾತುಕತೆ ನಿಲ್ಲಿಸಲಾಯಿತು. ಅಮೆರಿಕ… ಯುರೋಪ್‌ಗಳ ಎಲ್ಲ ಆರ್ಥಿಕ ನೆರವನ್ನು… ನಿಲ್ಲಿಸಲಾಯಿತು. ಇಸ್ರೇಲ್ ನಿಯಂತ್ರಿ… ಪ್ರದೇಶಗಳಲ್ಲಿ ಪ್ಯಾಲೆಸ್ಟೈನ್ ಸರಕಾರದ ಪರವಾ… ಸಂಗ್ರಹಿಸಿದ ತೆರಿಗೆಯನ್ನು ಕೊಡಲು ನಿರಾಕರಿಸಿತು… ಫತಾ ಮತ್ತು ಸರಕಾರದ ಕೆಲವು (ಮುಖ್ಯವಾ… ದಹಲನ್ ಎಂಬ ಮಂತ್ರಿಯನ್ನು) ಪ್ರಮುಖರನ್ನು… ಬಳಸಿ ಹಮಾಸ್ ಮೇಲೆ ದಾಳಿ ಮತ್ತು ಮಿಲಿಟ… ಕ್ರಮಗಳಿಂದ, ಎರಡು ಸಂಘಟನೆಗಳ ನಡುವೆ ಸ್ಪ… ಘರ್ಷಣೆ ಆಗುವಂತೆ ಮಾಡಲಾಯಿತು. ಈ… ಕ್ರಮಗಳಿಂದ ಹಮಾಸ್ ಜನಬೆಂಬಲ ಕಳೆದುಕೊಂಡು… ಶರಣಾಗಬಹುದು ಎಂಬ ಲೆಕ್ಕಾಚಾರ… ತಲೆಕೆಳಗಾಯಿತು. ಬದಲಾಗಿ ಫತಾದ ಜನಬೆಂಬಲ… ಕುಸಿಯಿತು. ಫತಾ ಅಮೆರಿಕ- ಇಸ್ರೇಲ್ ಶಸ್ತ್ರಾಸ್ತ್ರಗ… ಮೇಲೆ ಅವಲಂಬಿಸಿ ಹಮಾಸ್ ಜ… ಅಂತರ್ಯುದ್ಧಕ್ಕೆ ಇಳಿಯಿತು. ಈ ಬೆಳವಣಿಗೆಯ… ಇಂದಿನ ಸ್ಥಿತಿಗೆ ಕಾರಣ. ಈಗ ಅಮೆರಿಕಾದ ಅರಬ… ಬಾಲಬಡುಕ ಈಜಿಪ್ಟ್ ಮತ್ತು ಜೋರ್ಡಾನ್… ಶಾಂತಿ ಮಾತುಕತೆಗೆ ಪ್ರಯತ್ನಿಸುತ್ತಿವೆ. ಹಮಾಸ್… ನೇರ ಮಾತುಕತೆಗೆ ಕರೆ ನೀಡಿದ್ದರೂ ಫತಾ ಅದ… ಒಪ್ಪಿಲ್ಲ. ಅಮೆರಿಕಾದ ಬೆಂಬಲದಿಂದ… ಅಂತರ್ಯುದ್ಧದಲ್ಲಿ ತನಗೇ ಜಯ ಎಂದು ಅದ… ಭ್ರಮೆ. ಪ್ಯಾಲೇಸ್ಟೈನ್ ಜನರ ಬದುಕ್ಕಿಗೆ… ಇದೊಂದು ಕರಾಳ ಅವಧಿ.



ಅಮೆರಿಕದ ಜತೆ ಮುಕ್ತ ಮಾರುಕಟ್ಟೆಗೆ ದ.ಕೊರಿಯಾ ರೈತರ ಪ್ರತಿಭಟನೆ


ಅಮೆರಿಕ ಮತ್ತು ದ.ಕೊರಿಯಾ ನಡುವೆ ಮುಕ್ತ ಮಾರುಕಟ್ಟೆಯ… ಒಪ್ಪಂದಕ್ಕೆ ಅಲ್ಲಿನ 1.2 ಲಕ್ಷ ರೈತರನ್ನು ಪ್ರತಿನಿಧಿಸುವ ಫೆಡರೇಶನ್ ಜೂನ್ 20 ರಂದು ಭಾರೀ ಪ್ರತಿಭಟನೆ ಹಮ್ಮಿಕೊಂಡಿತ್ತು. ಅಮೆರಿಕ… ಖಂಡದ ಇಂತಹುದೇ ಮುಕ್ತ ವ್ಯಾಪಾರ (ನಾಫ್ತಾ) ಒಪ್ಪಂದ ಮೆಕ್ಸಿಕೊ… ಮುಂತಾದ ರೈತರಿಗೆ ಮಾರಕವಾಗಿದೆ ಎಂದು ಫೆಡರೇಶನ್ ಎಚ್ಚರಿಸಿದೆ. ನಾಫ್ತಾದ ನಂತರ ಅಮೆರಿಕದ ಜತೆ ಅತೀ ದೊಡ್ಡ… ಮುಕ್ತ ವ್ಯಾಪಾರ ಒಪ್ಪಂದ ಎನ್ನಲಾಗಿದೆ. ರಾಜಧಾನಿ ಸಿಯೋಲ್‌ನ… ಪುರಭವನದ ಮುಂದೆ ಸಾವಿರಾರು ರೈತರು ಪ್ರತಿಭಟನಾ ಪ್ರದರ್ಶನ… ನಡೆಸಿದರು. ಹ್ಯುಂಡಯ್ ಕಂಪನಿಯ 40 ಸಾವಿರಕ್ಕೂ ಹೆಚ್ಚು… ಕಾರ್ಮಿಕರು ಸಹ ಈ ಒಪ್ಪಂದ ವಿರೋಧಿಸಿ 5-ದಿನಗಳ ಮುಷ್ಕರಕ್ಕೆ… ಕರೆ ಕೊಟ್ಟಿದ್ದಾರೆ.

ಚೀನಾದೊಳಗೊಂದು ಇಣುಕು


2008 ರ ಒಲಂಪಿಕ್ಸ್‌ಗೆ ಈಗಲೇ ಸಂಭ್ರಮದ ತಯಾರಿ

ಚೀನಾದಲ್ಲಿ ಎಲ್ಲಿ ಹೋದರೂ ಮುಂದಿನ ವರ್ಷದ ಒಲಿಂಪಿಕ್ಸ್ ಬಗ್ಗೆ ಈಗಲೇ ಭಾರೀ ಸಂಭ್ರಮ. ಬೀಜಿಂಗ್‌ನಲ್ಲಂತೂ ಇಡೀ ಜಗತ್ತನ್ನೇ ಬರಮಾಡಿಕೊಳ್ಳಲು ಸಂಭ್ರಮದ ತಯಾರಿ. ಎಲ್ಲಾ ಕಡೆ ಒಲಿಂಪಿಕ್ಸ್ ಹೇಗಿರಬಹುದು? ಹೇಗಿರಬೇಕು? ಎಂಬ ಬಗ್ಗೆ ಚರ್ಚೆ. ಒಲಿಂಪಿಕ್ಸ್ ಕ್ರೀಡೆ ನಡೆಯುವ 30ಕ್ಕೂ ಹೆಚ್ಚು ಸ್ಟೇಡಿಯಂಗಳು ಆಗಲೇ ಹೆಚ್ಚು ಕಡಿಮೆ ತಯಾರು. ಎಲ್ಲೆಡೆ 'ಒಂದೇ ಜಗ ಒಂದೇ ಕನಸು' ಎಂಬ ಬೆಜಿಂಗ್ ಒಲಿಂಪಿಕ್ಸ್ ಧ್ಯೇಯ ವಾಕ್ಯದ ಬಣ್ಣ ಬಣ್ಣದ ಬ್ಯಾನರುಗಳು. ಒಲಿಂಪಿಕ್ಸ್ ಗೆ ತಯಾರಿ ನಡೆಸಲು ಈ ವರ್ಷವೇ 26 ಕ್ರೀಡಾ ಸ್ಪರ್ಧೆಗಳನ್ನು ನಡೆಸಲು ತಯಾರಿ. ಮುಂದಿನ ವರ್ಷ ಒಲಿಂಪಿಕ್ಸ್ ನಡೆಯುವ ಮೊದಲು ಇನ್ನೊಂದು 16 ಕ್ರೀಡಾ ಸ್ಪರ್ಧೆಗಳು. ಒಲಿಂಪಿಕ್ಸ್ ಮೊದಲು ಹಬ್ಬದ ವಾತಾವರಣ ನಿರ್ಮಾಣಕ್ಕೆ ಈ ತಿಂಗಳು ಹಲವು ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಇರುವ ಸಾಂಸ್ಕೃತಿಕ ಉತ್ಸವ. ಬೀಜಿಂಗ್ ಒಲಿಂಪಿಕ್ಸ್ ತಯಾರಿ ಹಾದಿಯಲ್ಲಿ ಇದು 5ನೇ ಸಾಂಸ್ಕೃತಿಕ ಉತ್ಸವ. ಬೀಜಿಂಗ್ ನ ಪ್ರತಿಯೊಂದು ಪ್ರದೇಶದಲ್ಲಿ ಒಂದರಂತೆ ಒಟ್ಟು 19 ಉತ್ಸವಗಳನ್ನು ನಡೆಸಲಾಯಿತು. ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳನ್ನು ಬೆಸೆಯುವ ಈ ಉತ್ಸವ 'ಒಂದೇ ಜಗ ಒಂದೇ ಕನಸು' ..ನಾನು ಭಾಗವಹಿಸುತ್ತೇನೆ, ನನ್ನ ಪಾತ್ರ ವಹಿಸುತ್ತೇನೆ, ಖುಶಿ ಪಡುತ್ತೇನೆ' ಎಂಬ ಬೀಜಿಂಗ್ ಒಲಿಂಪಿಕ್ಸ್ ಧ್ಯೇಯವನ್ನು ನನಸುಗೊಳಿಸುವ ಪ್ರಯತ್ನ. ಬೀಜಿಂಗ್ ಒಲಿಂಪಿಕ್ಸ್ ಕ್ರೀಡೆಗಳು ಮತ್ತು ನಗರದ ಜೀವನ ಆ ಅವಧಿಯಲ್ಲಿ ಏರುಪೇರಿಲ್ಲದೆ ನಡೆಯುವಂತೆ ನೋಡಿ ಕೊಳ್ಳಲು ವಿಶೇಷ ತರಬೇತಿ ಪಡೆದ ಸ್ವಯಂಸೇವಕರ ದೊಡ್ಡ ಪಡೆಯೇ ಬೇಕಾಗುತ್ತದೆ. ಇದನ್ನು ಮನಗಂಡ ಒಲಿಂಪಿಕ್ಸ್ ಸಮಿತಿ ಸ್ವಯಂಸೇವಕರ ಆಯ್ಕೆ ಆರಂಭಿಸಿದೆ. ನಾಲ್ಕು ಲಕ್ಷ ಸ್ವಯಂಸೇವಕರನ್ನು ಆಯ್ಕೆ ಮಾಡಿ ತರಬೇತಿ ಕೊಡುವ ಪ್ರಕ್ರಿಯೆ ಆರಂಭವಾಗಿದೆ. ಈ ಸ್ವಯಂಸೇವಕರು ಒಲಿಂಪಿಕ್ಸ್ ಕ್ರೀಡಾ ಕುಟುಂಬ, ಪ್ರೇಕ್ಷಕರು, ಪ್ರವಾಸಿಗಳು, ನಗರದ ಜನತೆಗೆ - ಮಾಹಿತಿ, ನೆರವು, ತುರ್ತು ಸ್ಥಿತಿಗೆ ಸ್ಪಂದನ, ಭಾಷಾಂತರ - ಮುಂತಾದ ಸೇವೆ ಒದಗಿಸುತ್ತಾರೆ.

ಬೀಜಿಂಗ್ ಒಲಿಂಪಿಕ್ಸ್ ಬೆಳಗಿಸುವ ಜ್ಯೋತಿಯ ಪಯಣ ಸಹ ಹಲವು ವಿಕ್ರಮಗಳನ್ನು ಸಾಧಿಸಲಿದೆ. ಈ ವರೆಗಿನ ಒಲಿಂಪಿಕ್ಸ್ ಜ್ಯೋತಿಗಳಲ್ಲೇ ಅತ್ಯಂತ ಹೆಚ್ಚಿನ ದೂರ (137 ಸಾವಿರ ಕಿ.ಮೀ.) ಮತ್ತು ವಿಸ್ತಾರ (ಐದು ಖಂಡಗಳು) ಕ್ರಮಿಸಿ, ಅತಿ ಹೆಚ್ಚು ಜನ ಭಾಗವಹಿಸುವ ರಿಲೇ ದೀರ್ಘ (130 ದಿನ) ಪಯಣ ಮಾಡಲಿದೆ. ಗ್ರೀಸ್‌ನ ಒಲಿಂಪಿಯಾ ದಿಂದ ಆರಂಭಿಸಿ ಚೀನಾಕ್ಕೆ ಪ್ರಾಚೀನ 'ರೇಷ್ಮೆ ಹಾದಿ' ಕ್ರಮಿಸಿ ಬೀಜಿಂಗ್ ತಲುಪಲಿದೆ. ಬೀಜಿಂಗ್ ಒಲಿಂಪಿಕ್ಸ್ 'ಹಸಿರು ಒಲಿಂಪಿಕ್ಸ್, ಹೈ-ಟೆಕ್ ಒಲಿಂಪಿಕ್ಸ್, ಜನತಾ ಒಲಿಂಪಿಕ್ಸ್' ಅನ್ನಾಗಿಸಿ ಇಡೀ ವಿಶ್ವದ ಜನತೆ ನೆನಪಿಸುವ ಅಪ್ರತಿಮ ಒಲಿಂಪಿಕ್ಸ್ ಆಗಿಸಲು ಇಡೀ ಚೀನಾವೇ ಸಿದ್ಧವಾಗಿ ನಿಂತಂತೆ ಇದೆ.



ಸಾರ್ವಜನಿಕ ಭೂಮಿ :
'ಶ್ರೀಮಂತರ ಬಾಯಿಗೆ ಹಾಕಬೇಡಿ - ಬಡವರಿಗೆ ಹಂಚಿ'


ಬೃಹತ್ ಮೆರವಣಿಗೆಯ ಒಂದು ವಿಭಾಗ

ಕ್ರಿಮಿ, ಕೀಟಗಳು, ಪಶು, ಪ್ರಾಣಿಗಳು ಸಹ ತಮ್ಮ ವಾಸಕ್ಕೆ ತಮ್ಮದೇ ಆದ ರೀತಿಯ ಗೂಡೊಂದನ್ನು ಕಟ್ಟಿಕೊಳ್ಳುತ್ತವೆ. ಪಕ್ಷಿಗಳಾದರೋ ಮೊಟ್ಟೆ ಇಟ್ಟು ಮರಿಮಾಡುವ ಸಲುವಾಗಿ ಗೂಡೊಂದನ್ನು ನಿರ್ಮಿಸಿಕೊಳ್ಳುತ್ತವೆ. ಜೀವ ಸಂಕುಲದಲ್ಲೇ ಅತ್ಯಂತ ಮುಂದುವರಿದ, ಬೆಳವಣಿಗೆ ಹೊಂದಿದ ಮನುಷ್ಯನಲ್ಲಿ ಸ್ವಂತದೊಂದು ಗೂಡು ಕಟ್ಟಿಕೊಳ್ಳಬೇಕೆಂಬ ಆಸೆ ಈಡೇರುವುದು ಬಹಳ ಕಷ್ಟವಾಗಿದೆ. ಅದರಲ್ಲಿಯೂ ಬಡವರು, ಕೆಳ ಮಧ್ಯಮ ವರ್ಗದ ಜನರು ದುಡಿಯುವ ಜನರಿಗೆ ಸ್ವಂತ ನಿವೇಶನ, ಸ್ವಂತ ಮನೆ ಎಂಬುದೊಂದು ಕನ್ನಡಿಯೊಳಗಿನ ಗಂಟಿನಂತೆ ಆಗಿದೆ. ಪರಿಸ್ಥಿತಿಯ ವ್ಯಂಗ್ಯವೆಂದರೆ ಈ ಬಡವರಲ್ಲಿ ಎಷ್ಟೋ ಜನ ಬೆಂಗಳೂರಿನಲ್ಲಿ ಈಗ ಮೇಲೇಳುತ್ತಿರುವ ಮುಗಿಲ ಚುಂಬಿ ಕಟ್ಟಡಗಳನ್ನು ಎತ್ತಿ ನಿಲ್ಲಿಸುವ ಕಟ್ಟಡ ಕಾರ್ಮಿಕರಾಗಿರುತ್ತಾರೆ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದ ಪಕ್ಕ ನಮ್ಮ ಲಿಕ್ಕರ್ ದೊರೆ ವಿಜಯಮಲ್ಯರ ಮಾಲೀಕತ್ವದ ಯು.ಬಿ.ಸಿಟಿ ಎಂಬುದೊಂದು ತಲೆ ಎತ್ತಿ ನಿಲ್ಲುತ್ತಿದೆ. ಅಲ್ಲಿ ಎದ್ದು ನಿಂತ ಕಟ್ಟಡಗಳ ಚಿತ್ರ ತೋರಿಸಿ ಯಾರಿಗಾದರೂ ಹೊರಗಿನವರಿಗೆ ಇದು ಬೆಂಗಳೂರಿನ ಕಟ್ಟಡ ಎಂದರೆ ನಂಬುವುದೇ ಕಷ್ಟ. ಯಾವುದೇ 'ಮುಂದುವರಿದ' ದೇಶದ ಅಂದರೆ ವಿದೇಶದ ಚಿತ್ರ ಇದು ಎಂದೇ ಜನ ಭಾವಿಸುವಂತಿದೆ. ಹಾಗಿದೆ ಅದರ ತಳುಕು. ಬೆಂಗಳೂರಿನ ಯಾವ ಬಡಾವಣೆ, ಯಾವ ಮುಖ್ಯ ರಸ್ತೆಯನ್ನಾದರೂ ನೋಡಿ, ಅಲ್ಲಿ ಮೇಲೇಳುತ್ತಿರುವೆ ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳು. ಬಡವರು ಒಮ್ಮೆ ಅವನ್ನು ತಲೆ ಎತ್ತ ನೋಡಿದರೂ ಅವರ ತಲೆ ತಿರುಗಬಹುದು. ಇನ್ನು 'ಬಿಗ್ ಬಜಾರ್' ಷಾಪಿಂಗ್ ಮಾಲ್‌ಗಳಿಗೇನೂ ಕೊರತೆಯಿಲ್ಲ.

ಈ ಬಣ್ಣದ ಬೆಂಗಳೂರನ್ನು ಹೀಗೆ ಫಳ ಫಳ, ಥಳ, ಥಳ ಮಾಡಲು ದೊಡ್ಡ ರೀತಿಯ ಶ್ರಮವಹಿಸುವ ಬಡವರು, ಅಸಂಘಟಿತ ಕಾರ್ಮಿಕರು, ಆಟೋ ಚಾಲಕರು, ಮುಂತಾದವರು ತಮ್ಮದೆಂದು ಒಂದು ಸರಿಯಾದ ನೆಲೆ ಇಲ್ಲದೆ ಅತಂತ್ರ ಸ್ಥಿತಿಯಲ್ಲಿ ಬದುಕುದೂಡಬೇಕಾಗಿದೆ.

ಇನ್ನೊಂದೆಡೆ ಶ್ರೀಮಂತರು, ಬಂಡವಾಳಿಗರು, ಭೂಗಳ್ಳರು ಸಹಸ್ರಾರು ಎಕರೆ ಸಾರ್ವಜನಿಕ ಜಮೀನನ್ನು ಕಬಳಿಸಿಕೊಂಡು ಬೇರು ಬಿಟ್ಟುಕೊಂಡು ಕುಳಿತಿದ್ದಾರೆ. ಇದರಲ್ಲಿ ಹಲವನ್ನು ಸರ್ಕಾರ ಮರು ವಶಪಡಿಸಕೊಳಗುತ್ತಿ ರುವುದುದಾರೂ ಮತ್ತೆ ಅದನ್ನು ಆರಕ್ಕೆ ಮೂರರ ಹಾಗೆ ಅದೇ ಶ್ರೀಮಂತರ ಬಾಯಿಗೆ ಹಾಕಲು ಹೊರಟಿದೆ.

ಮುಂದೆ ಸರ್ಕಾರದ್ದು ಒಂದು ಶಾಲೆಯೇ ಕಾಲೇಜೋ, ಆಸ್ಪತ್ರೆಯನ್ನೋ, ಸಾರ್ವಜನಿಕ ಪಾರ್ಕನ್ನೋ ಮಾಡಬೇಕೆಂದರೆ ಆಗೇನು ಮಾಡುವುದು? ಮತ್ತೆ ಈ ಭೂಮಿ ಇರುವ ಶ್ರೀಮಂತರ ಮುಂದೆ ಕೈ ಚಾಚಬೇಕೇ?

ಮತ್ತೆ ಜನ ರುಚಿರುಚಿಯಾಗಿ ಅಡುಗೆ ಮಾಡಿ ಉಂಡು ಆರೋಗ್ಯವಾಗಿರಲು ತರಕಾರಿ ತಂದು ಮಾರುವ ಸಣ್ಣ ವ್ಯಾಪಾರಸ್ಥರು, ಐ.ಟಿ.ಬಿ.ಟಿ ಸರ್ಕಾರಿ, ಖಾಸಗಿ ಕಛೇರಿಗಳ ನೌಕರರು, ಮುಂತಾದವರಿಗೆ ಬಟ್ಟೆಗಳನ್ನು ಒಗೆದು ಮಡಿ ಮಾಡಿ ಗರಿ ಗರಿ ಮಾಡಿಕೊಡುವವರು, ಇದ್ದುಳ್ಳ ಜನರ ಮನೆಯಲ್ಲಿ ಕಸ ಮುಸುರೆ ಬಳಿಯುವವರು, ಬೆಂಗಳೂರಿನ ಸಂಚಾರದ ನರನಾಡಿಯೇ ಆಗಿ ದುಡಿಯುತ್ತಿರುವ ಆಟೋ ಚಾಲಕರು, ಬೀಡಿ ಕಟ್ಟುವವರು, ಮನೆ, ದೇವರ ಮನೆಗಳಲ್ಲಿ ಸುಗಂಧ ಹರಡಲು ಬತ್ತಿ ಹೊಸೆಯುವವರು ಎಲ್ಲ ಎಲ್ಲಿಗೆ ಹೋಗಬೇಕು.

ಡಾಲರ್ಸ್ ಕಾಲೋನಿ, ಸದಾಶಿವನಗರ, ಜಯನಗರ, ಕೋರಮಂಗಲಗಳಿದ್ದಂತೆ, ಬೀಡಿ ಕಾರ್ಮಿಕರ ಕಾಲೋನಿ, ಆಟೋ ಚಾಲಕರ ನಗರ ಹಣ್ಣು ತರಕಾರಿ ವ್ಯಾಪಾರಿಗಳ ಬಡಾವಣೆ, ಕಟ್ಟಡ ಕಾರ್ಮಿಕರ ನಗರಗಳು ಇರುವುದು ಬೇಡವೇ?

ಬೇಕು ಇಂಥದೊಂದು ಏನಾದರೂ ಆಗುವುದಿದ್ದಾರೆ ಈಗಲೇ ಆಗಬೇಕು. ಈಗಿಲ್ಲದಿದ್ದರೆ ಇನ್ನೆಂದಿಗೂ ಇದು ಆಗುವುದು ಕಷ್ಟ. ಇದು ಆಗಬೇಕೆಂದು ಈಗ ಎತ್ತಿದೆ ಕೂಗು. ಬಲು ದೊಡ್ಡ ಕೂಗು. ಬೆಂಗಳೂರಿನ ಅಸಂಘಟಿತ ದುಡಿಯುವ ಜನರ ಈ ಅಂತರಾಳದ ಕೂಗಿಗೆ ದನಿ ಕೊಟ್ಟಿದೆ ಸಿಪಿಐ(ಎಂ) ಪಕ್ಷ.

ಮೊನ್ನೆ ಜೂನ್ 18 ರಂದು ಈ ಬೇಡಿಕೆಯನ್ನು ಒತ್ತಾಯಿಸಿ, ಬೃಹತ್ ಧರಣಿಗೆ ಕರೆ ನೀಡಿತ್ತು. ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ. 'ಎಲ್ಲಿದ್ದರೋ ಅವರು...' ಎನ್ನುವಂತೆ ಜನ ಬಂದೇ ಬಂದರು.

ಚಿಕ್ಕಲಾಲ್‌ಬಾಗ್‌ನಿಂದ ಹೊರಟ ಮೆರವಣಿಗೆಯಲ್ಲಿ ಏನು ಜನ. ಬೂರ್ಕಾ ತೊಟ್ಟ ಮಹಿಳೆಯರು, ಕೂಲಿ ಕಾರ್ಮಿಕ ಮಹಿಳೆಯರು, ಮಕ್ಕಳನ್ನು ಹೊತ್ತುಕೊಂಡೇ ಬಂದವರು, ಹಿರಿಯರು, ಕರಿಯರು, ಕೆಂಬಾವುಟವನ್ನು ಹಿಡಿದು ದಂಡು ದಂಡಾಗಿ ಹೆಜ್ಜೆ ಹಾಕಿದರು. ರೈಲ್ವೆ ನಿಲ್ದಾಣದ ಮುಂಭಾಗ, ಶೇಷಾದ್ರಿ ರಸ್ತೆ, ಮೈಸೂರು ರಸ್ತೆಯ ಮಾರ್ಗ ಪಟಪಟನೆ ಹಾರುತ್ತಿದ್ದ ಸಹಸ್ರಾರು ಕೆಂಬಾವುಟಗಳು ಬನಪ್ಪಪಾರ್ಕ್‌ನತ್ತ ಹರಿದು ಬಂದವು. ಅಲ್ಲೊಂದು ವೇದಿಕೆ. ಅಲ್ಲಿ ಭೂ ಕಬಳಿಕೆ ವಿಚಾರವನ್ನು ಮೊದಲು ಎತ್ತಿ ತನಿಖೆಗೆ ಆಗ್ರಹಿಸಿದ ಶಾಸಕ ಕಾಂ: ಜಿ.ವಿ.ಶ್ರೀರಾಂರೆಡ್ಡಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಜಿ.ಎನ್. ನಾಗರಾಜ್ ಸೇರಿದಂತೆ ಹಲವರು ಮಾತನಾಡಿದರು.

ಕೊನೆಯಲ್ಲಿ ಬೆಂಗಳೂರು ನಗರ ವಿಶೇಷ ಜಿಲ್ಲಾಧಿಕಾರಿಗಳಾದ ಶಾಂತಪ್ಪನವರು ಪ್ರತಿಭಟನಾ ಸ್ಥಳಕ್ಕೆ ಬಂದು ಮನವಿ ಪತ್ರ ಸ್ವೀಕರಿಸಿದರು ಮತ್ತು ನಿವೇಶನ ಕೋರಿ ಜನರು ಸಲ್ಲಿಸಿರುವ ಸುಮಾರು 60 ಸಾವಿರ ಅರ್ಜಿಗಳನ್ನು ಸಾಂಕೇತಿಕವಾಗಿ ಜಿಲ್ಲಾಧಿಕಾರಿಗಳು ಸ್ವೀಕರಿಸಿ ಈ ಬಗೆಗೆ ಪರಿಶೀಲಿಸಲು ಕೋರಿ ಸರ್ಕಾರಕ್ಕೆ ಸಲ್ಲಿಸುವುದಾಗಿ ತಿಳಿಸಿದರು.


- ಆರ್.ರಾಮಕೃಷ್ಣ



ಈಗಾಗದಿದ್ದರೆ ಇನ್ನೆಂದೂ ಇಲ್ಲ

ಬೆಂಗಳೂರು ನಗರ ಇದೀಗ ಯಾವ ಪರಿ ಬೆಳೆಯುತ್ತಿದೆಯೆಂದರೆ ಜಗತ್ತಿನಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಬೆಂಗಳೂರು ಸಹ ಒಂದು. ಇಲ್ಲಿನ ಈ ಬಡಾವಣೆ, ಕಾರ್ಖಾನೆ, ಕಛೇರಿ, ಅಪಾರ್ಟ್‌ಮೆಂಟ್‌ಗಳ ನಡುವೆ ಅಷ್ಟಿಷ್ಟು ಅಳಿದುಳಿದ ಸರ್ಕಾರಿ ಭೂಮಿಯೂ ಈಗ ಶ್ರೀಮಂತ ಬಂಡವಾಳಿಗರ ಪಾಲಾಗಿ ಹೋದರೆ, ಬೆಂಗಳೂರಿನ ಭವಿಷ್ಯ ಕತೆ ಏನು? ಬೆಂಗಳೂರಿನ ಬಹುತೇಕ ಭಾರವನ್ನು ಬೆನ್ನ ಮೇಲೆ ಹೊತ್ತಿರುವ ಇಲ್ಲಿನ ಬಡವರು ಅಸಂಘಟಿತ ಕಾರ್ಮಿಕರ ಕತೆ ಏನು?

- ಜಿ.ಸಿ.ಬಯ್ಯಾರೆಡ್ಡಿ



ಸರ್ಕಾರಿ ಅಧಿಕಾರಿಗಳಿಗೇ ಗೊತ್ತಿಲ್ಲ

'ಸರ್ಕಾರಿ ಭೂಮಿ ಎಷ್ಟಿದೆ, ಎಲ್ಲಿದೆ ಎಂಬುದು ಸರ್ಕಾರದ ಅಧಿಕಾರಿಗಳಿಗೆ, ಐಎಎಸ್ ಅಧಿಕಾರಿಗಳಿಗೆ ಗೊತ್ತಿಲ್ಲ. ಜಂಟಿ ಸದನ ಸಮಿತಿಯ ತನಿಖೆಯಿಂದ ಗೊತ್ತಾಗುತ್ತಿದೆ. ಸರ್ಕಾರಿ ಜಮೀನಿನಲ್ಲಿ ಗುಡಿಸಲು ಹಾಕಿರುವ ಬಡವರು, ಉಳುಮೆ ಮಾಡುವ ರೈತರ ಬಗೆಗೆ ಭೂಗಳ್ಳರು, ಶ್ರೀಮಂತರೊಂದಿಗೆ ವರ್ತಿಸಿದಂತೆ ಸರ್ಕಾರ ವರ್ತಿಸಬಾರದು. ಎರಡಕ್ಕೂ ವ್ಯತ್ಯಾಸ ಇದೆ. ಹರಾಜು ನಿಲ್ಲಲೇಬೇಕು. ಬಡವರಿಗೆ ಸಮರ್ಪಕ ರೇಷನ್ ಮತ್ತು ನಿವೇಶನ ಸಿಗಲೇಬೇಕು.'


- ಕೆ.ಪ್ರಕಾಶ್



'ಸರ್ಕಾರ ಬಿಪಿಎಲ್ ಕಾರ್ಡ್, ಎಪಿಎಲ್ ಕಾರ್ಡ್, ಬಣ್ಣ ಬಣ್ಣದ ಕಾರ್ಡ್‌ಗಳನ್ನು ಕೊಡುತ್ತದೆ. ಆದರೆ ರೇಷನ್‌ನನ್ನು ಸರಿಯಾಗಿ ಕೊಡುವುದಿಲ್ಲ. ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಶಾಪಿಂಗ್ ಮಾಲ್‌ಗಳಿವೆ. ಗಂಟೆ ಗಂಟಲೆ ಖರೀದಿ ಮಾಡಬಹುದು ಅಷ್ಟು ದೊಡ್ಡವು ಅವು. ಆದರೆ ಬಡವರ ಬಳಿ ಹಣ ಇಲ್ಲ. ಬೇಡಿಕೆ ಈಡೇರುವವರೆಗೆ ಹೋರಾಡಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 1 ಕೋಟಿ ಸದಸ್ಯರ ಬೆಂಬಲ ಆದಕ್ಕಿದೆ'


ಸುಧಾ, ಅಧ್ಯಕ್ಷರು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ

'ಒಂದು ದಿನವೂ ಮಾತಾಡಲಿಲ್ಲ'



'ಬಾಣಸವಾಡಿಯ 93 ಕೆರೆಯಂಗಳದಲ್ಲಿ 45 ಎಕರೆ ಭೂ ಕಬಳಿಕೆಯಾಗಿದೆ. ಇದರಲ್ಲಿ 'ಭಾಗಮನೆ' ಕುಟುಂಬದವರು 22 ಎಕರೆ ಭೂಮಿ ಕಬಳಿಸಿದ್ದಾರೆ. ಅಲ್ಲೀಗ ಸೀಮನ್ಸ್, ಮೋಟರಾಲದಂತಹ ದೊಡ್ಡ ಕಂಪನಿಗಳು ಕಛೇರಿಗಳು ತಲೆ ಎತ್ತಿವೆ. 'ಭಾಗಮನೆ'ಯವರು ಎಂದರೆ ಬೇರೆ ಯಾರೂ ಅಲ್ಲ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರ ಹೆಂಡತಿಯ ತಂಗಿ ಮನೆಯವರು. ಚಿತ್ರನಟಿ ವೈಜಯಂತಿ ಮಾಲಾ, ಸರ್ಕಾರಿ ಭೂಮಿ ಕಬಳಿಸಿ 12 ಫ್ಲಾಟ್‌ಗಳನ್ನು ಕಟ್ಟಿಸಿದ್ದಾರೆ. ಬೆಂಗಳೂರಿನಲ್ಲಿ ಯಾವುದೇ ಅನುಮತಿ ಪಡೆಯದೇ ಸುಮಾರು 600 ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಲಾಗಿದೆ. ಆದರೆ ಈ ಎಲ್ಲ ಕಟ್ಟಡಗಳಿಗೆ ಸರ್ಕಾರದ ವಿವಿಧ ಇಲಾಖೆಗಳಿಂದ ಮೂಲಭೂತ ಸೌಕರ್ಯ ಸೇವೆಗಳು ದೊರೆಯುತ್ತಿವೆ. ಇದರಲ್ಲಿ ಅಧಿಕಾರಿಗಳು, ರಾಜಕಾರಣಿಗಳು ಎಲ್ಲರೂ ಶಾಮೀಲಾಗಿದ್ದಾರೆ. ಪೋಲೀಸ್ ಇಲಾಖೆ ಉನ್ನತಾಧಿಕಾರಿಯಾದ ಐ.ಜಿ.ಯವರೆ ಒಂದು ಎಕರೆ ಭೂಮಿ ಅಕ್ರಮವಾಗಿ ಕಬ್ಜಾ ಮಾಡಿಕೊಂಡು ತಮ್ಮ ಮನೆ ಪಕ್ಕ 100 X 100 ಅಳತೆಯ ಜಾಗವನ್ನು ತಮ್ಮ ತಂಗಿಗೆ ಕೊಟ್ಟಿದ್ದಾರೆ. ಆದರೆ ಬಡವರು, ಜನ ಸಾಮಾನ್ಯರಿಗೆ ನಿವೇಶನ ನೀಡುವ ಬಗೆಗೆ ಇವರ್‍ಯಾರು ಒಂದು ದಿನವೂ ಮಾತನಾಡಲಿಲ್ಲ'.

- ಜಿ.ವಿ.ಶ್ರೀರಾಮರೆಡ್ಡಿ, ಶಾಸಕರು



ಕಾರ್ಮಿಕರ ಬೆಂಬಲ

'ಮಹಾರಾಷ್ಟ್ರ ಸೊಲ್ಲಾಪುರದಲ್ಲಿ ಸಿಐಟಿಯು ಕಾರ್ಮಿಕ ನಗರವನ್ನೇ ನಿರ್ಮಿಸಿದೆ. ದುಡಿಯುವ ವರ್ಗಕ್ಕೆ ನಿವೇಶನ ಬೇಕು, ಭೂಮಿಗಾಗಿ ಕಾಂ: ಎ.ಕೆ.ಗೋಪಾಲನ್‌ರವರು ನಡೆಸಿದ ಹೋರಾಟ ಬಹಳ ಪ್ರಸಿದ್ಧ, ಕರ್ನಾಟಕದಲ್ಲೂ ಅವರು ಹೋರಾಟ ನಡೆಸಿದ್ದರು. ಸಿಐಟಿಯು ಸಂಘಟನೆ ನಿವೇಶನ ರಹಿತರ ಹೋರಾಟವನ್ನು ಬೆಂಬಲಿಸುತ್ತದೆ'

ವಿ.ಜೆ.ಕೆ.ನಾಯರ್, ಸಿಐಟಿಯು ಪ್ರ.ಕಾರ್ಯದರ್ಶಿ

ಎಷ್ಟು ದೊಡ್ಡದು

'ಈ ಹೋರಾಟ ಇಷ್ಟು ದೊಡ್ಡದಾಗುತ್ತದೆ ಎಂದು ನಾವಂದುಕೊಂಡಿರಲಿಲ್ಲ. ಸಿಪಿಐ(ಎಂ)ಗೆ ಅಭಿನಂದನೆಗಳು, ಸರ್ಕಾರ ಎಷ್ಟು ಹೇಳಿದರೂ ಕೇಳುವುದಿಲ್ಲ. ಭೂಮಿ ವಶಪಡಿಸಿಕೊಳ್ಳುವ ಹೋರಾಟ ಆಗಬೇಕು'

- ಪಟಾಪಟ್ ನಾಗರಾಜ್,
ದಲಿತ ಸಂಘರ್ಷ ಸಮಿತಿ ಮುಖಂಡರು

'ಸರ್ಕಾರಿ ಭೂಮಿ ಎಲ್ಲೆಲ್ಲಿದೆಯೋ ಅಲ್ಲೆಲ್ಲಾ ಬಡವರು ಗುಡಿಸಲು ಹಾಕುವ ಹೋರಾಟ ನಡೆಸಬೇಕು'

ವೆಂಕಟಸ್ವಾಮಿ,
ರಾಜ್ಯ ಅಧ್ಯಕ್ಷರು, ಸಮತಾ ಸೈನಿಕ ದಳ

ಬ್ಯಾಡಾಂತ ದಬ್ಬುತ್ತಿದೆ ಬೆಂಗಳೂರು

'ಬೆಂಗಳೂರು ಅನ್ನುವುದು ಬಡವರಿಗೆ ಸೇರಿದ್ದು, ಬರೀ ಮೈ ತುಂಬಾ ಒಡವೆ ಹೇರಿಕೊಂಡವರಿಗೆ ಸೇರಿದ್ದಲ್ಲ. ಇದು ಬರೀ ಐಟಿ, ಬಿಟಿ ಮಾಲೀಕರದ್ದಲ್ಲ. ಬೆಂಗಳೂರಿನಲ್ಲಿ ತಿಂಗಳಿಗೆ 1500 ಸಾವಿರ, 3 ಸಾವಿರ ಬಾಡಿಗೆ ಕಟ್ಟಿ ಬಡವರು ಏನು ತಿನ್ನಬೇಕು. ಏನು ತೊಡಬೇಕು. ಕುಡಿಯುವ ಜನರು ವಾಸಿಸಲು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಹೋಗಬೇಕಾಗಿದೆ. ಬೆಂಗಳೂರಿಗೆ ಈ ಜನ ಬೇಡವಾ, ಇವರನ್ನು ಬೆಂಗಳೂರು ಬ್ಯಾಡಂತ ದಬ್ಬುತ್ತಿದೆ. ಆಳುವ ಜನರಿಗೆ ಕಾವು ತಾಗುವಂತೆ ಕೆಳಗಿನಿಂದ ಹೋರಾಟದ ಜ್ವಾಲೆ ಏಳಬೇಕು. ಅಂತಹ ಹೋರಾಟ ಆಗಬೇಕು'

ಜಿ.ಎನ್.ನಾಗರಾಜ್,
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

ಪ್ರೇಕ್ಷಕರನ್ನು ಭ್ರಮಾಲೋಕಕ್ಕೆ ಒಯ್ಯುವ 'ಶಿವಾಜಿ'




ಭಾರೀ ಸುದ್ದಿ ಮಾಡಿ ಗದ್ದಲವೆಬ್ಬಿಸಿದ 'ಶಿವಾಜಿ' ಹವಾ ತಣ್ಣಗಾಗುತ್ತಿದೆ. ಭಾರತೀಯ ಚಿತ್ರರಂಗದಲ್ಲೇ ಅತಿಹೆಚ್ಚು ವೆಚ್ಚದಲ್ಲಿ, ಅಂದರೆ ಸುಮಾರು 90 ಕೋಟಿಗೂ ಮೀರಿದ ಬಜೆಟ್ಟಿನ ಚಿತ್ರ ಇದೆಂದು ಸುದ್ದಿಯಾಗಿದೆ. ರಜನಿಕಾಂತ್ ಅವರೇ ಸುಮಾರು 40 ಕೋಟಿ ಸಂಭಾವನೆ ಪಡೆದಿದ್ದಾರಂತೆ! ಏಶ್ಯಾಖಂಡದಲ್ಲೇ ಜಾಕಿಚಾನ್ ನಂತರ ಅತಿ ಹೆಚ್ಚು ಸಂಭಾವನೆ ಪಡೆಯುವ ನಟನೆಂದು ಹೆಸರಾಗಿದ್ದಾರೆ ರಜನಿ. ಭಾರತದ ಪ್ರಾದೇಶಿಕ ಭಾಷೆಯ ನಟನೊಬ್ಬನಿಗೆ ಈ ಪರಿಯ ಬೇಡಿಕೆ ನಿಜಕ್ಕೂ ಆಶ್ಚರ್ಯವೇ!

ಇಷ್ಟು ದೊಡ್ಡ ಬಂಡವಾಳ ಹೂಡಿದ 'ಎವಿಎಂ ಪ್ರೊಡಕ್ಷನ್ಸ್' ಗೆ ಈ ಚಿತ್ರ ಯಶಸ್ಸು ಗಳಿಸಲೇಬೇಕಾಗಿತ್ತು. ಇಲ್ಲವಾದಲ್ಲಿ ಅವರು ಜೀವಮಾನದ ಅತಿನಷ್ಟಕ್ಕೆ ಅಣಿಯಾಗಬೇಕಾಗಿತ್ತು. ಹಾಗಾಗಿಯೇ ಅವರು ಕಾರ್ಯತಂತ್ರ ರೂಪಿಸಿ, ಇನ್ನಿಲ್ಲದಂತಹ ಪ್ರಚಾರ ನೀಡಿ ಜನರನ್ನು ತುದಿಗಾಲ ಮೇಲೆ ನಿಲ್ಲಿಸಿದರು. ಒಂದೇ ವಾರಕ್ಕೆ ಅವರು ಹೂಡಿದ ಬಂಡವಾಳ ವಾಪಸ್ ಪಡೆಯುವ ನಿಟ್ಟಿನಲ್ಲಿ 27 ದೇಶಗಳನ್ನೊಳಗೊಂಡು ಸುಮಾರು 2,900 ಥಿಯೇಟರುಗಳಲ್ಲಿ 'ಶಿವಾಜಿ'ಯನ್ನು ಬಿಡುಗಡೆ ಮಾಡಿದ್ದಾರೆ! ಚಿತ್ರ ಗೆದ್ದರೆ ಬಂಪರ್, ಸೋತರೆ ಅಸಲಿಗೆ ಮೋಸವಿಲ್ಲ, ಇದು ಅವರ ತಂತ್ರ. ಅವರ ಲೆಕ್ಕಾಚಾರ ನಿಜವಾಗಿ, ಒಂದು ವಾರಕ್ಕೇ ಹೂಡಿದ ಬಂಡವಾಳ ವಾಪಸ್ ಬಂದು ಈಗ ಲಾಭ ಎಣಿಸುತ್ತಿದ್ದಾರಂತೆ!

ಚಿತ್ರದ ಘೋಷಣೆಯಂತೆ ಇದು 'One Man Show'. ರಜನಿಕಾಂತೇ ಆಕರ್ಷಣೆಯ ಕೇಂದ್ರ ಬಿಂದು. ಚಿತ್ರದ ತುಂಬಾ ಅವರೇ ಆವರಿಸಿಕೊಂಡಿದ್ದಾರೆ. ಅವರನ್ನು ನೆಚ್ಚಿಬಂದ ಅಭಿಮಾನಿಗಳಿಗೆ ಅವರು 'ನಿರಾಸೆ ಮಾಡುವುದಿಲ್ಲ' - ಕುಣಿತ, ಬಡಿತ, ಸರಸ, ಹಾಸ್ಯ ಎಲ್ಲದಕ್ಕೂ ಸೈ! 57 ರ ಇಳಿವಯಸ್ಸಿನಲ್ಲೂ ಅವರ ಉತ್ಸಾಹ ಮೆಚ್ಚಬೇಕಾದ್ದೆ! ನಮ್ಮಲ್ಲಿನ ಅವರ ವಾರಗೆಯ ನಾಯಕ ನಟರು ನೇಪಥ್ಯಕ್ಕೆ ಸರಿದಿದ್ದಾರೆ, ಇಲ್ಲವೇ ಜೋಲು ಮೋರೆ ಹಾಕಿಕೊಂಡು, ಉತ್ಸಾಹವೇ ಇಲ್ಲದವರಂತೆ ಸಂಕಟ ಪಟ್ಟುಕೊಂಡು ನಟಿಸುತ್ತಿದ್ದಾರೆ. ಬಣ್ಣ ಹಚ್ಚಿದ ಮೇಲೆ ಲವಲವಿಕೆಯಲ್ಲಿ ಮದುವೆ ಗಂಡೇ ಆಗಿಬಿಡುತ್ತಾರೆ ರಜನಿ!

ರಜನಿಯ ಆಕರ್ಷಣೆ ಮತ್ತು ವೇಗದ ನಿರೂಪಣೆಯಿಂದಾಗಿ ಚಿತ್ರದ ಕಥೆ ನೋಡುಗರಿಗೆ ಪ್ರಮುಖವಾಗುವುದೇ ಇಲ್ಲ. ಆದರೆ ನಿರ್ದೇಶಕ ಶಂಕರ್ ಭ್ರಷ್ಟಾಚಾರದ ಬಗೆಗಿನ ತಮ್ಮ ನಿಲುವನ್ನು ಮತ್ತೆ ಮತ್ತೆ ಪ್ರೇಕ್ಷಕರ ಮೇಲೆ ಹೇರಲು ಹೊರಟಿದ್ದಾರೆನಿಸುತ್ತದೆ. ಚಿತ್ರಜಗತ್ತಿನಲ್ಲಿ ಒಂದೇ



ವಿಷಯವನ್ನಿಟ್ಟುಕೊಂಡು ನಾಲ್ಕಾರು ಸಿನಿಮಾ ತೆಗೆದ ನಿರ್ದೇಶಕರು ಬೇರಲ್ಲೂ ಕಾಣಸಿಗರು, ಹಾಗೇನಾದರೂ ಇದ್ದರೆ ಅದು ಶಂಕರ್ ಮಾತ್ರ!.

ನಮ್ಮ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರದ ಬಗೆಗಿನ ಅವರ ಕ್ರೋಧ ಸಹಜವಾದುದೇ. ಆದರೆ ಅದಕ್ಕೆ ಅವರು ನೀಡುವ ಪರಿಹಾರ ಭಯಂಕರವಾದುದು! ಭ್ರಷ್ಟಾಚಾರದ ವಿಷಯವನ್ನು ಫ್ಯಾಂಟಸಿ ಕಥೆಯನ್ನಾಗಿಸುತ್ತಿದ್ದಾರೆ ಶಂಕರ್. ರಾಕ್ಷಸನ ಕೈಯಲ್ಲಿ ಸಿಲುಕಿದ ರಾಜಕುಮಾರಿ, ಅವಳನ್ನು ರಕ್ಷಿಸಲು ಬರುವ ಯಾವುದೋ ದೇಶ ರಾಜಕುಮಾರ ತನ್ನ ಅತೀಂದ್ರಿಯ ಶಕ್ತಿಗಳಿಂದ ರಾಕ್ಷಸನನ್ನು ಸಂಹರಿಸಿ, ರಾಜಕುಮಾರಿಯನ್ನು ರಕ್ಷಿಸುವ ಕಥೆಗಳಂತಿದೆ ಶಂಕರ್ ಸಿನಿಮಾಗಳು. ಅದಕ್ಕೆ ಪೂರಕವಾಗಿ ಅತಿಯೆನಿಸುವ ಗ್ರಾಫಿಕ್ ಬಳಕೆ ಭ್ರಮಾಲೋಕಕ್ಕೆ ಪ್ರೇಕ್ಷಕನ್ನು ಒಯ್ಯುತ್ತವೆ.

ಶಂಕರ್ ಅವರ ಎಲ್ಲಾ ಚಿತ್ರಗಳಲ್ಲೂ ಭ್ರಷ್ಟಾಚಾರದ ವಿರುದ್ಧ ನಾಯಕರು ಏಕಾಂಗಿಯಾಗಿಯೇ ಹೋರಾಡುತ್ತಾರೆ ಮತ್ತು ಅವರು ಅಸಮಾನ್ಯ ಶೂರರಾಗಿರುತ್ತಾರೆ, ಅವರಿಗೆ ಯಾರ ಸಹಾಯವೂ ಬೇಕಿಲ್ಲ. ಭ್ರಷ್ಟಾಚಾರದ ವಿರುದ್ಧ ಹೋರಾಟವೆಂದರೆ ಮತ್ತೇನೂ ಅಲ್ಲ, ಭ್ರಷ್ಟಾಚಾರಿಗಳನ್ನು ನಿರ್ದಯಾವಾಗಿ ಕೊಲ್ಲುವುದು - ಅಲ್ಲಿಗೆ ಮುಗಿಯಿತು ಭ್ರಷ್ಟಾಚಾರ ನಿರ್ಮೂಲನೆಯಾಯಿತು!. ಇದೇ ಶಂಕರ್ ಅವರು ಪ್ರತಿಚಿತ್ರದಲ್ಲೂ ಭ್ರಷ್ಟಾಚಾರಕ್ಕೆ ನೀಡುವ ಪರಿಹಾರ!

ಈಗ 'ಶಿವಾಜಿ'ಯದ್ದೂ ಅದೇ ಕಥೆ! ವಿದೇಶದಲ್ಲಿ ಸಂಪಾದಿಸಿದ ಹೇರಳವಾದ ಹಣವನ್ನು ಇಲ್ಲಿನ ಬಡಜನತೆಯ ಶಿಕ್ಷಣಕ್ಕಾಗಿ ವಿನಿಯೋಗಿಸಲು ಕಾಲೇಜನ್ನು ಸ್ಥಾಪಿಸಲು ಮುಂದಾಗುತ್ತಾನೆ ಶಿವಾಜಿ. ಪ್ರತಿ ಹಂತದಲ್ಲೂ ಆತನಿಗೆ ಅಡ್ಡಿ ಆತಂಕಗಳು ಎದುರಾಗುತ್ತವೆ. ಆಡಳಿತಶಾಹಿಯ ಭ್ರಷ್ಟಾಚಾರ, ಡೋನೇಷನ್ ಮಾಫಿಯಾಗಳು ಅವನ ಆಸೆಯನ್ನು ಮಣ್ಣುಪಾಲು ಮಾಡುತ್ತವೆ. ಕ್ಯೋಟ್ಯಾಧಿಪತಿಯಾದ ಶಿವಾಜಿ ಜನಪರ ಕೆಲಸಕ್ಕೆ ಕೈ ಹಾಕಿ ಬಿಕಾರಿಯಾಗುತ್ತಾನೆ. ಆದರೆ ಆತನೇನೂ ಸಾಮಾನ್ಯನಲ್ಲ, ಭ್ರಷ್ಟಾಚಾರದ ವಿರುದ್ಧ ಸೆಡ್ಡುಹೊಡೆದು ನಿಲ್ಲುತ್ತಾನೆ. ಅಂತಿಮವಾಗಿ ತನ್ನ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳುತ್ತಾನೆ. ಇಲ್ಲೂ ಶಿವಾಜಿಯೇನೂ ನ್ಯಾಯಯುತ ಮಾರ್ಗದಲ್ಲೇನೂ ನಡೆಯುವುದಿಲ್ಲ. ಆತನ ಮಾರ್ಗವೂ ದುಮಾರ್ಗವೇ! ಗೂಂಡಾಗಿರಿ, ವಂಚನೆ, ಬ್ಲ್ಯಾಕ್‌ಮೇಲ್ ಈ ಎಲ್ಲಾ ತಂತ್ರಗಳೂ ಉಂಟು.

ವ್ಯಕ್ತಿಗತ ದುಸ್ಸಾಹಸಗಳಂದ ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯವಿಲ್ಲ. ನಮ್ಮ ಸಾಮಾಜಿಕ, ಆರ್ಥಿಕ, ರಾಜಕೀಯ ವ್ಯವಸ್ಥೆ ಹಾಗೂ ನೀತಿಗಳಿಗೂ ಭ್ರಷ್ಟಾಚಾರಕ್ಕೂ ನೇರ ಸಂಬಂಧವಿದೆ. ಭ್ರಷ್ಟಾಚಾರ ಬೇರುಗಳು, ಒಟ್ಟು ಸಮಾಜದ ಹಿತಾಸಕ್ತಿ ವಿರುದ್ಧವಾಗಿ ಖಾಸಗಿ ಆಸ್ತಿಯನ್ನು ತಮ್ಮ ಪೇರಿಸಿಕೊಳ್ಳುವ ತಹತಹವನ್ನು ಸೃಷ್ಟಿಸು ಅನೀತಿಯುತ ಪೈಪೋಟಿ, ಅಹಂಗಳನ್ನು ಬೆಳೆಸು ಈ ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಯಲ್ಲಿ ಈ ವ್ಯವಸ್ಥೆಯಲ್ಲಿ ಬದಲಾವಣೆ ಬರದೇ ಭ್ರಷ್ಟಾಚಾ ನಿರ್ಮೂಲನೆ ಸಾಧ್ಯವಿಲ್ಲ.

ಇದನ್ನೆಲ್ಲಾ 'ಶಿವಾಜಿ'ಯಂತಹ ಸಿನಿಮಾದ ನಿರೀಕ್ಷಿಸಿದರೆ ನಮ್ಮದೇ ನಿಜವಾದ ತಪ್ಪು!

ಅದೇ ರಾ[ಗ] ಅದೇ ಹಾಡು!

ಶಂಕರ್ ಅವರ ಮೊದ ಸಿನಿಮಾ 'ಜಂಟಲ್‌ಮನ್' ಆಡಳಿತಶಾಹಿಯ ಭ್ರಷ್ಟಚಾರದಿಂದಾ ಬಡವರಿಗೆ ಶಿಕ್ಷಣ ಸಿಗದೇ, ನಾಯಕ ಅವರಿ ಶಿಕ್ಷಣ ನೀಡುವ ಸಲುವಾಗಿ ಕಾಲೇಜ ಕಟ್ಟಲೆಂದು ಸರ್ಕಾರಿ ಖಜಾನೆಯನ್ನೇ ಲೂ ಮಾಡುತ್ತಾನೆ, ಅಡ್ಡಬಂದವರನ್ನು ನಿರ್ದಯವಾ ಸಂಹರಿಸುತ್ತಾನೆ. ನಂತರದ ಸಿನಿಮಾ 'ಇಂಡಿಯನ್' ಸ್ವಾತಂತ್ರ್ಯ ಯೋಧನೊಬ್ಬ ಇಂದಿನ ಭ್ರಷ್ಟ ವ್ಯವಸ್ಥೆಯನ್ನ ನೋಡಿ, ತನ್ನದೇ ಶೈಲಿಯಲ್ಲಿ ಒಬ್ಬೊಬ್ಬರನ್ನ ಕೊಲ್ಲುತ್ತಾನೆ, ಕೊನೆಗೆ ಭ್ರಷ್ಟಾಚಾರದಲ್ಲಿ ಪಾಲ್ಗೊಂ ತನ್ನ ಮಗನನ್ನೂ ಅವನು ಉಳಿಸುವುದಿಲ್ಲ. ನಂತ 'ಮುದಲವನ್' ಸಿನಿಮಾ. ಭ್ರಷ್ಟಾಚಾರದಲ್ಲಿ ನಿರತನಾ ಮುಖ್ಯಮಂತ್ರಿಯೊಬ್ಬನ್ನು ಪತ್ರಕರ್ತನೊಬ್ಬ ಸಂದರ್ಶನದ ಆ ಬಗ್ಗೆ ಪ್ರಶ್ನಿಸಿದಾಗ, ಒಂದು ದಿನದ ಮಟ್ಟಿ ಮುಖ್ಯಮಂತ್ರಿಯಾಗಿ ಆಡಳಿತ ನಿರ್ವಹಿಸಲು ಚಾಲೆಂಜ ಮಾಡುತ್ತಾನೆ ಮುಖ್ಯಮಂತ್ರಿ. ಒಂದೇ ದಿನದಲ್ಲಿ ಪತ್ರಕರ್ತ ಅಸಮಾನ್ಯ ರೀತಿಯಲ್ಲಿ ಭ್ರಷ್ಟಾಚಾರವನ್ನು ಮೆಟ್ಟಿನಿಲ್ಲುತ್ತಾನ 'ಅನಿಯನ್' ಚಿತ್ರದಲ್ಲಿನ ನಾಯಕ ಮುಗ್ಧ, ಬಡಿದಾಡಬಲ ಶೂರನೇನಲ್ಲ. ಆದರೆ ಸಮಾಜದಲ್ಲಿನ ಭ್ರಷ್ಟಾಚಾರವನ ಸಹಿಸಿಕೊಳ್ಳಲು ಅವನಿಗೆ ಸಾಧ್ಯವಾಗುವುದಿಲ್ಲ. ತನ ಇನ್ನೊಂದು ರೂಪವನ್ನು ಆವಾಹಿಸಿಕೊಳ್ಳುತ್ತಾನೆ. ರೂಪದ ವ್ಯಕ್ತಿ ಅಸಮಾನ್ಯ ಶೂರ. ಭ್ರಷ್ಟರನ ನಿರ್ದಯವಾಗಿ ಕೊಲ್ಲುತ್ತಾ ಸಾಗುತ್ತಾನೆ. ಈ ರೀತಿಯ ದ್ವಿಮುಖಿ ವ್ಯಕ್ತಿತ್ವಕ್ಕೆ 'ಸ್ಪ್ಲಿಟ ಪರ್ಸನಾಲಿಟಿ' ಎಂದು ವೈದ್ಯಕೀಯ ಕ್ಷೇತ್ರದಲ ಇಲ್ಲದ ಉದಾಹರಣೆಯನ್ನು ನೀಡುತ್ತಾರ ನಿರ್ದೇಶಕರು.

ಅಸ್ಪೃಶ್ಯತಾ ನಿವಾರಣೆಗಾಗಿ ಚಿಂತನಾ ದ ಕಲಾ ಜಾಥಾ

ಪ್ರೀತಿ ಹಂಚೋಣ ಬನ್ನಿ....

ಸ್ಪರ್ಶ ಒಂದು ಭಾಷೆ. ಮನುಷ್ಯ ಸಂವಹನದ ಉನ್ನತ ಮಾಧ್ಯಮ ಅಂತಹ ಭಾಷೆಯನ್ನೇ ಮನುಷ್ಯನ ಮಧ್ಯೆ ನಿರಾಕರಿಸುವ ಅಸ್ಪೃಶ್ಯತೆ ಈ ದೇಶದ ಒಂದು ಶಾಪ ಎಂಬುದಾಗಿ ಮಹಾತ್ಮಗಾಂಧಿ ಸಾರಿದ್ದರು. ಸ್ವಾತಂತ್ರ್ಯ ಸಿಕ್ಕಿ 60 ವರ್ಷ ಗತಿಸಿದರೂ ಈ ಸಮಸ್ಯೆ ಸಂಪೂರ್ಣ ನಿವಾರಣೆ ಆಗಿಲ್ಲ. ಬೇರೆ ಬೇರೆ ಸ್ವರೂಪದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಿದೆ. ಅದನ್ನು ನಿವಾರಿಸುವ ನಿಟ್ಟಿನಲ್ಲಿ, ಜನತೆಯಲ್ಲಿ ಅರಿವನ್ನು ಮೂಡಿಸುವ ಉದ್ದೇಶದಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ಅಸ್ಪೃಶ್ಯತಾ ನಿವರಣಾ ಸಾಂಸ್ಕೃತಿಕ ಜಾಥಾ ಹಮ್ಮಿಕೊಳ್ಳಲಾಗಿತ್ತು. 'ಪ್ರೀತಿ ಹಂಚೋಣ ಬನ್ನಿ' ಎನ್ನುವ ಘೋಷಣೆಯಡಿಯಲ್ಲಿ ಕಾರವಾರದಿಂದ ಪ್ರಾರಂಭವಾದ ಬೀದಿ ನಾಟಕ ಜಾಥಾ ಒಂದು ವಾರಗಳ ಕಾಲ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಕಾರ್ಯಕ್ರಮ ನೀಡಿ ಭಟ್ಕಳ ತಾಲ್ಲೂಕಿನ ಶಿರಾಲಿಯಲ್ಲಿ ಮುಕ್ತಾಯವಾಯಿತು.

ಸಮಾಜಕಲ್ಯಾಣ ಇಲಾಖೆ, ಜಿಲ್ಲಾ ಪಂಚಾಯತ್ ಪ್ರಯೋಜಿಸಿದ ಈ ಜಾಥಾವನ್ನು ಚಿಂತನ ರಂಗ ಅಧ್ಯಯನ ಕೇಂದ್ರ, ಹೊನ್ನಾವರ ಇವರು ನಿರ್ವಹಿಸಿದರು. 10 ಜನ ಕಲಾವಿದರನ್ನೊಳಗೊಂಡ ಚಿಂತನ ರಂಗ ಅಧ್ಯಯನ ಕೇಂದ್ರದ ತಂಡ ಬೀದಿ ನಾಟಕ, ಹಾಡು, ರೂಪಕ ಪೆಂಟಿಂಗ್ಸ್ ಪ್ರದರ್ಶನ, ಕರಪತ್ರ, ಭಾಷಣ ಸಂವಾದಗಳ ಮೂಲಕ ಅಸ್ಪೃಶ್ಯತೆಯ ಕಾರಣ, ಅವರ ನಿವಾರಣೆಗಿರುವ ಪರ್ಯಾಯ ಮಾರ್ಗಗಳು, ಅಸ್ಪೃಶ್ಯತೆಯ ನಿವಾರಣೆಯ ಹೆಸರಿನಲ್ಲಿ ನಡೆಯುತ್ತಿರುವ ಡೊಂಬರಾಟಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಗಂಭೀರ ಪ್ರಯತ್ನವನ್ನು ನಡೆಸಿತು.

ಕಲಾತ್ಮಕವಾಗಿ ಪ್ರಯೋಗಗೊಂಡ ಜಾಥಾದ ಪ್ರದರ್ಶನ ಎರಡು ನಾಟಕ, ಎರಡು ರೂಪಕ 5 ಹಾಡುಗಳನ್ನು ಒಳಗೊಂಡಿತ್ತು. ಮಧ್ಯ ಪ್ರವೇಶದ ಟಿಹತ್ತೀರಿನಲ್ಲಿ ದಲಿತ ಶಿಕ್ಷಕಿಯ ಮೇಲೆ ನಡೆದ ಅತ್ಯಾಚಾರದ ಸತ್ಯ ಘಟನೆಯನ್ನು ಆಧರಿಸಿದ 'ಹೀಗೊಂದು ಅತ್ಯಾಚಾರ' ನಾಟಕವನ್ನು ಎಸ್.ಆರ್.ರಮೇಶ ರಚಿಸಿದ್ದು, ಶ್ರೀಪಾದ ಭಟ್ ಅವರು ನಿರ್ದೇಶಿಸಿದ್ದರು. ಕುಲಜಾತಿಯ ಹೆಸರಿನಲ್ಲಿ



ಅವಕಾಶಗಳನ್ನು ನಿರಾಕರಿಸುವ ಘಟನೆಯನ್ನು ಆಧರಿಸಿದ 'ಯಾವ ಕುಲವಯ್ಯ' ನಾಟಕವನ್ನು ದಾಮೋದರ ನಾಯ್ಕ ನಿರ್ದೇಶಿಸಿದ್ದರು. ಸಿದ್ದಲಿಂಗಯ್ಯನವರ 'ಉತ್ತರ ದಿಕ್ಕಿನ ರಾಣಿ' ಕವನವನ್ನು ಜೀವ ವಿಮುಕ್ತಿಯ ಆಶಯವ ರೂಪಕವನ್ನಾಗಿಸಿದ್ದು ಶ್ರೀಪಾದ ಭಟ್, ಅದನ ಕಿರಣಭಟ್ ನಿರ್ದೇಶಿಸಿದ್ದರು. 'ಬಿದಿರು ಕವನವನ್ನು ಶ್ರೀ ಪಾದ ಭಟ್ಟ ದೃಶ್ಯಕ ಅಳವಡಿಸಿದ್ದರು.

ದೇಶ ಕಟ್ಟೋರು ಯಾವ ಕುಲವಯ್ಯ, ಬೆವರನ ಸುರಿಸಿ ನಾವು ದುಡಿಯುವ ಜನ, ನಾವೆಲ್ಲ ಒಂದು ಸೃಷ್ಟಿಯ ಚಲನ, ಜಣ್ಣಜಣ ಕಾಂಚಾಣ, ನೆಲದ ಹಾಳೆಯಲಿ....ಮುಂತಾದ ಹಾಡುಗಳನ್ನ ಭಗೀರಥ್‌ನಾಯ್ಕ ಮತ್ತು ಗೀತಾ ನಾಯಕ ಸೂಳ್ಯ ಇವರು ಪ್ರಸ್ತುತ ಪಡಿಸಿದರು.

ರಂಗ ವಿನ್ಯಾಸ, ಪರಿಕರಗಳನ್ನ ದಾಮೋದರನಾಯ್ಕ ಸಿದ್ಧಪಡಿಸಿದ್ದರು.

ಜಾಥಾದ ತಿರುಗಾಟದುದ್ದಕ್ಕೂ ಜಾಥಾದ ಉದ್ದೇಶ, ಆಶಯದ ಕುರಿತು ಯಮುನಾ ಗಾಂವ್ಕರ್ ಮತ್ತು ವಿಠಲಭಂಡಾರಿ ಮಾತನಾಡಿದರು.

ಅಸ್ಪೃಶ್ಯತೆಯ ನಿವಾರಣೆಗೆ ಆರ್ಥಿಕ ಶೋಷಣೆ ಅಸಮಾನತೆಯ ವಿರುದ್ಧದ ಹೋರಾಟ ಸಾಮಾಜಿಕ ಅಸಮಾನತೆ, ತಾರತಮ್ಯದ ವಿರುದ್ಧ ಹೋರಾಟ ಎರಡೂ ಏಕಕಾಲಕ್ಕೆ ನಡೆಯಬೇಕೆಂದು ವಿವರಿಸಿದರು.

ಯಮುನಾ ಗಾಂವ್ಕಾರ್, ಕಾರವಾರ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor: S.Y.GURUSHANTH